ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಅಕ್ಟೋಬರ್ 20, 2010 ರೂ. 12/-



ಎಕ್ಕಾ ಎದ್ದ ಎಂದಿರನ್



ಸೋಮಣ್ಣ ಎಂಬ ಶನಿ ತೆರೆಮರೆಯಲ್ಲಿ ನಡೆದಿದ್ದೇನು?

ದಿನಾ ಸಾಯೋರಿಗೆ ಅಳೋರ್‍ಯಾರು?

ಕಲಾಸಿಪಾಳ್ಯ ಮಾರ್ಕೆಟ್ ವೇದಿಗೆ ಮತ್ತೊಂದು ಬಲಿ

ಮೈಸೂರು ಅಪ್ಪಾ ಮಾದೇಶ ಬಂಟನ ಹತ್ಯೆ

ಉಡುಪಿ ಅಷ್ಟ ಮಠಾಧೀಶರಿಗೆ ಕೃಷ್ಣ ದೇಗುಲ

ಾಬ್ರಿ ಮಸೀದಿ ಕೆಡವಿದ ನ್ಯಾಯ ಮಂದಿರ



ಅಯೋಧ್ಯೆ ತೀರ್ಪು

ಮಸೀದಿ ಕೆಡವಿದ ನ್ಯಾಯ 'ಮಂದಿರ'

• ಶಿವಸುಂದರ್
shivasundar35@gmail.com

ಬಾಬ್ರಿ ಮಸೀದಿ-ರಾಮಜನ್ಮಭೂಮಿ ವಿವಾದದ ತೀರ್ಪನ್ನು ಕೊನೆಗೂ ಸೆಪ್ಟೆಂಬರ್ 30ರಂದು ಅಲಹಾಬಾದ್ ಹೈಕೋರ್ಟಿನ ಲಖನೌ ವಿಭಾಗದ ತ್ರಿಸದಸ್ಯ ಪೀಠ ನೀಡಿದೆ. "ತೀರ್ಪು ಯಾರ ಪರವಾಗಿದ್ದರೂ ಪರವಾಗಿಲ್ಲ ನ್ಯಾಯದ ಪರವಾಗಿದ್ದರೆ ಸಾಕು" ಎನ್ನುವ ಕೆಲವರ ನಡುವೆ "ತೀರ್ಪು ಹೇಗೇ ಬಂದರೂ ದೇಶದ ಶಾಂತಿ ಕದಡಿ ಮತ್ತೆ ರಕ್ತಪಾತ ಆಗದಿದ್ದರೆ ಸಾಕು" ಎಂಬ ಆತಂಕವೇ ದೇಶದ ಪ್ರಧಾನವಾದ ಮೂಡ್ ಆಗಿತ್ತು. ಅದಕ್ಕೆ ತಕ್ಕಂತೆ ತೀರ್ಪು ಬರುವ ಕೆಲದಿನಗಳ ಮುಂಚೆಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಹಲವಾರು ಕ್ರಮಗಳಿಂದ ಹುಟ್ಟಿಸಿದ ಭೀತಿಯೂ ಸಹ ಸೆಪ್ಟೆಂಬರ್ 30ರಂದು ಏನಾಗಬಹುದು ಎಂಬ ಆತಂಕವನ್ನು ಹೆಚ್ಚಿಸಿತ್ತು. ಸೆ. 30ರ ಮಧ್ಯಾಹ್ನದ 3.30ರ ವೇಳೆಗೆ ಇಡೀ ದೇಶವೇ ಕರ್ಫ್ಯೂ ವಿಧಿಸಿದಂತೆ ಸ್ತಬ್ಧಗೊಂಡಿತು.

ಲಖನೌ ಪೀಠ ತನ್ನ ತೀರ್ಪಿನ ಪೂರ್ಣಪಾಠವನ್ನು ಓದುವ ಮುಂಚೆಯೇ ಸಂಘಪರಿವಾರದ ವಕೀಲರು ಮಾಧ್ಯಮದ ಬಳಿಗೆ ಓಡಿಬಂದು ತೀರ್ಪು ಹಿಂದೂತ್ವವಾದಿಗಳ ಪರ ಇದೆ ಎಂದು ಘೋಷಿಸಿದರು. "ವಿವಾದಿತ" ಜಾಗವನ್ನು ಮೂರು ಪಾಲು ಮಾಡಿ ಅದರಲ್ಲಿ ಒಂದು ಭಾಗವನ್ನು ಮಾತ್ರ ಮುಸ್ಲಿಮರಿಗೆ ಕೊಡಲಾಗಿದೆ ಎಂದು ಅವರು ಸ್ಪಷ್ಟವಾಗಿ ಹೇಳುತ್ತಿದ್ದರೂ ಮಾಧ್ಯಮಗಳು ಮಾತ್ರ ಎಲ್ಲರಿಗೂ ಸಮಪಾಲು ನೀಡಿ ನ್ಯಾಯಾಲಯ ಶಾಂತಿ ಕಾಪಾಡಿತು ಎಂದು ಬಿತ್ತರಿಸಲು ಪ್ರಾರಂಭಿಸಿದವು. ತೀರ್ಪು ಏನೇ ಬಂದರೂ ವಿಜಯೋತ್ಸವವಾಗಲೀ, ಪ್ರತಿಭಟನೆಯಾಗಲೀ ಮಾಡಬಾರದೆಂದು ಪೊಲೀಸ್ ಇಲಾಖೆ ಆದೇಶ ಹೊರಡಿಸಿದ್ದರೂ ಮೊದಲೇ ಯೋಜನೆ ಮಾಡಲಾಗಿತ್ತೋ ಎಂಬಂತೆ ತೀರ್ಪು ಬಂದ ಒಂದೇ ಗಂಟೆಯೊಳಗೇ ದೇಶದ ಹಲವು ಕಡೆ ಸಂಘಪರಿವಾರದ ಸಂಸ್ಥೆಗಳು ವಿಜಯೋತ್ಸವ ನಡೆಸಿದವು. ಕರ್ನಾಟಕದಲ್ಲೂ ಮಂಗಳೂರು, ಕೊಡಗು ಇನ್ನಿತರ ಕಡೆಗಳಲ್ಲಿ ಸಂಘಪರಿವಾರ ಬಹಿರಂಗವಾಗಿ ಗುಂಪುಗೂಡಿ ಪಟಾಕಿ ಸಿಡಿಸಿ ವಿಜಯ ಆಚರಿಸಿತು. ಮುಖ್ಯಮಂತ್ರಿಗಳ ಜಿಲ್ಲೆಯಾದ ಶಿವಮೊಗ್ಗದಲ್ಲಂತೂ ಸಂಘಪರಿವಾರ ನಿಷೇಧಾಜ್ಞೆಯನ್ನೂ ಉಲ್ಲಂಘಿಸಿ ವಿಜಯೋತ್ಸವದ ಮೆರವಣಿಗೆ ನಡೆಸಿದರು! ಹೀಗೆ ಪೊಲೀಸರ ನಿಷೇಧಾಜ್ಞೆಯೂ ಸಹ ತೀರ್ಪಿನಂತೆ ಪಕ್ಷಪಾತಿಯಾಗಿತ್ತು. ಸಾರಾಂಶದಲ್ಲಿ ಅದು ಮುಸ್ಲಿಮರ ಕಣ್ಣೀರನ್ನೂ ಸಹ ನಿಷೇಧಗೊಳಿಸಿತು.

ಈಗ ತೀರ್ಪು ಬಂದು ವಾರ ಕಳೆದಿದೆ. ತೀರ್ಪಿನ ಎಲ್ಲಾ ವಿವರಗಳೂ ಈಗ ಲಭ್ಯವಾಗಿದೆ. ನ್ಯಾಯಮೂರ್ತಿಗಳಾದ ಅಗರ್‌ವಾಲ್, ಶರ್ಮಾ ಮತ್ತು ಎಸ್.ಯು. ಖಾನ್‌ಗಳನ್ನೊಳಗೊಂಡ ತ್ರಿಸದಸ್ಯ ಪೀಠ ನೀಡಿದ ತೀರ್ಪಿನ ಒಟ್ಟಾರೆ ಗಾತ್ರ ಹೆಚ್ಚೂಕಡಿಮೆ 10,000 ಪುಟಗಳಷ್ಟಿದೆ. ಇದರ ಅಷ್ಟೂ ವಿವರಗಳು ಈಗ ಇಂಟರ್‌ನೆಟ್‌ನಲ್ಲಿ ಲಭ್ಯವಿದೆ. ಅದಕ್ಕೆ ಪೂರಕವಾಗಿ ಅವರು ಪರಾಂಬರಿಸಿರುವ ಸಾಕ್ಷಿಗಳು ಮತ್ತು ಪುರಾವೆಗಳು ಒಟ್ಟು ರಾಶಿ ಒಂದು ಲಕ್ಷ ಪುಟಗಳಷ್ಟಿದೆ. ಹೀಗಾಗಿ ತಿ ರ್ಪಿನ ಬಗ್ಗೆ ಯಾವುದೇ ವ್ಯಕ್ತಿನಿಷ್ಠ ಅಭಿಪ್ರಾಯಗಳಿಗೆ ಬರಲು ಅವಕಾಶವೇ ಇಲ್ಲದಂತೆ ತೀರ್ಪಿನ ತಾತ್ಪರ್ಯ ಮತ್ತು ಆ ಬಗೆಯ ತೀರ್ಪು ನೀಡಲು ಕೋರ್ಟು ಪರಿಗಣಿಸಿದ ಅಂಶಗಳು ಈಗ ಬಹಿರಂಗವಾಗಿ ಲಭ್ಯವಾಗಿದೆ.

ಮೇಲ್ನೋಟಕ್ಕೆ ಈ ತೀರ್ಪಿನ ಬಗ್ಗೆ ಕೆಲವು ಅಂಶಗಳು ಸ್ಪಷ್ಟಗೊಳ್ಳುತ್ತದೆ. ಮೊದಲನೆಯದಾಗಿ ಈ ತೀರ್ಪು ಸಾಕಷ್ಟು ಸಾಕ್ಷಿ ಪುರಾವೆಗಳಿದ್ದರೂ ಮಸೀದಿಯ ಮೇಲೆ ಮುಸ್ಲಿಮರಿಗಿದ್ದ ಎಲ್ಲಾ ಹಕ್ಕುಗಳನ್ನೂ ನಿರಾಕರಿಸುತ್ತದೆ. ಎರಡನೆಯದಾಗಿ ಯಾವುದೇ ಸಾಕ್ಷಿಪುರಾವೆಗಳಿಲ್ಲದಿದ್ದರೂ ಹಿಂದೂಗಳು ಈವರೆಗೆ ಆ ಜಾಗ ತಮಗೇ ಸೇರಬೇಕೆಂದು ಮಾಡಿಕೊಂಡುಬಂದಿದ್ದ ಎಲ್ಲಾ ಅಸಂಬದ್ಧ ವಾದಗಳನ್ನು ಎತ್ತಿಹಿಡಿಯುತ್ತದೆ. ಆದರೂ ಕೊನೆಗೆ ಔದಾರ್ಯದಿಂದ ಮೂರನೇ ಒಂದು ಭಾಗದಷ್ಟು ಜಾಗವನ್ನು ಮುಸ್ಲಿಮರಿಗೆ ಕೊಟ್ಟು ರಾಜಿ-ಕಬೂಲಿಗೆ ಯತ್ನಿಸಿದೆ. ಅಂದರೆ ನ್ಯಾಯಾಲಯವು ನ್ಯಾಯ ಮತ್ತು ನ್ಯಾಯಸೂತ್ರಗಳಿಗಿಂತ ಹೆಚ್ಚಾಗಿ ನ್ಯಾಯಬದ್ಧ ತೀರ್ಪು ಮಾಡಬಹುದಾದ ಪರಿಣಾಮವನ್ನು ಪರಿಗಣಿಸಿ ನ್ಯಾಯ ಪ್ರಕ್ರಿಯೆ ಜೊತೆ ರಾಜಿ ಮಾಡಿಕೊಂಡಿದೆ. ಇದು ಸ್ಪಷ್ಟವಾಗಿ ವ್ಯಕ್ತವಾಗಿರುವುದು ಮುಸ್ಲಿಮರಿಗೂ ಮೂರನೇ ಒಂದು ಪಾಲನ್ನು ಕೊಟ್ಟಿರುವುದರಲ್ಲಲ್ಲ, ಬದಲಿಗೆ ಹಿಂದೂತ್ವವಾದಿಗಳ ಎಲ್ಲಾ ವಾದಗಳನ್ನು ಯಾವುದೇ ಸಾಕ್ಷಿ ಪುರಾವೆಗಳ ಮತ್ತು ಕಾನೂನು ಮಾನದಂಡಗಳಿಲ್ಲದೆ ಒಪ್ಪಿಕೊಂಡಿರುವುದರಲ್ಲಿ ಇದು ಸ್ಪಷ್ಟಗೊಳ್ಳುತ್ತದೆ. ಹೀಗಾಗಿ ಈ ತೀರ್ಪಿನ ಹಿಂದೆ 1992ರ ಭೂತ ನ್ಯಾಯಾಲಯದ ಬೆನ್ನು ಹತ್ತಿರುವುದು ಎದ್ದು ಕಾಣುತ್ತದೆ.


ಈ ದೇಶದ ಸಾಮಾನ್ಯ ಜನ ತೀರ್ಪಿನ ಬಗ್ಗೆ ನಿರಾಳದ ನಿಟ್ಟುಸಿರನ್ನು ಎಳೆದಿರುವುದರಲ್ಲಿ ಆಶ್ಚರ್ಯವಿಲ್ಲ. ಈ ದೇಶದ ಜನರಿಗೆ ಬಾಬ್ರಿ ಮಸೀದಿ-ರಾಮಜನ್ಮಭೂಮಿ ಎಂದರೆ ಜ್ಞಾಪಕಕ್ಕೆ ಬರುವುದು ರಾಮನೂ ಅಲ್ಲ, ಅಲ್ಲಾಹೂನೂ ಅಲ್ಲ, ಬದಲಿಗೆ ಜ್ಞಾಪಕಕ್ಕೆ ಬರುವುದು ಆ ರಕ್ತಸಿಕ್ತ 90 ರ ದಶಕಗಳು. ಸಂಘಪರಿವಾರ ದೇಶಾದ್ಯಂತ ಹುಟ್ಟುಹಾಕಿದ ಕೋಮುಗಲಭೆಗಳ ಭೀಭತ್ಸಗಳು. ಹೀಗಾಗಿ ಹೇಗೋ ತೀರ್ಪು ಅಂಥಾ ಒಂದು ಬಂದು ಒಟ್ಟಿನಲ್ಲಿ ಮತ್ತೆ ಗಲಭೆಗಳಾಗಿ ರಕ್ತಪಾತವಾಗದಿದ್ದರೆ ಸಾಕು ಎಂಬುದೇ ಈ ದೇಶದ ಜನಸಾಮಾನ್ಯರೆಲ್ಲರ ಆಶಯವಾಗಿದೆ. ಜನರ ಈ ಆತಂಕವೇ ಕೋಮುವಾದಿಗಳ ಬಂಡವಾಳ. ತೀರ್ಪು ಏನೇ ಬಂದರೂ "ಮಂದಿರ್ ವಹೀ ಬನಾಯೇಂಗೇ" ಎಂದು ಸಂಘಪರಿವಾರ ಇಡೀ ದೇಶಕ್ಕೆ ಮತ್ತು ಸಂವಿಧಾನ ಹಾಗೂ ಕಾನೂನುಬದ್ಧ ಆಡಳಿತಕ್ಕೆ ಮೊದಲಿಂದಲೂ ಸವಾಲನ್ನು ಹಾಕಿಕೊಂಡು ಬಂದಿದೆ. ಇದು ಜನಸಾಮಾನ್ಯರಲ್ಲಿ ಆತಂಕವನ್ನು ಉಂಟು ಮಾಡಿದ್ದರೆ ಇಂಥಾ ಒಂದು ಕ್ರಮ

ಈ ದೇಶದ ಘನತೆವೆತ್ತ ನ್ಯಾಯಾಧೀಶರುಗಳು ತೀರ್ಪನ್ನೂ ಮತ್ತು ನ್ಯಾಯಾ[...] ಅನುಸರಿಸಿರುವ ನ್ಯಾಯಿಕ ಮಾನದಂಡಗಳನ್ನೂ ಸಾರಾಸಗಟು ಟೀಕೆ ಮಾಡಿ[...] ಅತ್ಯಂತ ದುರದೃಷ್ಟಕರವೆಂದು ಬಣ್ಣಿಸಿದ್ದಾರೆ. ಆದರೂ ಕೆಲವು ಪ[...] ಉದಾರವಾದಿಗಳು ಹಾಗೂ ಕೆಲವು ಪ್ರಮುಖ ಎಡ ಮತ್ತು ನಡುಪಂಥೀ[...] ಈ ತೀರ್ಪನ್ನು ಐತಿಹಾಸಿಕ ಮತ್ತು ಅತ್ಯಂತ ಸ್ವಾಗತಾರ್ಹವೆಂದೆಲ್ಲಾ ಹಾಡಿಹೊ[...] ದ್ದಾರೆ. ಇದಕ್ಕೂ ಕಾರಣ ಕೋಮುವಾದಿಗಳು ತಮ್ಮ ಸತತ ಆಕ್ರಮಣಗ[...] ಪ್ರಗತಿಪರರಲ್ಲಿ ಸೃಷ್ಟಿಸಿರುವ ದಣಿವು ಮತ್ತು ಹತಾಶೆ. ನ್ಯಾಯವೋ ಅನ್ಯಾಯ[...] ಒಟ್ಟಿನಲ್ಲಿ ಶಾಂತಿ ಸ್ಥಾಪನೆಯಾದರೆ ಸಾಕೆಂಬ ಸಿನಿಕತನದ ತರ್ಕಗಳು. ಅಂಥ[...] ಈಗ 'ಅಲ್ಲಿ ರಾಮಮಂದಿರ-ಮಸೀದಿ ಎರಡು ತಲೆ ಎತ್ತಲಿ. ಶಾಂತಿ ಮು[...] ಇತ್ಯಾದಿ ಬಡಬಡಿಸಿದ್ದಾರೆ. ಆದರೆ ಅಂಥಾ ಸಾಧ್ಯತೆಗೆ ಬೇಕಾದ ಕಾನ[...] ಬುನಾದಿಯನ್ನೇ ಈ ತೀರ್ಪು ಹೊಡೆದುಹಾಕಿದೆ ಎಂಬ ಕನಿಷ್ಠ ತಿಳಿವಳಿಕೆಯ[...] ಅವರು ಪರಿಗಣಿಸಲು ಸಿದ್ಧರಿಲ್ಲ. ಹೀಗಾಗಿ ಇಂಥಾ ರಾಜಿ-ಕಬ[...] ಸೆಕ್ಯುಲಾರ್‌ವಾದಿಗಳ ನಿಜ ಉದ್ದೇಶ ಶಾಂತಿಯೇ ಆದರೂ ಅವರ ಈ ನ್ಯಾ[...] ರಹಿತಶಾಂತಿಯ ನಿಲುವು ಸಾರಾಂಶದಲ್ಲಿ ಸದ್ಯಕ್ಕೂ ಮತ್ತು ಶಾಶ್ವತಕ್ಕೂ ಅಶಾಂ[...] ಮತ್ತು ಕೋಮುಗಲಭೆಗಳಿಗೆ ಬೇಕಾದ ಭ್ರೂಣವನ್ನು ಹೊತ್ತುಕೊಂಡಿದೆ.

ಹೀಗಾಗಿ ನ್ಯಾಯ, ಸಂವಿಧಾನ, ಸಾಕ್ಷಿ, ಪುರಾವೆ, ಸೆಕ್ಯುಲಾರಿ[...] ಮಾನದಂಡಗಳನ್ನು ಅನುಸರಿಸಿ ಈ ತೀರ್ಪಿನ ಸರಿಯಾದ ವಿಶ್ಲೇಷಣೆ ಮ[...] ಸರ್ಕಾರ, ಸಮಾಜ ಮತ್ತು ನ್ಯಾಯಾಲಯಗಳು ಸರಿಯಾದ ನಿಲುವಿಗೆ ಬ[...] ಅಗತ್ಯವಿದೆ. ಸದರಿ ಲಖನೌ ಕೋರ್ಟಿನ ತೀರ್ಪಿನ ವಿಶ್ಲೇಷಣೆ ಮಾ[...] ಮುನ್ನ ಈ ವಿವಾದದ ಇತಿಹಾಸದ ಬಗ್ಗೆ ಮತ್ತು ಕೋರ್ಟಿನ ಮುಂ[...] ದಾವೆಗಳ ಸ್ವರೂಪದ ಬಗ್ಗೆ ಒಂದು ಸಣ್ಣ ಪರಿಚಯ.

ಬಾಬ್ರಿ ಮಸೀದಿ ರಾಮಜನ್ಮಭೂಮಿಯಾದದ್ದು

ಕ್ರಿ.ಶ. 1528ರಲ್ಲಿ ಬಾಬರ್ ಅಥವಾ ಬಾಬರ್‌ನ ಸಲಹೆಯ ಮೇ[...] ಅವನ ದಂಡನಾಯಕ ಮೀರ್ ಬಾಕಿ ಅಯೋಧ್ಯೆಯಲ್ಲಿ ಬಾಬರ್‌ನ ಹೆಸ[...] ಒಂದು ಮಸೀದಿಯನ್ನು ನಿರ್ಮಿಸಿದ. 1528ರ ನಂತರದ ಅವಧಿಯ[...] ಯಾವುದೋ ಒಂದು ಹಂತದಲ್ಲಿ ಅಲ್ಲಿ ಹಿಂದೂಗಳೂ ಸಹ ಅದೇ ಆವರಣ[...] ರಾಮನಿಗೆ ಪ್ರಾರ್ಥನೆ ಸಲ್ಲಿಸಲು ಪ್ರಾರಂಭಿಸಿದರು. ಕೆಲವು ಹಿಂದೂ ಸಂಘಟನೆ[...] ಪ್ರಕಾರ ಅಲ್ಲಿ ಬಾಬ್ರಿ ಮಸೀದಿ ಕಟ್ಟುವ ಮುನ್ನ ದೇವಸ್ಥಾನವಿತ್ತು. ಕೆಲ[...] ಪ್ರಕಾರ 1776ರ ತನಕ ಅಲ್ಲಿ ಹಿಂದೂ ದೇವಸ್ಥಾನವಿತ್ತೆಂದಾಗಲಿ, ಅಲ್ಲಿ ಹಿಂದೂ[...] ಪೂಜೆ ಮಾಡುತ್ತಿದ್ದರೆಂಬ ಬಗ್ಗೆಯಾಗಲಿ ಯಾವುದೇ ಪುರಾವೆಯಿಲ್ಲ. 1855[...] ನಡೆದ ಕೋಮು ಗಲಭೆಯೊಂದರಲ್ಲಿ ಬಾಬ್ರಿ ಮಸೀದಿಯ ಮೇಲೂ ದ[...] ನಡೆಯಿತು. 1857ರಲ್ಲಿ ಹಿಂದೂ ಮತ್ತು ಮುಸ್ಲಿಮರಿಬ್ಬರೂ ಒಟ್ಟಾಗಿ ಬ್ರಿಟಿಷ[...] ಎದುರಿಸಿದರು. 1858ರಲ್ಲಿ ಬಾಬ್ರಿ ಮಸೀದಿಯ ಒಳ ಆವರಣದ ಸು[...]



ಮುಸ್ಲಿಮರಲ್ಲಿ ಶಾಶ್ವತವಾದ ಆಕ್ರೋಶವನ್ನು ಹುಟ್ಟುಹಾಕಿ ಶಾಶ್ವತ ಅಶಾಂತಿಗೆ ದಾರಿಮಾಡಿಕೊಡುತ್ತದೆ ಎಂಬ ಆತಂಕವೂ ಜನಸಾಮಾನ್ಯರಲ್ಲಿತ್ತು. ಹೀಗಾಗಿ ಲಖನೌ ತೀರ್ಪು ಆ ಜಾಗವನ್ನು ಮೂರು ಪಾಲು ಮಾಡಿ ಎಲ್ಲರಿಗೂ ಸಮನಾಗಿ ಹಂಚಿಬಿಟ್ಟಿದೆ ಎಂದಾಗ ಸಾಮಾನ್ಯರಿಗೆ ನೆಮ್ಮದಿ ಎನಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ದುರಾದೃಷ್ಟವೆಂದರೆ ಈ ತೀರ್ಪು ಮತ್ತು ಈ ತೀರ್ಪಿಗೆ ಬರಲು ನ್ಯಾಯಾಲಯ ಅನುಸರಿಸಿರುವ ವಿಧಾನ ಶಾಶ್ವತ ಶಾಂತಿಗೆ ದಾರಿ ಮಾಡಿಕೊಡುವ ಬದಲು ಇಂಥಾ ನೂರು ವಿವಾದಗಳನ್ನು ಮತ್ತು ಧಾರ್ಮಿಕ ಗಲಭೆಗಳನ್ನು ಸೃಷ್ಟಿಸಲು ಸಂಘಪರಿವಾರಕ್ಕೆ ದಾರಿಮಾಡಿಕೊಡುತ್ತದೆ. ಅದು ಹೇಗೆಂಬುದನ್ನು ನಂತರದ ವಿಶ್ಲೇಷಣೆಯಲ್ಲಿ ಗಮನಿಸೋಣ.

ಶಾಂತಿಯುತ ಸಹಬಾಳ್ವೆಯ ದೃಷ್ಟಿಯಿಂದ ಜನಸಾಮಾನ್ಯರು ಒಂದು ವಿವಾದದ ಬಗೆಗೆ ಮಾಡಿಕೊಳ್ಳುವ ಹತಾಶೆ ಮತ್ತು ನಿಸ್ಸಹಾಯಕ ತರ್ಕಗಳೇ ನ್ಯಾಯಾಲಯದ ಮತ್ತು ಕಾನೂನು ಪಂಡಿತರ ದೃಷ್ಟಿಯೂ ಆಗಿಬಿಟ್ಟರೆ! ಈ ತೀರ್ಪಿನ ನಂತರ ರಾಜೀವ್ ಧವನ್, ರಾಜೇಂದ್ರ ಸಚ್ಚಾರ್, ಕೃಷ್ಣ ಅಯ್ಯರ್‌ರಂಥ

ಬೇಲಿಯನ್ನು ಕಟ್ಟಿ ಒಳ ಆವರಣದಲ್ಲಿ ಮುಸ್ಲಿಮರ ಪ್ರಾರ್ಥನೆಗೂ, ಹೊ[...] ಆವರಣದಲ್ಲಿ ಹಿಂದೂಗಳ ಪೂಜೆಗೂ ಅವಕಾಶ ಕಲ್ಪಿಸಿಕೊಡಲಾಯಿತು. 1860[...] ಫೈಜಾಬಾದಿನ ಬ್ರಿಟಿಷ್ ತಹಶೀಲ್ದಾರ ಪ್ರಪ್ರಥಮ ಬಾರಿಗೆ ಬಾಬ್ರಿ ಮಸಿ[...] ಕಟ್ಟಿದ ಜಾಗದಲ್ಲಿ ರಾಮಮಂದಿರವಿತ್ತೆಂಬ ಪ್ರಸ್ತಾಪ ಮಾಡಿದ. 1870[...] ಕಾರ್ನೆಜಿಯೆಂಬ ಮತ್ತೊಬ್ಬ ಬ್ರಿಟಿಷ್ ಲೇಖಕಿ ಬಾಬ್ರಿ ಮಸೀದಿಯ ಕೆ[...] ರಾಮ ಮಂದಿರವಿರಬಹುದೆಂಬ "ಚರಿತ್ರೆ" ಬರೆದಳು.

1885ರಲ್ಲಿ ಪ್ರಥಮ ಬಾರಿಗೆ ಹಿಂದೂ ಸಂತರು ಬಾಬ್ರಿ ಮಸೀದಿ[...] ಹೊರ ಆವರಣದಲ್ಲಿ (ಚಬೂತರ್) ರಾಮ ಮಂದಿರ ನಿರ್ಮಾಣ ಮಾಡಿಕೊಳ್[...] ಫೈಜಾಬಾದ್ ಸಬ್ ಜಡ್ಜ್ ಎದುರು ಮತ್ತು ನಂತರದಲ್ಲಿ ಜಿಲ್ಲಾ ನ್ಯಾಯಾಲಯ[...] ಎದುರು ದಾವೆ ಹೂಡಿದರು. ಆದರೆ ಅಲ್ಲಿ ರಾಮಮಂದಿರವಿತ್ತೆಂಬು[...] ನಿಜವೇ ಆದರೂ ಈಗ 350 ವರ್ಷಗಳ ಕೆಳಗೆ ನಡೆದು ಹೋದ ಸಂಗ[...] ಈಗ ಇರುವ ಪರಿಸ್ಥಿತಿಯನ್ನು ಬದಲು ಮಾಡಲು ಬರುವುದಿಲ್ಲವೆಂ[...]

▶▶ 1[...]

> ಸಾಕ್ಷಿ, ಪುರಾವೆ ಮತ್ತು ಕಾನೂನುಗಳನ್ನೆಲ್ಲಾ ಪರಿಗಣಿಸದೆ ಕೇವಲ ಬಹುಸಂಖ್ಯಾತರೆಂದು ಹೇಳಿಕೊಳ್ಳುವವ[...] ಶ್ರದ್ಧೆ ಮತ್ತು ನಂಬಿಕೆಗಳೇ ನ್ಯಾಯ ತೀರ್ಮಾನದ ಮಾನದಂಡವಾಗಿಬಿಟ್ಟರೆ ಬಹುಸಂಸ್ಕೃತಿ ಮತ್ತು ಬಹು[...] ಧರ್ಮೀಯರ ದೇಶವಾದ ಈ ಭಾರತ ಒಂದು ದೇಶವಾಗಿ ಉಳಿಯಲು ಸಾಧ್ಯವೇ?

ಕಾಯುವವರೇ ಕೊಲ್ಲುವವರಾದರೆ, ನ್ಯಾಯಾಧೀಶರೇ ವಕೀಲರಾದರೆ?

ಈ ತೀರ್ಪು 1949ರಲ್ಲಿ ಗೂಂಡಾಗಿರಿ ಮಾಡಿ ಪ್ರತಿಮೆಗಳನ್ನು ತಂದಿಟ್ಟವರ ಹಕ್ಕುಗಳನ್ನೂ ಎತ್ತಿ ಹಿಡಿದಿದೆ. 1992ರಲ್ಲಿ ಬಾಬ್ರಿ ಮಸೀದಿ ಕೆಡವಿದವರನ್ನು ಶಿಕ್ಷಿಸುವ ಬದಲು ಸನ್ಮಾನಿಸಿದೆ. ಏಕೆಂದರೆ ಬಾಬ್ರಿ ಮಸೀದಿಯನ್ನು ತಾವು ನಾಶ ಮಾಡಲು ಕಾರಣ ಅಲ್ಲಿ ರಾಮ ಜನ್ಮ ತಳೆದಿದ್ದ ಮತ್ತು ರಾಮ ಮಂದಿರವನ್ನು ಕೆಡವಿಯೇ ಅಲ್ಲಿ ಬಾಬ್ರಿ ಮಸೀದಿಯನ್ನು ಕಟ್ಟಲಾಗಿದೆ ಎಂಬ ನಂಬಿಕೆಯಿಂದಲೇ ಎಂದು ಸಂಘಪರಿವಾರ ಹೇಳಿಕೊಂಡು ಬಂದಿದೆ. ಬಾಬ್ರಿ ಮಸೀದಿಯ ಮಧ್ಯ ಗುಮ್ಮಟವಿದ್ದ ಜಾಗದಲ್ಲೇ ರಾಮನು ಜನ್ಮ ತಳೆದಿದ್ದಾನೆಂಬುದು ತಮ್ಮ ನಂಬಿಕೆಯಾದ್ದರಿಂದಲೇ ಗುಮ್ಮಟವನ್ನು ಒಡೆದುಹಾಕಿದ ವೆಂದು ಮಸೀದಿ ನಾಶ ಮಾಡಿದ ಆರೆಸ್ಸೆಸ್ಸಿಗರು ಸಮರ್ಥಿಸಿಕೊಂಡಿದ್ದರು. ಈಗ ಮೂರೂ ನ್ಯಾಯಾಧೀಶರು ಜಾಗವನ್ನು ಹಂಚಿಕೊಡುವಾಗ ಗುಮ್ಮಟದ ಮಧ್ಯಭಾಗದಲ್ಲಿ ರಾಮ ಜನ್ಮ ತಳೆದಿದ್ದ ಎಂದು ಹಿಂದೂಗಳು ಭಾವಿಸುತ್ತಾರಾದ್ದರಿಂದ ಅದನ್ನು ಅವರಿಗೇ ಕೊಡಬೇಕೆಂದು ಆದೇಶಿಸಿದ್ದಾರೆ. ಆ ಮೂಲಕ ಬುನಾದಿಯಿಲ್ಲದ ನಂಬಿಕೆಯ ಆಧಾರದಲ್ಲಿ ಸಂಘಪರಿವಾರ ಮಾಡಿದ ಗುಮ್ಮಟ ನಾಶವನ್ನು ನ್ಯಾಯಾಲಯ ಪರೋಕ್ಷವಾಗಿ ನ್ಯಾಯವೆಂದು ಸಮರ್ಥಿಸಿ ನ್ಯಾಯಬದ್ಧಗೊಳಿಸಿದೆ. ಸತ್ತವ್ರೋ, ಸುಳ್ಳೋ ಬಹುಸಂಖ್ಯಾತರ ನಂಬಿಕೆಯನ್ನು ಗೌರವಿಸಿ ಬಾಬ್ರಿ ಮಸೀದಿ ಇರುವ ಜಾಗದಲ್ಲಿ ಭವ್ಯ ರಾಮಮಂಧಿರ ಕಟ್ಟಿಕೊಳ್ಳಲು ಮುಸ್ಲಿಮರು ಸಹಕರಿಸಬೇಕೆಂದು ಸಂಘಪರಿವಾರ ಬಹಿರಂಗವಾಗಿ ಅಲ್ಪಸಂಖ್ಯಾತರನ್ನು ಬ್ಲಾಕ್‌ಮೇಲ್ ಮಾಡುತ್ತಿದೆ. ಈ ತೀರ್ಪು ಅದಕ್ಕೆ ಬೇಕಾದ ಕಾನೂನಿನ ದಾರಿಯನ್ನು ಸುಗಮಗೊಳಿಸಿದೆ.

ಮೂರನೇ ಒಂದು ಭಾಗದಷ್ಟು ಜಾಗವನ್ನು ನ್ಯಾಯಾಲಯ ಮುಸ್ಲಿಮರಿಗೆ ಕೊಟ್ಟಿದೆ. ಆದರೆ ಅಲ್ಲಿ ಮುಸ್ಲಿಮರು ಮಂದಿರದ ಪಕ್ಕದಲ್ಲಿ ಮಸೀದಿಯನ್ನು ನಿರ್ಮಿಸಿಕೊಳ್ಳಲು ಸಾಧ್ಯವೇ? ಈಗಾಗಲೆ ವಿಶ್ವ ಹಿಂದೂ ಪರಿಷತ್ತಿನ ಪ್ರವೀಣ್ ತೊಗಾಡಿಯಾ ಮಂದಿರದ, ಕನಿಷ್ಠ 10 ಕಿಮೀ ಫಾಸಲೆಯಲ್ಲಿ ಮಸೀದಿ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂದು ಘೋಷಿಸಿದ್ದಾನೆ. ಹಾಗೂ ಮುಸ್ಲಿಮರು ಪ್ರಾಕ್ಟಿಕಲ್ ಆಗಿ ಯೋಚಿಸಿ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಮಾಡಿಕೊಳ್ಳದೆ ರಾಜಿಗೆ ಬರಬೇಕೆಂದು ಸಂಘಪರಿವಾರ ಆಗ್ರಹಿಸಿದೆ. ಇಲ್ಲಿ ರಾಜಿ ಎಂದರೆ ಅರ್ಥ ತಮ್ಮ ಮೂರನೇ ಒಂದು ಜಾಗವನ್ನು ಬಿಟ್ಟುಕೊಡಿ ಎಂದು. ಪ್ರಾಕ್ಟಿಕಲ್ ಎಂದರೆ ಇತಿಹಾಸದಲ್ಲಿ ಆದ ರಕ್ತಪಾತ ನೆನಪಿರಲಿ ಎಂಬುದೇ ಅಲ್ಲವೇ? ಹೀಗೆ ಈ ತೀರ್ಪು ಸಂಘಪರಿವಾರದ ಫ್ಯಾಸಿಸ್ಟ್ ಶಕ್ತಿಗಳಿಗೆ ಇನ್ನಿಲ್ಲದ ಬಲವನ್ನು ತಂದುಕೊಟ್ಟು ಭಾರತದ ಪ್ರಜಾಸತ್ತೆಯನ್ನು, ಸೆಕ್ಯುಲಾರ್ ಬದುಕನ್ನು ಇನ್ನಷ್ಟು ಆತಂಕಕ್ಕೆ ದೂಡಿದೆ. ಅಷ್ಟು ಮಾತ್ರವಲ್ಲ, ಈಗಾಗಲೇ ಸಂಘಪರಿವಾರ ಇಂಥಾ 2000 ಮಸೀದಿ ಮತ್ತು ಚರ್ಚುಗಳಲ್ಲಿ ತಮ್ಮ ದೇವರು ಹುಟ್ಟಿದ್ದಾರೆ ಅಥವಾ ಬೆಳೆದಿದ್ದಾರೆ ಎಂಬ ತಮ್ಮ ನಂಬಿಕೆ[...] ವಾದವನ್ನು ಮುಂದಿಟ್ಟಿದೆ. ಅದರಲ್ಲಿ 7[...] ಸ್ಥಳಗಳು ಕರ್ನಾಟಕದಲ್ಲಿವೆ. ಈ ತೀರ್ಪಿನಲ್ಲಿ ನ್ಯಾಯಾಧೀಶರು ಅನುಸರಿಸಿದ ಮಾರ್ಗವೇ ಮೇಲ್ಪಂಕ್ತಿಯಾದರೆ ಇದು ದೇಶಾದ್ಯಂತ ಎಂಥಾ ಅರಾಜಕತೆಯನ್ನೂ, ಕೋಮು ಸಂಘರ್ಷವನ್ನೂ ಹುಟ್ಟುಹಾಕಬಹುದು? ಈಗ ಎರಡು ಪಕ್ಷಗಳು ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಹೋಗಲು ಮುಂದಾಗಿವೆ. ದೇಶದ ವರಿಷ್ಠ ನ್ಯಾಯಾಲಯವಾದರೂ ದೇಶದಲ್ಲಿ ಸಂವಿಧಾನವನ್ನೂ, ಕಾನೂನುಬದ್ಧ ಆಡಳಿತವನ್ನು ಎತ್ತಿ ಹಿಡಿಯಬಹುದೇ? ಹಾಗಿಲ್ಲದೆ ಬಹುಸಂಖ್ಯಾತರ ನಂಬಿಕೆ ಮತ್ತು ಶ್ರದ್ಧೆಗಳೇ ನ್ಯಾಯಸಂಹಿತೆಯಾಗಿಬಿಟ್ಟರೆ ಈ ದೇಶ ಛಿದ್ರಛಿದ್ರವಾಗುವುದಿಲ್ಲವೇ?

ಹಾಗಾಗದಿರಲಿ. ನ್ಯಾಯಾಲಯವೇ ಮಸೀದಿ ಕೆಡ[...] ಮಂದಿರ ಕಟ್ಟುವಂತೆ ಆಗದಿರಲಿ.

...ಣ್ಣು ಮುಕ್ಕಲಿದೆ ಬಿಜೆಪಿ ಸರ್ಕಾರ!



ಕಂಡಹಾಗೆ


• ಗೌರಿ ಲಂಕೇಶ್
editorlankesh@gmail.com

...ಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ...ದು ಎರಡೂವರೆ ವರ್ಷಗಳ ಭ್ರಷ್ಟ ಬಿಜೆಪಿ ... ಕೊನೆಗೂ ಅಂತ್ಯಗೊಳ್ಳುವ ಹಂತಕ್ಕೆ ಬಂದು ... ದಕ್ಷಿಣ ಭಾರತದಲ್ಲಿ ಕೋಮುವಾದಿ ...ಗೆ 'ಗೇಟ್‌ವೇ' ಆಗಿದ್ದ ಕರ್ನಾಟಕ ರಾಜ್ಯ ...ಕ್ಷಣ ಈ ದುಷ್ಟ ಸರ್ಕಾರದಿಂದ ಮುಕ್ತಿ ...ಯೊ ಎಂದು ಕಾತರದಿಂದ ಕಾದಿದೆ. ತಮ್ಮದು ... ಪಕ್ಷ, ತಾವು ರಾಜ್ಯವನ್ನು ...ದ್ಧಿಪಡಿಸುತ್ತೇವೆ, ಜನರ ಸಮಸ್ಯೆಗಳಿಗೆ ...ತ್ತೇವೆ ಎಂದೆಲ್ಲ ಡಂಗೂರ ಸಾರಿದ್ದ ಬಿಜೆಪಿ ...ಆಗ ಜನಸಾಮಾನ್ಯರಲ್ಲಿ ಎಷ್ಟು ನಿರಾಶೆ ...ದೆ ಎಂದರೆ ಕೇವಲ ಮೂರು ವರ್ಷಗಳ ... "ಇವರಿಗೂ ಒಂದು ಅವಕಾಶ ಕೊಟ್ಟು ...ೋಣ" ಎಂದಿದ್ದ ಜನ ಇವತ್ತು "ಈ ...ದಕ ಸರ್ಕಾರ ತೊಲಗಿದರೆ ಸಾಕು" ಎಂದು ...ತ್ತಿದ್ದಾರೆ.

...ದಕ್ಕೆ ಪ್ರಮುಖ ಕಾರಣ ಯಡಿಯೂರಪ್ಪನ ...ು, ಬಿಜೆಪಿಯ ಜನದ್ರೋಹಿ ಸಿದ್ಧಾಂತ ಮತ್ತು ...ಯ ಸಚಿವರು ಹಾಗೂ ಶಾಸಕರು ಅಧಿಕಾರ ...ಂದ ಮೆರೆದಿದ್ದು.

ಚುನಾವಣೆಗೂ ಮುನ್ನ ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವ ಮಾತು ಬದಿಗಿರಲಿ, ಅಧಿಕಾರವನ್ನು ಹಿಡಿಯಲು ಬಿಜೆಪಿ ಸರ್ಕಾರ ಹಿಡಿದ ಅಕ್ರಮ ಮಾರ್ಗಗಳೇ ಇವತ್ತು ಆ ಪಕ್ಷದ ಸರ್ಕಾರಕ್ಕೆ ನೇಣಿನ ಕುಣಿಕೆಯಾಗಿದೆ. ಕಳೆದ ಚುನಾವಣೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ಬಾರದಿದ್ದಾಗ ಎಲ್ಲಿ ಜಾತ್ಯತೀತ ಜನತಾದಳ ಮತ್ತು ಕಾಂಗ್ರೆಸ್ ಜೊತೆಗೂಡಿ ಸರ್ಕಾರ ಸ್ಥಾಪಿಸಿ ಬಿಡುತ್ತಾವೋ ಎಂದು ಹೆದರಿದ ಬಿಜೆಪಿ "ಅದು ಅನೈತಿಕ ಮೈತ್ರಿ" ಎಂದು ಬಾಯಿ ಬಡಿದುಕೊಂಡಿತ್ತು. ಆದರೆ ತಾನು ಮಾತ್ರ ಅಧಿಕಾರ ಸ್ಥಾಪಿಸುವುದಕ್ಕೆ ಅಕ್ರಮವಾಗಿ ಗಳಿಸಿದ್ದ ಗಣಿ ಹಣದಿಂದ ಪ್ರಜಾಸತ್ತೆಗೇ ಅವಮಾನ ಮಾಡುವಂತೆ ಇತರೆ ಪಕ್ಷಗಳ ಶಾಸಕರನ್ನು ಯಾವ ಮುಜುಗರವೂ ಇಲ್ಲದೆ ಖರೀದಿಸಿತ್ತು. ಇದೆಂತಹ 'ನೈತಿಕತೆ' ಎಂಬ ಪ್ರಶ್ನೆಗೆ ಯಡ್ಡಿ ಮತ್ತು ಅವರ ಚೆಡ್ಡಿ ಗ್ಯಾಂಗ್ ಉತ್ತರಿಸುವ ಗೋಜಿಗೂ ಹೋಗಲಿಲ್ಲ.

1999 ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರ ರಚನೆ ಆದಾಗಲೇ ಅದು ಇತರೆ ಪಕ್ಷಗಳಿಂದ ಯಾವ ರೀತಿಯಲ್ಲೂ ಭಿನ್ನವಾಗಿಲ್ಲ, ಬದಲಾಗಿ ಇತರೆ ಪಕ್ಷಗಳಿಗಿಂತ ಹೆಚ್ಚು ಭ್ರಷ್ಟ, ಹೆಚ್ಚು ಅಪಾಯಕಾರಿ ಮತ್ತು ಹೆಚ್ಚು ಅನೈತಿಕ ಪಕ್ಷ ಎಂಬುದು ಇಡೀ ದೇಶಕ್ಕೆ ಸಾಬೀತಾಗಿತ್ತು.



ಆದರೆ ರಾಜ್ಯದಲ್ಲಿ ದೇವೇಗೌಡರು ಮತ್ತು ಕುಮಾರಸ್ವಾಮಿ ಎಸಗಿದ ಒಂದು ತಪ್ಪೇ ಬಿಜೆಪಿಗೆ ಚುನಾವಣೆಯಲ್ಲಿ ದೊಡ್ಡ ಬಂಡವಾಳವಾಯಿತು. ಜೊತೆಗೆ, ಯಡಿಯೂರಪ್ಪ ತನ್ನ ರಾಜಕೀಯ ಜೀವನದುದ್ದಕ್ಕೂ ಪುರೋಹಿತಶಾಹಿಗಳ ಸೇವಕನಾಗಿ ಸಾಗಿಬಂದಿದ್ದರೂ ನಮ್ಮ ರಾಜ್ಯದ ಲಿಂಗಾಯತರು ಅವರನ್ನು ಬೆಂಬಲಿಸಿದ್ದರಿಂದ ಇಲ್ಲೂ ಬಿಜೆಪಿಗಳ ದುರಾಡಳಿತಕ್ಕೆ ಕೊನೆಗೂ ಅವಕಾಶ ಸಿಕ್ಕಿತು.

ಕಳೆದ ಎರಡು ವರ್ಷ ನಾಲ್ಕು ತಿಂಗಳಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಸಾಧನೆಗಳೇನು ಎಂದು ನೋಡಿದರೆ ಹೇರಳವಾಗಿ ಕಾಣಸಿಗುವುದು ಭ್ರಷ್ಟಾಚಾರ, ಅವ್ಯವಹಾರ, ಸ್ವಜಾತಿಪಕ್ಷಪಾತ, ಎಲ್ಲದರ ಕೇಸರಿಕರಣ, ವ್ಯವಸ್ಥೆಯ ಕೋಮುವಾದಿಕರಣ, ರಾಜ್ಯದ ಸಂಪತ್ತಿನ ಲೂಟಿ..... ಇಂತಹದ್ದೇ. ಇನ್ನು ಯಡಿಯೂರಪ್ಪನಿಂದ ಹಿಡಿದು ಅವರ ಸಚಿವ ಸಂಪುಟದಲ್ಲಿ ಇರುವವರೆಲ್ಲಾ ಒಂದಲ್ಲಿ ಒಂದು ರೀತಿಯಲ್ಲಿ ಅಕ್ರಮ ಅವ್ಯವಹಾರಗಳಲ್ಲಿ ತೊಡಗಿದವರೇ. ಆದರೆ ಯಡ್ಡಿ ಸರ್ಕಾರ ಇಂತಹ ಎಲ್ಲಾ ಅವ್ಯವಹಾರಗಳನ್ನು ಸಮರ್ಥಿಸಿಕೊಳ್ಳುತ್ತಾ ಬಂದಿತು. ಅದೂ ಹೇಗೆ ಅಂದರೆ ನಾಚಿಕೆ, ಮಾನ, ಮರ್ಯಾದೆಗಳನ್ನು ತೊರೆದು ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಸರ್ಕಾರದಿಂದ ಕೋಟ್ಯಂತರ ರೂಪಾಯಿಗಳನ್ನು ಅಕ್ರಮವಾಗಿ ಪಡೆದಿದ್ದರೂ "ಇದು ನಮ್ಮ ಕುಟುಂಬದ ವೃತ್ತಿ" ಎಂದು ಹೇಳಿಕೊಳ್ಳುವ ಮಟ್ಟಕ್ಕೆ ಹೋಗಿದ್ದ. ಇನ್ನು ಭೂಗಳ್ಳ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಬಸ್ ಖರೀದಿಯಲ್ಲಿ ಕಿಕ್‌ಬ್ಯಾಕ್ ಪ್ರವೀಣ ಅಶೋಕ್, ಅತ್ಯಾಚಾರ ಆರೋಪದ ಹಾಲಪ್ಪ, ಸ್ತ್ರೀಲೋಲ ರೇಣುಕಾಚಾರಿ, ಗಣಿ ಲೂಟಿ ಗ್ಯಾಂಗಿನ ರೆಡ್ಡಿ-ಶ್ರೀರಾಮುಲು, ವೈದ್ಯಕೀಯ ಹಗರಣದ ರಾಮಚಂದ್ರಗೌಡ, ಚೆಡ್ಡಿ ಸಿದ್ಧಾಂತದ ಕಾಗೇರಿ... ಒಬ್ಬರಿಗಿಂತ ಒಬ್ಬರು ರಾಜ್ಯಕ್ಕೆ ಕಪ್ಪುಚುಕ್ಕೆಗಳು. ಇಂತಹ ದಗಾಕೋರರ, ಕಳ್ಳರ, ವಂಚಕರ, ಖದೀಮರ, ಅನಾಚಾರಿಗಳ ಆಡಳಿತದ ಭಾಗ್ಯ ಕಾಣಲು ಬಿಜೆಪಿಯನ್ನು ಕನ್ನಡಿಗರು ಗೆಲ್ಲಿಸಿದ್ದರೆ? ನಾಚಿಕೆ ಆಗಬೇಕು ಬಿಜೆಪಿಗೆ.

ಇವತ್ತು ಬಿಜೆಪಿಯ ದುರಾಡಳಿತ ಮತ್ತು ಅಸಹ್ಯ ಹುಟ್ಟಿಸುವ ರಾಜಕಾರಣವನ್ನು ಕಂಡು ನಿಜಕ್ಕೂ ಅಪಾರ ನಾಚಿಕೆ ಮತ್ತು ಮುಖಭಂಗವನ್ನು ಅನುಭವಿಸುತ್ತಿರುವವರು ಆರೆಸ್ಸೆಸಿನವರು. ತಾನೊಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆ ಎಂದು ಹೇಳಿಕೊಳ್ಳುತ್ತಲೇ ಬಂದಿರುವ ಆರೆಸ್ಸೆಸ್ ರಾಜಕೀಯವಾಗಿ ತನ್ನ ಸಿದ್ಧಾಂತವನ್ನು ಜಾರಿಗೆ ತರಲು ಬಿಜೆಪಿಯನ್ನು ಹುಟ್ಟುಹಾಕಿತು. ಮಾತ್ರವಲ್ಲ ಬಿಜೆಪಿಯ ಯಶಸ್ಸಿಗೆ ಸಾವಿರಾರು ಆರೆಸ್ಸೆಸಿಗರು ಹಲವಾರು ದಶಕಗಳಿಂದ ದುಡಿದಿದ್ದಾರೆ.

ಯಡಿಯೂರಪ್ಪರ ದುರಾಡಳಿತದ ಅವಧಿಯಲ್ಲಿ ಆರೆಸ್ಸೆಸ್ಸಿನ ಹಲವು ಅಜೆಂಡಾಗಳಿಗೆ ಪ್ರಾಮುಖ್ಯತೆ ಸಿಕ್ಕಿದೆ ನಿಜ. ಅವುಗಳಲ್ಲಿ ಪುರೋಹಿತಶಾಹಿ ಮಠಗಳಿಗೆ ಮಾನ್ಯತೆ, ಚರ್ಚ್‌ಗಳ ಮೇಲೆ ದಾಳಿ, ಮುಸಲ್ಮಾನರು ಭಯಭೀತರಾಗಿ ವಾಸಿಸುವಂತಹ ವಾತಾವರಣ ಸೃಷ್ಟಿ, ಶಾಲಾಪಠ್ಯಗಳ ಕೇಸರೀಕರಣ ಮತ್ತು ಇನ್ನೂ ಜಾರಿಗೆ ಬರದಿರುವ ಜಾನುವಾರು ಹತ್ಯೆ ನಿಷೇಧ ಕಾಯಿದೆಗಳು ಪ್ರಮುಖ. ಆದರೆ ಇಂತಹ 'ಯಶಸ್ಸು'ಗಳ ಹೊರತಾಗಿಯೂ ಬಿಜೆಪಿಯನ್ನು ಸಮರ್ಥಿಸಿಕೊಳ್ಳಲೂ ಹಿಂದೇಟು ಹಾಕುವಂತಹ ಪರಿಸ್ಥಿತಿಯಲ್ಲಿ ಇಂದು ಆರೆಸ್ಸೆಸ್ ಸಿಲುಕಿಕೊಂಡಿದೆ.

ಇದನ್ನೆಲ್ಲ ನಾನು ಊಹಿಸಿ ಹೇಳುತ್ತಿಲ್ಲ. ಮೊದಲಿನಿಂದಲೂ ನಿಮ್ಮ ಈ ಪತ್ರಿಕೆ ಕೋಮುವಾದಿ ಬಿಜೆಪಿ ಸರ್ಕಾರವನ್ನು ವಿರೋಧಿಸುತ್ತಲೇ ಬಂದಿದೆ. ಆದ್ದರಿಂದಲೇ ಇವತ್ತಿಗೂ ಈ ರಾಜ್ಯದ ಜಾತ್ಯತೀತರು, ಪ್ರಗತಿಪರರು, ಅಲ್ಪಸಂಖ್ಯಾತರು ಮತ್ತು ದಲಿತರು ಈ ಪತ್ರಿಕೆಯೊಂದಿಗೆ ಇದ್ದಾರೆ. ಆದರೆ ಇತ್ತೀಚೆಗೆ ನಿಮಗೆ ಅಚ್ಚರಿ ಆಗಬಹುದು-ಯಡಿಯೂರಪ್ಪನ ಸರ್ಕಾರದ ಅವ್ಯವಹಾರಗಳನ್ನು ಪತ್ರಿಕೆ ಬಯಲುಗೊಳಿಸಿದಾಗಲೆಲ್ಲ ನಾವು ಮಾಡಿದ್ದು ಸರಿ ಎಂದು ಹೇಳಿರುವವರಲ್ಲಿ ಹಲವಾರು ಆರೆಸ್ಸೆಸಿಗರೂ ಇದ್ದಾರೆ. ಅವರಲ್ಲಿ ಹಲವರು ನಮ್ಮ ಕಚೇರಿಗೆ ಬಂದು ಅಥವಾ ನಮ್ಮನ್ನು ಸಂಪರ್ಕಿಸಿ ಯಡಿಯೂರಪ್ಪನ ಸರ್ಕಾರದ ಬಗ್ಗೆ ತಮ್ಮ ನಿರಾಶೆಯನ್ನು ತೋಡಿಕೊಂಡಿದ್ದಾರೆ. ಇನ್ನೂ ಹಲವರು ಭ್ರಷ್ಟ ಬಿಜೆಪಿಗೆ ಆರೆಸ್ಸೆಸ್ ಬೆನ್ನೆಲುಬಾಗಿ ನಿಂತಿರುವುದನ್ನು ಖಂಡಿಸಿ ಆ ಸಂಘಟನೆಯಿಂದಲೇ ದೂರ ಸರಿದಿರುವುದಾಗಿ ನಮಗೆ ಹೇಳಿದ್ದಾರೆ.

ಇವತ್ತು ಬಿಜೆಪಿಯಂತೆಯೇ ಆರೆಸ್ಸೆಸ್ ಕೂಡ ಕೆಟ್ಟು ಕೆರ ಹಿಡಿದಿರುವುದಕ್ಕೆ ಕಾರಣ ಬಿಜೆಪಿಗಳ ಅಧಿಕಾರದಾಹ ಆರೆಸ್ಸೆಸಿಗೂ ಅಂಟಿರುವುದು. ಇದಕ್ಕೆ ಸಾಕ್ಷಿಯಾಗಿ ಆರೆಸ್ಸಿನಿನ ಒಬ್ಬರು ನನಗೆ ವಿವರಿಸಿದ ಪ್ರಸಂಗದ ಬಗ್ಗೆ ಇಲ್ಲಿ ಹೇಳುತ್ತೇನೆ.

ಕಳೆದ ವರ್ಷ ಬಳ್ಳಾರಿಯ ರೆಡ್ಡಿ ಗ್ಯಾಂಗಿನ ನೇತೃತ್ವದಲ್ಲಿ ಯಡಿಯೂರಪ್ಪನ ಸರ್ಕಾರದ ವಿರುದ್ಧ ಹಲವಾರು ಬಿಜೆಪಿ ಶಾಸಕರು ಬಂಡಾಯವೆದ್ದಿದ್ದರಲ್ಲ.... ಅವರ ನೇತೃತ್ವವನ್ನು ಹೊನ್ನಾಳಿ ಶಾಸಕ ರೇಣುಕಾಚಾರಿ ವಹಿಸಿಕೊಂಡಿದ್ದನಲ್ಲ.... ಆಗ ರೇಣುಕಾಚಾರಿಯನ್ನು ಸಂತೈಸಲು ಮತ್ತು ಬಿಜೆಪಿ ಸರ್ಕಾರಕ್ಕೆ ಎದುರಾಗಿದ್ದ ಸಮಸ್ಯೆಯನ್ನು ಬಗೆಹರಿಸಲು ರೇಣುಕಾಚಾರಿಯನ್ನು ಆರೆಸ್ಸೆಸಿನ ಕೇಂದ್ರ ಸ್ಥಾನವಾದ ಕೇಶವಕೃಪಾಗೆ ಆರೆಸ್ಸಿಸಿನ ನಾಯಕ ಮೈ.ಚ. ಜಯದೇವ್ ಆಹ್ವಾನಿಸಿದ್ದರಂತೆ. ಅವರ ನಡುವಿನ ಮಾತುಕತೆಯ ನಂತರ ಕೇಶವಕೃಪಾದಲ್ಲೇ ಮಧ್ಯಾಹ್ನದ ಊಟದ ವ್ಯವಸ್ಥೆಯೂ ಇತ್ತಂತೆ.

ಅವತ್ತು ಗಡದ್ದಾಗಿ ಉಂಡ ನಂತರ ರೇಣುಕಾಚಾರಿ ತನ್ನ ಜಾಯಮಾನಕ್ಕೆ ತಕ್ಕಂತೆ ಕೈ ತೊಳೆದುಕೊಂಡು ಹೊರಟುಹೋಗಿದ್ದಾನೆ. ಅಂದರೆ ರೇಣುಕಾಚಾರ್ಯನ ಎಂಜಲು ತಟ್ಟೆಯನ್ನು ತೊಳೆಯುವ ಕೆಲಸ ಆರೆಸ್ಸೆಸ್ಸಿನ ನಿಷ್ಠಾವಂತ ಕಾರ್ಯಕರ್ತರ ಮೇಲೆ ಬಿದ್ದಿದೆ. ಆಗ "ರೇಣುಕಾಚಾರ್ಯನಂತಹ ಹೆಣ್ಣುಬಾಕ ಮತ್ತು ಭ್ರಷ್ಟನ ಎಂಜಲು ತಟ್ಟೆಯನ್ನು ತೊಳೆಯುವ ಪಾಡು ನಮ್ಮದಾಯಿತಲ್ಲಾ" ಎಂದು ಅವರೆಲ್ಲ ಅಸಮಾಧಾನಗೊಂಡರಂತೆ.


ಕೆಲ ತಿಂಗಳ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆಗಳು ನಡೆದಾಗ ಆರೆಸ್ಸೆಸ್‌ನ ಕೆಲ ಕಾರ್ಯಕರ್ತರಲ್ಲಿ ಸ್ಪರ್ಧಿಸುವ ಆಶೆ ಹುಟ್ಟಿದೆ. ಅವರು ತಮ್ಮ ಈ ಆಶೆಯನ್ನು ಜಯದೇವ್ ಅವರ ಮುಂದೆ ತೋಡಿಕೊಂಡಾಗ "ಎಲೆಕ್ಷನ್‌ನಲ್ಲಿ ಭಾಗವಹಿಸಲು ರಾಜಕಾರಣಿಗಳಿದ್ದಾರೆ. ಅವರ ಬಳಿ ಹಣವಿರುತ್ತೆ, ನಮ್ಮ ಬಿಜೆಪಿ ಅಧಿಕಾರದಲ್ಲಿ ಬೇಕಾದರೆ ನಾವು ಇಂತಹ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕು. ನಿಮಗ್ಯಾಕೆ ಚುನಾವಣೆಯ ಉಸಾಬರಿ? ನಿಮ್ಮಲ್ಲಿ ಚಿಕ್ಕಾಸೂ ಇಲ್ಲ. ನೀವು ಸುಮ್ಮನೆ ಆರೆಸ್ಸೆಸ್ ಸಂಘಟನೆಯ ಕೆಲಸ ಮಾಡಿಕೊಂಡಿರಿ" ಎಂದರಂತೆ ಜಯದೇವ್. ಇದನ್ನು ಕೇಳಿ ಹಲವಾರು ಕಾರ್ಯಕರ್ತರು ತುಂಬಾ ನೋವು ಅನುಭವಿಸಿದರಂತೆ.....


ಯಡಿಯೂರಪ್ಪನ ಸರ್ಕಾರ ಇವತ್ತು ಅಲುಗಾಡುತ್ತಿದೆ. ಆದರೆ ಅವರು ಸದನದಲ್ಲಿ ವಿಶ್ವಾಸಮತ ಯಾಚಿಸಲು ಇನ್ನೂ ಮೂರು ದಿನಗಳಿವೆ. ಈಗಾಗಲೇ ಕೆಲ ಕಾಂಗ್ರೆಸ್ ಶಾಸಕರಿಗೆ 25 ಕೋಟಿ ರೂಪಾಯಿಗಳ ಆಮಿಷವನ್ನು ಒಡ್ಡುವ ಮೂಲಕ ಅವರನ್ನು ತಮ್ಮ ಪಾಳಯಕ್ಕೆ ಸೇರಿಸಿಕೊಂಡು ತನ್ನ ದುರಾಡಳಿತವನ್ನು ಮುಂದುವರೆಸುವ ಷಡ್ಯಂತ್ರದಲ್ಲಿ ಬಿಜೆಪಿ ಮತ್ತು ಆರೆಸ್ಸೆಸ್ ತೊಡಗಿವೆ.

ಬರುವ ಮೂರು ದಿನಗಳಲ್ಲಿ ಬಿಜೆಪಿ ಕೋಟ್ಯಂತರ ರೂಪಾಯಿಗಳನ್ನು ಚೆಲ್ಲಿ ತನ್ನ ಸರ್ಕಾರವನ್ನು ಕಾಪಾಡಿಕೊಳ್ಳಲು ಹರಸಾಹಸ ಮಾಡಲಿದೆ. ಆದರೆ ಅದು ಚೆಲ್ಲಲಿರುವ ಹಣವೆಲ್ಲ ಅಕ್ರಮವಾಗಿ ಗಳಿಸಿದ್ದು, ಸರ್ಕಾರದ ತಿಜೋರಿಯಿಂದ ಕದ್ದಿದ್ದು ಎಂಬುದನ್ನು ನಾವೆಲ್ಲ ನೆನಪಿನಲ್ಲಿಟ್ಟುಕೊಳ್ಳಬೇಕಿದೆ.

ಇಂತಹ ನೀಚಕಾರ್ಯಗಳು ಮತ್ತು ವಿರೋಧ ಪಕ್ಷಗಳ ನಿಷ್ಕ್ರಿಯತೆಯಿಂದಾಗಿ ಬರುವ ಸೋಮವಾರ ಯಡಿಯೂರಪ್ಪ ಗೆದ್ದರೂ ಗೆಲ್ಲಬಹುದು. ಆದರೆ ಆ ಗೆಲುವು ನಮ್ಮ ಪ್ರಜಾಪ್ರಭುತ್ವಕ್ಕೆ ಮಾಡಿದ ಅವಮಾನವಾಗುತ್ತದೆ, ಹೇಸಿಗೆ ಹುಟ್ಟಿಸುವ ರಾಜಕೀಯ ತಂತ್ರವಾಗುತ್ತದೆ... ಬಿಜೆಪಿ ಇನ್ನಷ್ಟು ಕುಲಗೆಟ್ಟು ಹೋಗುವುದಕ್ಕೆ ಮತ್ತಷ್ಟು ಸಾಕ್ಷಿಯಾಗುತ್ತದಷ್ಟೇ.... •

ಶನಿವಾರ ನಡೆಯಬೇಕಿದ್ದ ಗೌರಿ ಲಂಕೇಶರ ಈಶಾನ್ಯ ರಾಜ್ಯಗಳ ಅಧ್ಯಯನ ಪ್ರವಾಸ ಕುರಿತ ಅನುಭವಗಳ ನಿರೂಪಣೆ ಹಾಗೂ ಚರ್ಚೆ ಕಾರಣಾಂತರಗಳಿಂದ ರದ್ದಾಗಿದೆ. ದಯವಿಟ್ಟು ಸಹಕರಿಸಿ...





ಯಡವಟ್ಟು ಯಂದಿರನ್

ಭಾರತೀಯ ಚಿತ್ರರಂಗದಲ್ಲೇ ಅತಿ ಹೆಚ್ಚು ಬಜೆಟ್ಟಿನ ಸಿನಿಮಾ ಎಂಬ ಖ್ಯಾತಿಗೆ ಪಾತ್ರವಾದ 'ಯಂದಿರನ್' ಸಿನಿಮಾ ಸಿಕ್ಕಾಪಟ್ಟೆ ಪ್ರಚಾರದ ನಡುವೆ ಬಿಡುಗಡೆಯಾಗಿದೆ. ಆದರೆ ಬಿಡುಗಡೆಯಾದ ಒಂದೇ ವಾರಕ್ಕೇ ಮುಂದಾಮೋಟಿ ಕೊಳ್ಳುವ ಲಕ್ಷಣಗಳನ್ನೂ ತೋರುತ್ತಿದೆ. 'ಆರು ವರ್ಷದ ಮಕ್ಕಳಿಂದ ಹಿಡಿದು 60 ವರ್ಷದವರವರೆಗೆ ಎಲ್ಲ ವಯೋಮಾನದವರನ್ನೂ ಸೆಳೆಯುವ ಚಿತ್ರ ಯಂದಿರನ್' ಎಂದು ಡಂಗೂರ ಸಾರಿದ್ದ ಸನ್ ಪಿಕ್ಚರ್ಸ್‌ನವರ ಪ್ಲಾನು ಈ ಬಾರಿ ಮಣ್ಣು ಮುಕ್ಕುವಂತೆ ಕಾಣುತ್ತಿದೆ. ಸಿನಿಮಾ ಅತ್ಯದ್ಭುತವಾಗಿ, ಶ್ರೀಮಂತವಾಗಿ ಮೂಡಿಬಂದಿದ್ದರೂ ಥಿಯೇಟರಿನಿಂದ ಹೊರಬರುವ ಜನ ಮುಖ ಸಿಂಡರಿಸಿಕೊಂಡು ಹೋಗುತ್ತಿದ್ದಾರೆ.


'ಯಂದಿರನ್' ತಮಿಳು ಮತ್ತು ಹಿಂದಿ ಭಾಷೆಯಲ್ಲಿ ಬಿಡುಗಡೆಯಾಗಿರುವುದರಿಂದ ಮತ್ತು ಸೂಪರ್‌ಸ್ಟಾರ್ ರಜನೀಕಾಂತ್‌ಗೆ ಇಡೀ ವಿಶ್ವದಲ್ಲಿ ಮಾರ್ಕೆಟ್ ಇರುವುದರಿಂದ ಅದಕ್ಕೆ ಹೂಡಿರುವ ಇನ್ನೂರು ಕೋಟಿ ರೂಪಾಯಿಗಳು ವಾಪಾಸು ಬರುವುದರಲ್ಲಿ ಅಂಥ ಅನುಮಾನವೇನೂ ಇಲ್ಲ. ಆದರೆ ಈ ಚಿತ್ರ ರಜನಿ ಅಭಿಮಾನಿಗಳ ಮನಸ್ಸಿಗೆ ತಣ್ಣೀರೆರಚಿದೆ ಎಂಬುದಂತೂ ಸತ್ಯ.

ರಜನೀಕಾಂತ್‌ಗೆ ಚಿತ್ರರಂಗದಲ್ಲಿ ಖಡಕ್ಕಾದ ಇಮೇಜೊಂದಿದೆ. ಅವರ ಚಿತ್ರಗಳಲ್ಲಿ ಇರಲೇಬೇಕಾದ ಕೆಲವು ಕ್ವಾಲಿಟಿಗಳೂ ಇವೆ. ಪಂಚಿಂಗ್ ಡೈಲಾಗ್‌ಗಳು, ಪಂಚೆ ಎತ್ತಿಕಟ್ಟುವ ಶೈಲಿ, ರಪರಪ ಅಂತಾ ಟವೆಲ್ ಆಡಿಸಿ ಅದನ್ನು ಹೆಗಲಿಗೇರಿಸಿಕೊಳ್ಳುವ ಸ್ಟೈಲ್, ಅವರದ್ದೇ ಶೈಲಿಯ ವಿಚಿತ್ರ ನಡಿಗೆ... ಇವುಗಳನ್ನೆಲ್ಲಾ ನೋಡಿ ಅವರ ಅಭಿಮಾನಿಗಳು ಮನಸೋ ಇಚ್ಛೆ ಕುಣಿದು ಕುಪ್ಪಳಿಸಿ, ಶಿಳ್ಳೆ ಹೊಡೆಯಲು ಬಯಸುತ್ತಾರೆ. ವಿಪರ್ಯಾಸವೆಂದರೆ ಈ ಯಾವ ಅಂಶಗಳೂ 'ಯಂದಿರನ್' ಚಿತ್ರದಲ್ಲಿಲ್ಲ. ಸಿನಿಮಾವನ್ನು ನೋಡಿ ಹೊರಬಂದ ಪ್ರೇಕ್ಷಕರು 'ಮನೆಯಲ್ಲೇ ಒಂದು ಗಂಟೆ ಕಾರ್ಟೂನ್ ನೆಟ್‌ವರ್ಕ್, ಪೋಗೋ ಚಾನೆಲ್‌ಗಳನ್ನು ನೋಡಿಕೊಂಡಿರಬಹುದಿತ್ತು' ಎಂದು ಬೇಸರದ ಮಾತುಗಳಾಡುತ್ತಿದ್ದಾರೆ.


ಕಥೆಯಲ್ಲಿ ರುಚಿಯಿಲ್ಲ

ವಸೀಗರನ್ ಎಂಬ ವಿಜ್ಞಾನಿ ಮತ್ತು ಆತನಂತೆಯೇ ಇರುವ ರೋಬೋದ ಸುತ್ತ ಕಥೆ ಬೆಸೆದುಕೊಂಡಿದೆ. ಯುದ್ಧಗಳಲ್ಲಿ ನಡೆಯುವ ಸಾವಿರಾರು ಜನ ಯೋಧರ ಪ್ರಾಣಹಾನಿಯನ್ನು ತಪ್ಪಿಸಲೆಂದೇ ವಸೀಗರನ್ ಈ ರೋಬೋವನ್ನು ಕಂಡುಹಿಡಿಯುತ್ತಾನೆ. ಇದೇ ರೀತಿಯ ರೋಬೋಗಳನ್ನು ಸೃಷ್ಟಿಸಿ ಅವುಗಳನ್ನು ಭಾರತೀಯ ಸೈನ್ಯಕ್ಕೆ ಕೊಡುಗೆಯಾಗಿ ನೀಡುವುದು ವಸೀಗರನ್‌ನ ಕನಸು. ಹೀಗಾಗಿ ಸಾಮಾನ್ಯ ಮನುಷ್ಯನಿಗಿಂತ ನೂರು ಪಟ್ಟು ಬುದ್ಧಿವಂತಿಕೆ ಉಳ್ಳ ಚಿಪ್ ಅಳವಡಿಸಿ ಈ ರೋಬೋವನ್ನು ತಯಾರಿಸುತ್ತಾನೆ.

ಆದರೆ ಈ ರೋಬೋಗೆ ಮಾನವ ಸಹಜ ಭಾವನೆಗಳು ಇಲ್ಲ ಎಂದೂ, ಆ ಕಾರಣದಿಂದ ಶತ್ರುಗಳನ್ನಷ್ಟೇ ಅಲ್ಲದೆ ಯಾರನ್ನು ಬೇಕಾದರೂ ಅದು ಕೊಂದುಬಿಡುತ್ತದೆ ಎಂದೂ ಅದನ್ನು ಹಿರಿಯ ಅಧಿಕಾರಿಗಳು ರಿಜೆಕ್ಟ್ ಮಾಡುತ್ತಾರೆ.



ಆಗ ವಸೀಗರನ್ ಮತ್ತೊಂದಿಷ್ಟು ಪ್ರೋಗ್ರಾಮಿಂಗ್ ಮಾಡಿ ಆ ಯಂತ್ರ ಮಾನವನಿಗೆ ಮನುಷ್ಯ ಭಾವನೆ, ಸೆಂಟಿಮೆಂಟುಗಳನ್ನು ಸೇರಿಸುತ್ತಾನೆ. ಹೀಗೆ ಮನುಷ್ಯ ಭಾವನೆಗಳನ್ನು ಪಡೆದ ರೋಬೋ ಕೆನ್ನೆಗೆ ನಾಯಕಿ ಐಶ್ವರ್ಯಾ ರೈ ಮುತ್ತೊಂದು ಕೊಡುತ್ತಾಳೆ. ಆಕೆಯ ಮುತ್ತಿನ ಗಮ್ಮತ್ತಿಗೆ ಮಾರುಹೋಗುವ ರೋಬೋ ಆಕೆಯನ್ನೇ ಪ್ರೀತಿಸಿ, ರಮಿಸಲು ಮುಂದಾಗುತ್ತದೆ. ಅದನ್ನು ಕಂಡು ಅದರ ನಿರ್ಮಾತೃ ವಸೀಗರನ್ ಐಶ್ವರ್ಯ ಬಗ್ಗೆ ಪೊಸೆಸಿವ್ ಆಗುತ್ತಾನೆ. ಆತ ರೋಬೋಗೆ ಏನು ಹೇಳಿದರೂ ಅದು ಐಶ್ವರ್ಯಾಳನ್ನು ಬಿಡಲು ತಯಾರಿರುವುದಿಲ್ಲ. ನಡುರಾತ್ರಿ ಆಕೆಯ ಬೆಡ್ ರೂಮಿಗೆ ನುಗ್ಗಿ ಮುತ್ತು ಕೊಡು ಎಂದು ಪೀಡಿಸುತ್ತದೆ, ಆಕೆಯ ಹುಟ್ಟುಹಬ್ಬದ ದಿನ ಐಶ್‌ಗೆ ಉಡುಗೊರೆ ನೀಡಿ ಆಕೆಯ ಸೊಂಟ ಹಿಡಿದು ಮೈಕಲ್ ಜಾಕ್ಸನ್ ಶೈಲಿಯಲ್ಲಿ ಕುಣಿಯುತ್ತದೆ, ವಸೀಗರನ್‌ನಿಂದ ಸಂಬಳ ಅಪೇಕ್ಷಿಸುತ್ತದೆ. "ದಿನೇದಿನೇ ವಸೀಗರನ್‌ಗೆ ಆಯುಸ್ಸು ಕುಂದುತ್ತದೆ. ಆತನ ತಲೆಗೂದಲು ನೆರೆಯುತ್ತದೆ. ಕೊನೆಗೊಂದು ದಿನ ಆತ ಸಾಯುತ್ತಾನೆ. ಆದರೆ ನನಗೆ ಸಾವೇ ಇಲ್ಲ, ಆತನಿಗಿರಬೇಕಾದ ಎಲ್ಲವೂ ನನ್ನಲ್ಲಿದೆ. ನಾನು ನಿನ್ನನ್ನು ಎಲ್ಲ ರೀತಿಯಲ್ಲೂ ತೃಪ್ತಿಗೊಳಿಸಬಲ್ಲೆ, ಹೀಗಾಗಿ ಆತನನ್ನು ಬಿಟ್ಟು ನನ್ನನ್ನೇ ಮದುವೆಯಾಗು" ಎಂದು ಆ ರೋಬೋ ಐಶ್ವರ್ಯಾಳನ್ನು ಪೀಡಿಸಿ, ವಸೀಗರನ್ ಜೊತೆ ಕದನಕ್ಕೆ ನಿಲ್ಲುತ್ತದೆ.



ಆ ಯಂತ್ರಮಾನವ ತನ್ನ ಪ್ರೇಯಸಿಯ ಮೇಲೇ ಕಣ್ಣು ಹಾಕಿರುವುದನ್ನು ಸಹಿಸಲಾರದ ಸೈಂಟಿಸ್ಟ್ ವಸೀಗರನ್ ತಾನೇ ನಿರ್ಮಿಸಿದ, ತನ್ನ ಕನಸಿನ ಕುಡಿ ರೋಬೋಗೆ ಕೊಡಲಿಯಿಂದ ಹೊಡೆದು ಅದರ ರುಂಡಮುಂಡಗಳನ್ನು ಚೆಂಡಾಡಿ ಕಸದ ತಿಪ್ಪೆಗೆ ಬಿಸಾಡುತ್ತಾನೆ. ಅಲ್ಲಿಗೆ ರೋಬೋ ಕತೆ ಮುಗಿಯಿತು ಎಂದು ವಸೀಗರನ್ ಬೇಸರದಿಂದಲೇ ನಿಟ್ಟುಸಿರು ಬಿಡುತ್ತಾನೆ.

ಆದರೆ ಆಗ ಕಥೆ ಮತ್ತೊಂದು ಟರ್ನಿಂಗ್ ಪಡೆಯುತ್ತದೆ. ವಸೀಗರನ್‌ನ ಬೆಳವಣಿಗೆ, ಬುದ್ಧಿವಂತಿಕೆಯನ್ನು ಕಂಡು ಮರುಗುತ್ತಿದ್ದ ಆತನ ಗುರು ಮತ್ತು ಚಿತ್ರದ ವಿಲನ್ ಕಸದ ತಿಪ್ಪೆಯಲ್ಲಿ ಪುಡಿಪುಡಿಯಾಗಿ ಬಿದ್ದಿರುವ ರೋಬೋವನ್ನು ತಂದು ಅದನ್ನು ರೀ ಅರೇಂಜ್ ಮಾಡಿ ಅದಕ್ಕೊಂದು ರೆಡ್ ಚಿಪ್ ಅಳವಡಿಸಿ ಭಯೋತ್ಪಾದಕ ಕೃತ್ಯಗಳಿಗೆ ಬಳಕೆಯಾಗುವಂತೆ ಮಾಡುತ್ತಾನೆ. ಆತನ ಉದ್ದೇಶ ರೋಬೋವನ್ನು ಹೊರದೇಶಕ್ಕೆ ಮಾರಿ ಲಾಭ ಮಾಡುವುದು.

ಆದರೆ ರೋಬೋ ಆತನನ್ನೇ ಕೊಂದು ಮತ್ತೆ ಐಶ್‌ಳನ್ನು ತನ್ನವಳನ್ನಾಗಿಸಿಕೊಳ್ಳಲು ಹೊರಡುತ್ತದೆ. ಐಶ್ವರ್ಯಾಳನ್ನು ಮದುವೆ ಮನೆಯಿಂದ ಅಪಹರಿಸಿ ಕರೆತರುತ್ತದೆ. ತನ್ನದೇ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡು ತನ್ನಂತೆಯೇ ಸಾವಿರಾರು ರೋಬೋಗಳನ್ನು ಸೃಷ್ಟಿಸಿಕೊಂಡು ರಾಕ್ಷಸನಂತೆ ವರ್ತಿಸಲು ಶುರು ಮಾಡುತ್ತದೆ.

ಹೀಗೆ ಅನಾಹುತಕಾರಿ ಕೃತ್ಯಕ್ಕಿಳಿವ ರೋಬೋವನ್ನು ಮತ್ತೆ ತನ್ನ ತೆಕ್ಕೆಗೆ ತೆಗೆದುಕೊಂಡು ಅದರಲ್ಲಿ ಅಳವಡಿಸಿರುವ ರೆಡ್ ಚಿಪ್ ಅನ್ನು ತೆಗೆದು ಹಾಕಿ ಅದನ್ನು ಮತ್ತೆ ಸಹಜ ಸ್ಥಿತಿಗೆ ತರುವಲ್ಲಿ ಏನೆಲ್ಲಾ ಎಡವಟ್ಟುಗಳಾಗುತ್ತವೆ ಎಂಬುದು ಚಿತ್ರದ ದ್ವಿತೀಯಾರ್ಧವನ್ನು ಆವರಿಸಿದೆ.



ಮೊದಲಾರ್ಧದಲ್ಲಿ ಒಂದಿಷ್ಟು ಲವ್, ಕಾಮಿಡಿ, ಸೆಂಟಿಮೆಂಟುಗಳಿದ್ದರೂ ಎರಡನೇ ಭಾಗವಿಡೀ ಹೇರಳವಾಗಿರುವ ಗ್ರಾಫಿಕ್ಸ್ ತಲೆ ಚಿಟ್ಟುಹಿಡಿಸುತ್ತದೆ. ಕಾರ್ಟೂನ್ ಧಾರಾವಾಹಿಯನ್ನು ನೋಡಿದಂತಾಗುತ್ತದೆ. ಈ ಕಾರಣಕ್ಕೇ ದೊಡ್ಡವರು ಮುಖ ಸಪ್ಪಗೆ ಮಾಡಿ ಕೂತರೆ ಮಕ್ಕಳು ಎದ್ದೆದ್ದು ಕುಣಿದು ಎಂಜಾಯ್ ಮಾಡುತ್ತಿದ್ದಾರೆ.

ರಜನಿಯೇ ಬೇಕಿರಲಿಲ್ಲ!

ಸಿನಿಮಾ ನೋಡಿದ ಪ್ರತಿಯೊಬ್ಬರ ಅಭಿಪ್ರಾಯವೂ ಇದೆ. ಈ ಸಿನಿಮಾದಲ್ಲಿ ರಜನಿಯೇ ಅಭಿನಯಿಸಬೇಕಿತ್ತು ಎಂಬ ಯಾವ ಅನಿವಾರ್ಯತೆಗಳೂ ಕಾಣುವುದಿಲ್ಲ. ಅನಿಮೇಷನ್ ಮೂಲಕ ಸಾವಿರಾರು ರಜನಿಗಳನ್ನು ಸೃಷ್ಟಿಸಿರುವ ನಿರ್ದೇಶಕ ಶಂಕರ್ ಅವರು ರಜನಿ ಇಲ್ಲದೆಯೂ ಈ ಸಿನಿಮಾ ಮಾಡಬಹುದಿತ್ತು. ತೆರೆಯ ಮೇಲೆ ಎಲ್ಲೆಲ್ಲೂ ಕಾಣಿಸುವ ಗ್ರಾಫಿಕ್ಸ್ ರಜನಿಯ ಮುಂದೆ ಒರಿಜಿನಲ್ ರಜನಿಯ ಮಜಾ ಮಾಯವಾಗಿದೆ.

ಕನ್ನಡದಲ್ಲಿ ನಿರ್ಮಾಣವಾಗಿದ್ದ, ದಿನೇಶ್ ಬಾಬು ನಿರ್ದೇಶನದ 'ಹಾಲಿವುಡ್' ಸಿನಿಮಾವನ್ನೇ ಯಥಾವತ್ತು ನಕಲು ಮಾಡಿ 'ಯಂದಿರನ್' ನಿರ್ಮಿಸಿದ್ದಾರೆ ಎಂಬ ಸುದ್ದಿ ಸಿಕ್ಕಾಪಟ್ಟೆ ಪ್ರಚಾರ ಪಡೆದಿತ್ತು. ಸ್ಯಾಂಡಲ್‌ವುಡ್‌ನ ರಿಯಲ್ ಸ್ಟಾರ್ ಉಪೇಂದ್ರ ಸಿಕ್ಕಿದ್ದೇ ಛಾನ್ಸು ಎಂದು 'ಇದು ನಮ್ಮ ಸಿನಿಮಾದ ರಿಮೇಕು. ಶಂಕರ್ ಅವರೇ ನನ್ನನ್ನು ಕೇಳಿ ಅನುಮತಿ ಪಡೆದಿದ್ದರು' ಎಂದೆಲ್ಲಾ ಪುಕಾರೆಬ್ಬಿಸಿದ್ದರು. ಶಂಕರ್ ಅವರು ಉಪ್ಪಿಯ ಒಪ್ಪಿಗೆ ಪಡೆದಿದ್ದರೋ, ಅಥವಾ ಕದ್ದರೋ ಗೊತ್ತಿಲ್ಲ, ಆದರೆ ಕನ್ನಡದ 'ಹಾಲಿವುಡ್' ಚಿತ್ರದ ಸಣ್ಣ ನೆರಳಂತೂ 'ಯಂದಿರನ್' ಮೇಲಿದೆ. ಇಲ್ಲಿ ವಿಜ್ಞಾನಿ ಅನಂತ್ ನಾಗ್ ರೋಬೋವನ್ನು ನಿರ್ಮಿಸಿದರೆ, ಅಲ್ಲಿ ನಾಯಕ ರಜನಿಯೇ ತನ್ನ ತದ್ರೂಪಿ ರೋಬೋವನ್ನು ನಿರ್ಮಿಸಿರುತ್ತಾರೆ. 'ಹಾಲಿವುಡ್'ನಂತೆಯೇ 'ಯಂದಿರನ್'ನಲ್ಲೂ ರೋಬೋ ನಾಯಕಿಯ ಬೆನ್ನುಬಿದ್ದು ಪೀಡಿಸಿ, ಮತ್ತೊಬ್ಬ ನಾಯಕನನ್ನು ಕಾಡಿಸುತ್ತದೆ.

ಹಾಗೆ ನೋಡಿದರೆ 'ಹಾಲಿವುಡ್' ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದ ಉಪೇಂದ್ರ ಕೂಡಾ 'ಐ ರೋಬೋಟ್' ಎಂಬ ಇಂಗ್ಲಿಷ್ ಚಿತ್ರದಿಂದ ಪ್ರೇರಣೆ ಪಡೆದಿದ್ದರು. ಮತ್ತು ಇಂಥದ್ದೇ ಕಥೆಯನ್ನು ಹೊಂದಿರುವ ಸಾಕಷ್ಟು ಸಿನಿಮಾಗಳು ಈಗಾಗಲೇ ಬಂದಿರುವುದರಿಂದ ಶಂಕರ್ ಕದ್ದಿದ್ದು ಉಪ್ಪಿಯ ಕಥೆಯನ್ನಾ ಅಥವಾ 'ಐ ರೋಬೋಟ್' ಕತೆಯನ್ನೋ ಎಂಬುದು ತನಿಖೆಯಾಗಬೇಕಿದೆ! ಅಲ್ಲದೇ 'ಯಂದಿರನ್'ನ ಕೊನೇ ಅರ್ಧ ಗಂಟೆ 'ಹನಿ ಐ ಬ್ಲೂ ಅಪ್ ದ ಕಿಡ್' ಚಿತ್ರವನ್ನೂ ಹೋಲುತ್ತಾದ್ದರಿಂದ ಶಂಕರ್ ಈ ಬಾರಿ ಚೋರಮಾರ್ಗದಲ್ಲಿ ಸಿನಿಮಾ ಮಾಡಿರುವುದು ಎದ್ದುಕಾಣುತ್ತಿದೆ.

ವಿತರಕರಿಗೆ ನಷ್ಟ?

'ಯಂದಿರನ್' ಬಿಡುಗಡೆ ಆಗುವ ಒಂದು ... ಮುನ್ನವೇ ಎಲ್ಲೆಡೆ ಟಿಕೆಟ್‌ಗಳು ಅಡ್ವಾನ್ಸ್ ಆಗಿ ಬ... ಆಗಿದ್ದವು. ಬ್ಲಾಕ್ ಟಿಕೆಟ್ ಮಾರುವವರಿಗಂತೂ ... ವಾಗಿತ್ತು, ಆರಂಭದ ಮೂರ್‍ನಾಲ್ಕು ದಿನ ಬೆಂಗಳೂರಿನ ಎರಡು ಮೂರು ಸಾವಿರ ರೂಪಾಯಿಗಳಿಗೆ ಟಿಕೆಟ್‌ಗ... ಬ್ಲಾಕ್‌ನಲ್ಲಿ ಬಿಕರಿಯಾಗಿದ್ದವು. ಮಲ್ಟಿಪ್ಲೆಕ್ಸ್ ಥಿಯೇಟ... ಗಳಲ್ಲಂತೂ ಟಿಕೆಟ್ ದರವನ್ನು ನಾನೂರು ರೂಪಾಯಿಯಿ... ಏಳುನೂರೈವತ್ತು ರೂಪಾಯಿಗಳ ತನಕ ಏರಿಸಲಾಗಿ... ಆದರೆ 'ಯಂದಿರನ್'ಗೆ ದೊರೆತ ನೀರಸ ಪ್ರತಿಕ್ರಿಯೆಯಿ... ಥಿಯೇಟರ್‌ನವರು ಮತ್ತೆ ಟಿಕೆಟ್ ಬೆಲೆ ಇಳಿಸಿದ್ದಾರೆ.

'ಯಂದಿರನ್'ನ ಕರ್ನಾಟಕದ ಹಂಚಿಕೆಯನ್ನು ಸ್ಟಾ... ಕ್ರಿಯೇಟರ್ಸ್‌ನ ಮುಖ್ಯಸ್ಥ ಮತ್ತು 'ವಾರಸ್ದಾರ' ಚಿತ್ರದ ನಿರ್ದೇ... ಗುರುದೇಶಪಾಂಡೆ ಸನ್‌ಪಿಕ್ಚರ್ಸ್‌ನ ಕಲಾನಿಧಿ ಮಾರನ್ ಜೊ... ಮಾತಾಡಿ ಎಂಟೂವರೆ ಕೋಟಿಗೆ ವ್ಯವಹಾರ ಕುದುರಿಸಿದ್ದ... ಮುನಿರಾಜು, ಶ್ರೀಕಾಂತ್ ಮತ್ತು ಮೋಹನ್ ಎಂ... ಮೂವರು ಸ್ನೇಹಿತರು ಪಾರ್ಟನರ್‌ಶಿಪ್‌ನಲ್ಲಿ 'ಯಂ...ರನ್'ನನ್ನು ವಿತರಿಸಿದ್ದರು. ಈಗ ಚಿತ್ರದ ಬಗ್ಗೆ ಬರುತ್ತಿರು... ಪ್ರತಿಕ್ರಿಯೆ ಮತ್ತು ರಜನಿ ಅಭಿಮಾನಿಗಳ ಮುನಿಸ... ಕಂಡು ಈ ವಿತರಕರಿಗೆ ಸಣ್ಣಗೆ ಭಯದ ಜ್ವರ ಶುರುವಾಗಿ... ಸಿನಿಮಾ ಈಗ ಪಡೆಯುತ್ತಿರುವ ಕಲೆಕ್ಷನ್ ಹೀಗೇ ಇನ್... ನಾಲ್ಕು ವಾರ ಮುಂದುವರೆದರೆ ಮಾತ್ರ ಅವರು ಹಾಕಿರು... ಎಂಟೂವರೆ ಕೋಟಿ ರೂಪಾಯಿ ವಾಪಸ್ ಬರಲಿ... ಅದರ ನಂತರವಷ್ಟೇ ಲಾಭ ಕಾಣಲು ಸಾಧ್ಯ. ಆದರೆ ಈ 'ಯಂದಿರನ್' ಇನ್ನು ಎರಡು ವಾರ ಥಿಯೇಟರಿನ... ನಿಲ್ಲುವುದೇ ಕಷ್ಟ ಎನ್ನುವಂತಾಗಿದೆ. ಒಂದು ವೇಳೆ ಇನ್ನೇ... ಆರಂಭವಾಗಲಿರುವ ದಸರೆ ರಜೆಯಲ್ಲಿ ಜನ ಥೀಯೇಟರ... ಬಂದರೆ ಮಾತ್ರ ಬಂಡವಾಳ ವಾಪಸ್ ಆಗಲಿದೆ. ಇ... ಲಾಭವನ್ನು ಎದುರುನೋಡುವುದು ಕನಸಿನ ಮಾತು.


ಹಗರಣದ ದುಡ್ಡೇ?

ಇತ್ತ 'ಯಂದಿರನ್' ಚಿತ್ರವನ್ನು ಕೊಂಡ ವಿತರಕ... ಅಂದು ಬಡಿದುಕೊಳ್ಳುತ್ತಿದ್ದರೆ ಅತ್ತ ಈ ಚಿತ್ರದ ನಿರ್ಮಾಣಕ... ಬರೋಬ್ಬರಿ 200 ಕೋಟಿ ರೂಪಾಯಿ ಹೂಡಿದ ಸ... ಪಿಕ್ಚರ್ಸ್‌ನವರು ಮಾತ್ರ ಯಾವುದೇ ಟೆನ್ಷನ್ ಇಲ... ನಿರುಮ್ಮಳವಾಗಿದ್ದಾರೆ.

'ಸ್ಪೆಕ್ಟ್ರಂ ಹಗರಣ'ದಲ್ಲಿ ಕರುಣಾನಿಧಿ ಫ್ಯಾಮಿಲಿ ಹೊಡೆ... ಹಣದ ಸಣ್ಣ ಪಾಲನ್ನು 'ಯಂದಿರನ್' ಚಿತ್ರದಲ್ಲಿ ಹೂಡಿದ... ಎಂದು ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜ... ಲಲಿತಾ ಮತ್ತು ಕರುಣಾನಿಧಿ ವಿರೋಧಿಗಳು ಆರೋಪಿ...ತ್ತಿದ್ದಾರೆ. ಅದು ನಿಜವೂ ಇರಬಹುದು.




ಮೊಬೈಲ್ ಕಂಪೆನಿಗಳು ತಮ್ಮ ತರಂಗಾಂತರಗಳ... ಸರ್ಕಾರದಿಂದ ಪಡೆದುಕೊಳ್ಳಬೇಕು. ಖಾಸಗಿ ಕಂಪೆನಿಗ... ಬಂದ ಮೇಲೆ ಹೆಚ್ಚೆಚ್ಚು ತರಂಗಾಂತರಗಳನ್ನು ಹರಾ... ಮೂಲಕ ಖರೀದಿಸಿದವು. ಇಂಥ ಸಂದರ್ಭದಲ್ಲಿ ... ಮತ್ತು 3ಜಿ ಫ್ರೀಕ್ವೆನ್ಸಿಯನ್ನು ಮೊಬೈಲ್ ಕಂಪೆನಿಗ... ನೀಡುವಾಗ ನಿರ್ದಿಷ್ಟವಾದ ಕ್ರೈಟೀರಿಯಾ ಇದ್ದರ... ಹರಾಜು ನಿಯಮಗಳನ್ನು ಉಲ್ಲಂಘಿಸಿ, ನಿರ್ದಿಷ್ಟವ... ಕಂಪೆನಿಗಳಿಗೆ ಮಾತ್ರ ಅನುಕೂಲ ಕಲ್ಪಿಸಿಕೊಡಲಾಗಿ... ಕೇಂದ್ರ ಮಂತ್ರಿ ಎ. ರಾಜಾ ಮುಖ್ಯಸ್ಥಿಕೆಯಲ್ಲಿ ಕಡಿ... ರೇಟಿಗೆ ಬಿಡ್ಡಿಂಗ್ ಮಾಡಿ ಭಾರತದ ಬೊಕ್ಕಸಕ್ಕೆ ಕ... ಹಾಕಿ ತಮ್ಮ ಬೊಕ್ಕಸಕ್ಕೆ ಹಾಕಿಕೊಂಡಿದ್ದರು. ಈ ಹಗರಣ... ಕರುಣಾನಿಧಿ ಅಂಡ್ ಟೀಂ ಅರವತ್ತು ಸಾವಿರ ಕೊ... ಅವ್ಯವಹಾರ ಮಾಡಿದ ಆರೋಪ ಎದುರಿಸುತ್ತಿದೆ.



ಹೀಗಾಗಿ ಸಾವಿರಾರು ಕೋಟಿ ರೂಪಾ...ಗಳ ಬ್ಲಾಕ್ ಮನಿ ಹೊಂದಿರುವ ಕರುಣಾ... ಕುಟುಂಬ ಅದನ್ನು ವೈಟ್ ಮಾಡಿಕೊಳ್ಳ... 'ಯಂದಿರನ್'ನನ್ನು ಬಳಸಿಕೊಂಡಿದೆ ಎ... ಆರೋಪವೂ ಈಗ ತಮಿಳುನಾಡಿನ... ಕೇಳಿಬರುತ್ತಿದೆ.

• ಅರುಣ್ ಕುಮಾರ್...
arunodayagc@gmail.co...


ಮಾರ್ಕೆಟ್ ವೇದಿ


ಕಲಾಸಿಪಾಳ್ಯದ ಕೂಲಿ ಮಾಫಿಯಾ

ಮಾರ್ಕೆಟ್ ವೇದಿ ಗ್ಯಾಂಗಿಗೆ ಮತ್ತೊಂದು ಬಲಿ


ಶೇಖರ್

ಮಾರ್ಕೆಟ್ ಕೂಲಿಗಳ ಬೆವರಿನ ದುರಾಶೆಗೆ ಬಿದ್ದು ...ದವರ ಪೈಕಿ ಈತ ಆರನೇಯವನು!

...ದಲು ಬಟ್ರು ಎಂಬ ಕೂಲಿ ಪಂಟರ್‌ನನ್ನು ...ಜೊತೆಗಿದ್ದ ಅಯ್ಯಾಬಾಬು ಉರ್ಫ್ ಅಯ್ಯೂಬ್ ... ಹಾಕಿದ. ಕಲಾಸಿಪಾಳ್ಯದ ಕೂಲಿ ಸಾಮ್ರಾಜ್ಯಕ್ಕಿನ್ನು ...ಧಿಪತಿಯೆಂದು ಮೈಮರೆತು ಮೆರೆದಾಟಕ್ಕಿಳಿದ ...ಆತನದೇ ಶಿಷ್ಯ ಕೋಳಿ ಜುಟ್ಟು ಮುಗಿಸಿಬಿಟ್ಟ. ...ಕೋಳಿ ಜುಟ್ಟು ಕೂಡ ಹೆಚ್ಚು ಕಾಲ ಬದುಕಲಿಲ್ಲ. ...ಕೂಲಿಗಳ ದೊರೆಯಾಗುತ್ತೇನೆಂದು ಹೊರಟ ...ನ್ನನ ದುರಾಶೆಗೆ ಕೋಳಿ ಜುಟ್ಟು ಹೆಣವಾದ. ... ಕೂಲಿ ಮಾಫಿಯಾದ ದೊರೆ ಪಟ್ಟಕ್ಕೆ ಬಂದ ...ನ್ನನನ್ನು ನಡುರಸ್ತೆಯಲ್ಲೇ ಕೊಚ್ಚಿ ಹಾಕಿದ ಗೇಟ್ ...ೂ ಹೆಚ್ಚು ಕಾಲ ದೊರೆ ಪಟ್ಟವನ್ನು ಅನುಭವಿಸ ...ಇಲ್ಲ.


ಭೀಕರವಾಗಿ ಕೊಲೆಯಾದ ಶೇಖರ್

...ಗೆ ಬೇಬಿಕೃಷ್ಣ ರಸ್ತೆ ಹೆಣವಾದನೋ ಹಾಗೇ ...ತ್ ವೇದಿಯ ಗ್ಯಾಂಗ್ ಗೇಟ್ ಗಣೇಶನನ್ನು ...ಹಾಕಿತ್ತು. ಈಗ ಕೊಲೆಯಾದ ಶೇಖರ್ ಕೂಡ ...ಳ್ಯದ ಕೂಲಿ ಮಾಫಿಯಾ ಮಟ್ಟಿಗೆ ಮಾರ್ಕೆಟ್ ...ಗೇಟ್ ಗಣೇಶರ ಮಟ್ಟದವನಲ್ಲದಿದ್ದರೂ ಅದರ ...ಪಾಳಯಪಟ್ಟಿಗೆ ದೊರೆಯಾಗಿದ್ದಂತೂ ಸತ್ಯ. ಅಥ ...ಾಗಿದ್ದು ಕೂಡ ಹಾಲಿ ಕೂಲಿಗಳ ದೊರೆ ಮಾರ್ಕೆಟ್ ... ಶಿಷ್ಯರಿಂದಲೇ!

...ು ಕಲಾಸಿಪಾಳ್ಯದ ಕೂಲಿ ಮಾಫಿಯಾ. ಮೊನ್ನೆ ... 2010 ಸೆಪ್ಟೆಂಬರ್ 25 ರ ರಾತ್ರಿ ಕೆ.ಆರ್. ...ಕಟ್ಟೆಯ ಹಿಂಭಾಗದ ಬಂಡಿಮಠ್ ಸರ್ಕಲ್ಲಿನಲ್ಲಿ

ಕಲಾಸಿಪಾಳ್ಯದ ಪ್ರಾರಬ್ಧ ಕರ್ಮವೆಂಬಂತೆ ಕೊಲೆಯಾಗುತ್ತಾ ಬಂದ ಕೂಲಿ ದೊರೆಗಳ ವಿವಿಧ ಅಡ್ಡೆಗಳು ಕಾಲಕ್ರಮೇಣ ಅವರನ್ನು ಯಾರು ಕೊಲ್ಲುತ್ತಾರೋ ಅಂಥವರ ಪಾಲಾಗುತ್ತದೆ. ಇಲ್ಲಿಗೆ ಎರಡು ವರ್ಷದ ಹಿಂದೆ ಕೊಲೆಯಾದ ಗೇಟ್ ಗಣೇಶ ಕಲಾಸಿಪಾಳ್ಯದ ತರಕಾರಿ ಮಾರುಕಟ್ಟೆಗೆ ದೊರೆಯಾಗಿದ್ದ. ಪಕ್ಕದ ಕೆ.ಆರ್. ಮಾರುಕಟ್ಟೆಯ ಸಪೋಟಾ ಮಂಡಿಗೆ ಸದ್ಯ ಗೇಟ್ ಮೂರ್ತಿಯೇ ಪಾಳೇಗಾರ. ಬಾಳೇಕಾಯಿ ಮಂಡಿಗೊಬ್ಬ, ಕಬ್ಬಿನ ಮಂಡಿಗೊಬ್ಬ, ಸೊಪ್ಪಿನ ಮಂಡಿಗೊಬ್ಬ; ಹೀಗೆ ವಿವಿಧ ಮಂಡಿಗಳನ್ನು ಆಳುವ ಕೂಲಿ ದೊರೆಗಳೇ ಇಲ್ಲಿನ ಮಿನಿ ರೌಡಿಗಳು ಕೂಡ.

ಮೈತುಂಬಾ ಮಚ್ಚೇಟು ತಿಂದು ಹೆಣವಾದ ಡಿ. ಶೇಖರ್ ಇಲ್ಲಿನ ಕೂಲಿ ಕಾರ್ಮಿಕರ ಸಂಘಕ್ಕೆ ಅಧ್ಯಕ್ಷನಾಗಿದ್ದ ಬಂಡಿಮಠ್ ಏರಿಯಾದ ಡಾ. ಅಂಬೇಡ್ಕರ್ ಸ್ಲಂ ಅಸೋಸಿಯೇಷನ್ನಿಗೂ ಅಧ್ಯಕ್ಷನಾಗಿದ್ದ. ಸೆಪ್ಟೆಂಬರ್ 25 ರ ರಾತ್ರಿ 8 ರ ಹೊತ್ತಿಗೆ ತನ್ನ ಪಾಡಿಗೆ ತಾನು ಹಳೇ ತರಗುಪೇಟೆ ಅಜಿತನಾಥ್ ಕಾಂಪ್ಲೆಕ್ಸ್ ಎದುರು ಬರುತ್ತಿದ್ದವನನ್ನು ಹಂತಕ ಪಡೆ ಅಟಕಾಯಿಸಿಕೊಂಡಿದೆ. ಏನಾಗುತ್ತಿದೆ ಎಂದು ಗೊತ್ತಾಗುವ ಮೊದಲೇ ಮೈತುಂಬಾ ಮಚ್ಚೇಟು ತಿಂದು ಶೇಖರ್ ಹೆಣವಾಗಿದ್ದ.

ಹಂತಕ ಪಡೆಯ ನೇತೃತ್ವ ವಹಿಸಿದ್ದ ವೇಲು ಉರ್ಫ್ ಕೊಕ್ಕು ವೇಲು ಉರ್ಫ್ ಕೊಂಬೇರಿ ವೇಲು ಸದ್ಯ ಕಲಾಸಿಪಾಳ್ಯದ ತರಕಾರಿ ಮಾರುಕಟ್ಟೆಗೆ ದೊರೆಯಾಗಿರುವ ಸೈಲೆಂಟ್ ಸುನೀಲನ ಶಿಷ್ಯ ಮಾರ್ಕೆಟ್ ವೇಡಿಯ ಬಲಗೈ ಬಂಟ. ಆತನ ತಮ್ಮ ಷಣ್ಮುಗಂ ಅಲಿಯಾಸ್ ಸನ್ನು, ಮತ್ತೊಬ್ಬ ತಮ್ಮ ರಂಜಿತ್, ಕೆಜಿಎಫ್ ಮೂಲದ ಮತ್ತೊಬ್ಬ ವೇಲು, ಹೊಸ ಗುಡ್ಡದಹಳ್ಳಿಯ ಕುಪ್ಪ; ಇತ್ಯಾದಿ ಎಂಟು ಮಂದಿಯ ಗ್ಯಾಂಗ್ ಲಾಂಗ್ ಹಿಡಿದು ಶೇಖರ್‌ನನ್ನು ಕತ್ತರಿಸುತ್ತಿದ್ದರೆ ಇನ್ನೆಲ್ಲೋ ಕೂತಿದ್ದ ವೇಲುವಿನ ಚಿಕ್ಕಪ್ಪನ ಮಗ ರಾಜು ತಾನು ಬಂಡಿಮಠ್ ಕೂಲಿ ಗ್ಯಾಂಗಿನ ಹೊಸ ದೊರೆಯಂತೆ ಕನಸು ಕಾಣುತ್ತಿದ್ದ. ಮತ್ತೊಂದೆಡೆ ಕೆ.ಆರ್. ಮಾರುಕಟ್ಟೆ ವಾರ್ಡಿನ ಕೌನ್ಸಿಲರ್ ಅಶ್ವತ್ಥನಾರಾಯಣ ಇಡೀ ಕೂಲಿ ಪಾಳಯಪಟ್ಟೇ ತನ್ನ ಕೈ ವಶವಾದಂತೆ ಕುಪ್ಪಳಿಸಿಬಿಟ್ಟ. ಬಹುಶಃ ತಾನು ಕೊಲೆಯಾಗುತ್ತೇನೆಂದು ಗೊತ್ತಿದ್ದರೆ ಶೇಖರ್ ಕೂಲಿಗಳ ಲೀಡರ್ ಪಟ್ಟವನ್ನೇ ಬಿಟ್ಟು ಪರಾರಿಯಾಗುತ್ತಿದ್ದನೇನೊ.

ಕಲಾಸಿಪಾಳ್ಯದ ಪ್ರಾರಬ್ಧ ಕರ್ಮವೆಂಬಂತೆ ಕೊಲೆಯಾಗುತ್ತಾ ಬಂದ ಕೂಲಿ ದೊರೆಗಳ ವಿವಿಧ ಅಡ್ಡೆಗಳು ಕಾಲಕ್ರಮೇಣ ಅವರನ್ನು ಯಾರು ಕೊಲ್ಲುತ್ತಾರೋ ಅಂಥವರ ಪಾಲಾಗುತ್ತದೆ. ಇಲ್ಲಿಗೆ ಎರಡು ವರ್ಷದ ಹಿಂದೆ ಕೊಲೆಯಾದ ಗೇಟ್ ಗಣೇಶ ಕಲಾಸಿಪಾಳ್ಯದ ತರಕಾರಿ ಮಾರುಕಟ್ಟೆಗೆ ದೊರೆಯಾಗಿದ್ದ. ಪಕ್ಕದ ಕೆ.ಆರ್. ಮಾರುಕಟ್ಟೆಯ ಸಪೋಟಾ ಮಂಡಿಗೆ ಸದ್ಯ ಗೇಟ್ ಮೂರ್ತಿಯೇ ಪಾಳೇಗಾರ. ಬಾಳೇಕಾಯಿ ಮಂಡಿಗೊಬ್ಬ, ಕಬ್ಬಿನ ಮಂಡಿಗೊಬ್ಬ, ಸೊಪ್ಪಿನ ಮಂಡಿಗೊಬ್ಬ; ಹೀಗೆ ವಿವಿಧ ಮಂಡಿಗಳನ್ನು ಆಳುವ ಕೂಲಿ ದೊರೆಗಳೇ ಇಲ್ಲಿನ ಮಿನಿ ರೌಡಿಗಳು ಕೂಡ.

ಯಾರೇ ಕೂಲಿಯೊಬ್ಬ ಒಂದು ಮೂಟೆ ತರಕಾರಿಯನ್ನು ಲಾರಿಯಿಂದಿಳಿಸಿ ಅದನ್ನು ಮಂಡಿಗೆ ಹೊತ್ತು ಹಾಕಿದನೆಂದರೆ ಅದಕ್ಕೆ ಹತ್ತು ರೂಪಾಯಿ ಕೊಡುತ್ತಾರೆ. ಈ ಹತ್ತು ರೂಪಾಯಿಯಲ್ಲಿ ಐದು ರೂಪಾಯಿಯನ್ನು ಕೂಲಿಗಳ ಸಂಘದ ಅಧ್ಯಕ್ಷನೆಂಬ ದೊರೆ ಕಿತ್ತುಕೊಳ್ಳುತ್ತಾನೆ. ತರಕಾರಿ ಮಾರುಕಟ್ಟೆಯೊಂದರಲ್ಲೇ ದಿನಕ್ಕೆ ಈ ರೀತಿ ಹದಿನೈದು ಸಾವಿರ ರೂಪಾಯಿಗಳಷ್ಟು ಪಾಪದ ದುಡ್ಡು ರೌಡಿಯ ಕೈ ಸೇರುತ್ತದೆ. ಸಪೋಟಾ ಮಂಡಿಯ ಗೇಟ್ ಮೂರ್ತಿ ಒಬ್ಬನೇ ಈ ರೀತಿ ದಿನವೊಂದಕ್ಕೆ ಐದು ಸಾವಿರ ರೂಪಾಯಿ ಗಳಿಸುತ್ತಾನೆ. ಶೇಖರ್ ಈ ಪಾಟಿ ಗಳಿಸದೇ ಹೋದರೂ ತನ್ನ ಹೊಟ್ಟೆಪಾಡಿನ ಮಟ್ಟಿಗೆ ಕೂಲಿಗಳ ತಂಡವೊಂದನ್ನು ಸಂಬಾಳಿಸಿಕೊಂಡಿದ್ದ. ಬಂಡಿಮಠ್ ಏರಿಯಾದ ಹೋಲ್ ಸೇಲ್ ಮಳಿಗೆಗಳಿಗೆ ಬರುವ ಬಿಸ್ಕೆಟ್ ಪ್ಯಾಕೆಟ್ಟುಗಳು, ಚಾಕಲೇಟ್ ಡಬ್ಬಿಗಳು; ಇತ್ಯಾದಿ ಬೇಕರಿ ಐಟಮ್ಮುಗಳನ್ನು ಹೊತ್ತು ತರುವ ಲಾರಿಗಳಿಂದ ತಾನೇ ಕೂಲಿಗಳನ್ನು ಬಿಟ್ಟು ಅನ್‌ಲೋಡಿಂಗ್ ಮಾಡಿಸುತ್ತಿದ್ದ.

ದಿನವೊಂದಕ್ಕೆ ಕನಿಷ್ಠವೆಂದರೂ ಸಾವಿರ ರೂಪಾಯಿ ಗಿಟ್ಟುತ್ತಿತ್ತು, ತಿಂಗಳಿಗದು ಮೂವತ್ತು ಸಾವಿರದ ಆದಾಯ. ಪಕ್ಕದಲ್ಲೇ ಇದ್ದ ಅಂಬೇಡ್ಕರ್ ಸ್ಲಮ್ಮಿನಲ್ಲಿ ತಾನೇ ಸಂಘವೊಂದನ್ನು ಸ್ಥಾಪಿಸಿ ಅದಕ್ಕೆ ಅಧ್ಯಕ್ಷನಾಗಿದ್ದ. ಇವೆಲ್ಲವೂ ತನ್ನ ಆದಾಯದ ರಕ್ಷಣೆಗೆಂದು ಶೇಖರ್ ಮಾಡಿಕೊಂಡಿದ್ದ ಏರ್ಪಾಟಾಗಿದ್ದರೂ ಸ್ವಭಾವತಃ ಆತ ರೌಡಿಯಲ್ಲ, ತನ್ನದೇ ಒಂದಷ್ಟು ಹುಡುಗರನ್ನು ಬಿಟ್ಟು ಮೂಟೆ ಹಾಕಿಸಿ ಬಂದ ಕಮಿಷನ್ನಿನಲ್ಲಿ ಬದುಕುತ್ತಿದ್ದ.

ಆದರೆ ಕಲಾಸಿಪಾಳ್ಯದ ಹಂತಕ ಪಡೆಗಳಿಗೆ ತಿಂಗಳಿಗೆ ಮೂವತ್ತು ಸಾವಿರದ ಆದಾಯ ಕೂಡ ಸಣ್ಣ ಮಾತೇನಲ್ಲ. ಇಡೀ ಕಲಾಸಿಪಾಳ್ಯದಲ್ಲಿ ತನ್ನ ಮಾತೇ ನಡೆಯಬೇಕೆನ್ನುವ ದುರಾಶೆ ಹೊತ್ತ ಸುನೀಲನ ಬಂಟ ವೇದಿಗೆ ತನ್ನ ಶಿಷ್ಯನೊಬ್ಬನನ್ನು ಶೇಖರ್‌ನ ಜಾಗಕ್ಕೆ ತರಬೇಕೆನ್ನುವ ಆಸೆ ಬೇರೆ ಇತ್ತು, ಅದಕ್ಕೆ ತಕ್ಕಂತೆ ಪಾಲಿಕೆ ಚುನಾವಣೆ ಬಂತು. ಶೇಖರ್ ಹೇಳಿಕೇಳಿ ಬಿಜೆಪಿ ಸಂಸದ ಪಿ.ಸಿ. ಮೋಹನ್‌ರ ಬೆಂಬಲಿಗ. ಸಹಜವಾಗೇ ಬಿಜೆಪಿ ಪರ ಪ್ರಚಾರಕ್ಕಿಳಿದ. ಆದರೆ ಗೆದ್ದದ್ದು ಜೆಡಿಎಸ್‌ನ ಜಮೀರ್ ಶಿಷ್ಯ ಅಶ್ವತ್ಥನಾರಾಯಣ. ಬಿಜೆಪಿಯ ಡಿ.ಎಸ್. ವೀರಯ್ಯನ ಮಗ ಮತ್ತು ಕಾಂಗ್ರೆಸ್ಸಿನ ಸಂಪಂಗಿಯನ್ನು ಸೋಲಿಸಿ ಕೌನ್ಸಿಲರ್ ಆದ ಅಶ್ವತ್ಥನಾರಾಯಣನಿಗೆ ಮೊದಲೇ ಶೇಖರ್ ವಿರುದ್ಧ ಸಿಟ್ಟಿತ್ತು. ಅದನ್ನು ವೇದಿ ಬಳಸಿಕೊಂಡ. ಉಪಾಯವಾಗಿ ತನ್ನ ಬಂಟ ಕೊಕ್ಕು ವೇಲುವಿನ ತಮ್ಮ ರಾಜುವನ್ನು ಬಂಡಿಮಠ್‌ನ ಕೂಲಿಗಳ ಹೊಸ ದೊರೆಯನ್ನಾಗಿ ಕೌನ್ಸಿಲರ್ ಅಶ್ವತ್ಥನಾರಾಯಣನ ಮೂಲಕ ನೇಮಿಸಿಬಿಟ್ಟ.

ಅಷ್ಟಕ್ಕೂ ಕೂಲಿಗಳ ಸಂಘದ ಅಧ್ಯಕ್ಷನನ್ನು ಬದಲಾಯಿಸಲು ಕೌನ್ಸಿಲರ್‌ಗಾಗಲಿ, ಪೊಲೀಸರಿಗಾಗಲಿ, ಯಾವುದೇ ರೌಡಿಗಾಗಲಿ ಅಧಿಕಾರವಿಲ್ಲ, ಆದರೆ ಇದೆಲ್ಲವೂ ಇಲ್ಲಿ ತೋಳುಬಲದ ಮೇಲೆ ನಿರ್ಧಾರವಾಗುತ್ತದೆ. ಕೌನ್ಸಿಲರ್ ಅಶ್ವತ್ಥನಾರಾಯಣ ಶೇಖರ್‌ನನ್ನು ಕರೆದಿದ್ದೇ ಇನ್ನು ಮುಂದೆ ರಾಜು ಕೂಲಿಗಳನ್ನು ನಿಭಾಯಿಸುತ್ತಾನೆ ಎಂದುಬಿಟ್ಟ. ಅದನ್ನು ಕೇಳೋಕೆ ನೀನ್ಯಾರು ಎಂದು ಶೇಖರ್ ಝಾಡಿಸಿ ಎದ್ದು ಬಂದ.


ಕೊಲೆ ನಡೆದ ಜಾಗ...

ಇದಾಗಿದ್ದು ಸೆಪ್ಟೆಂಬರ್ ೨೩ ರ ಮಧ್ಯಾಹ್ನ. ಇಷ್ಟಾಗಿದ್ದೇ ವೇಡಿಯ ಶಿಷ್ಯರಾದ ಕೊಕ್ಕು ವೇಲು ಮತ್ತು ಸನ್ನು ಬಂದಿದ್ದೇ ಬಂಡಿಮಠ್ ಸರ್ಕಲ್ಲಿನಲ್ಲಿ ಅಡ್ಡೆ ಹಾಕಿದ್ದಾರೆ. ರಾಜು ಮೊದಲೇ ಕೂಲಿಗಳನ್ನೆಲ್ಲ ಕರೆದು ಒಂದು ರೌಂಡ್ ಧಮಕಿ ಹಾಕಿದ್ದ. ಇದ್ಯಾವುದಕ್ಕೂ ಜಗ್ಗದೇ ಶೇಖರ್ ಮಾಮೂಲಿನಂತೆ ತಾನೇ ನಿಂತು ಲಾರಿ ಲೋಡುಗಳನ್ನು ಅನ್‌ಲೋಡ್ ಮಾಡಿಸುತ್ತಿದ್ದ. ಇನ್ನು ಶೇಖರ್ ಜಗ್ಗಲಾರ ಎನ್ನಿಸಿದ್ದೇ ಕೊಕ್ಕು ವೇಲು ನಿರ್ಧರಿಸಿಬಿಟ್ಟ. ತನ್ನ ತಮ್ಮ ಸನ್ನು, ಮತ್ತೊಬ್ಬ ತಮ್ಮ ರಂಜಿತ್, ಕೆಜಿಎಫ್‌ನ ವೇಲು, ಹೊಸಗುಡ್ಡಹಳ್ಳಿಯ ಕೊಪ್ಪ ಮತ್ತೊಬ್ಬ ತಮ್ಮ ರಾಜು ಮುಂತಾದ ಹಂತಕರನ್ನು ರೆಡಿ ಮಾಡಿದ್ದೇ ಶೇಖರ್‌ನನ್ನು ನಡುರಸ್ತೆಯಲ್ಲಿ ಕೊಚ್ಚಿ ಕೊಲ್ಲಿಸಿಬಿಟ್ಟ. ಸೆಪ್ಟೆಂಬರ್ 25 ರ ರಾತ್ರಿ 8 ರ ಹೊತ್ತಿಗೆ ಅಜಿತನಾಥ್ ಕಾಂಪ್ಲೆಕ್ಸಿನ ಎದುರು ಮಾಮೂಲಿನಂತೆ ಬರುತ್ತಿದ್ದ ಶೇಖರ್‌ನನ್ನು ಮುತ್ತಿದ ಹಂತಕ ಪಡೆ ಎಲ್ಲೆಂದರಲ್ಲಿ ಕತ್ತರಿಸಿ ಹಾಕಿತ್ತು. ಕ್ಷಣಾರ್ಧದಲ್ಲೇ ಶೇಖರ್ ಪ್ರಾಣ ಬಿಟ್ಟಿದ್ದ.

ಅಲ್ಲಿಗೆ ಇಡೀ ಬಂಡಿಮಠ್‌ನ ಕೂಲಿ ಪಾಳಯ ವೇಡಿಯ ಕೈವಶವಾಗಿತ್ತು. ಅನ್ಯಾಯವಾಗಿ ಶೇಖರ್ ಪ್ರಾಣ ಕಳಕೊಂಡ. ಮೂವರು ಮಕ್ಕಳ ಆತನ ಇಡೀ ಕುಟುಂಬ ಬೀದಿಗೆ ಬಿದ್ದಿತ್ತು. ಕೊಲೆಯಾದ ಎರಡನೇ ದಿನಕ್ಕೇ ವೇಡಿಯೇ ನಿಂತು ತನ್ನ ಶಿಷ್ಯರನ್ನು ಮಾರ್ಕೆಟ್ ಪೊಲೀಸರಿಗೊಪ್ಪಿಸಿದ. ಪಾಪ; ಶೇಖರ್ ಹತ್ಯೆಗೆ ಆತನ ಗುರು ಪಿ.ಸಿ. ಮೋಹನ್ ಕೂಡ ತಲೆ ಕೆಡಿಸಿಕೊಳ್ಳಲಿಲ್ಲ.

ಕಲಾಸಿಪಾಳ್ಯದ ಕೂಲಿ ರಾಜ್ಯದ ಕೌರ್ಯವೆಂದರೆ ಇದೇ ತಾನೆ?

ಏಕೆಂದರೆ ಇಲ್ಲಿ ಕೊಂದವನಿಗೇ ದೊರೆ ಪಟ್ಟ!

● ರಾ. ಸೋಮನಾಥ್
ra.somanath2010@gmail.com

...ದೆಯನ್ನು ತಿಂದ ಗಾದಿಗೆ ಕೊಂದು ಬಂದ ಮಕ್ಕಳು!

...ರವೀಂದ್ರ ಕಲಾಕ್ಷೇತ್ರದ ಪಕ್ಕದ ಪೂರ್ಣಿಮಾ ಟಾಕೀಸ್ ಹಿಂಭಾಗದಲ್ಲೇ ಇರುವ ರಾಮಣ್ಣ ಗಾರ್ಡನ್ ಸ್ಲಮ್ಮು ...ಸಿಪಾಳ್ಯದ ಬಹುತೇಕ ಕೂಲಿ ದೊರೆಗಳ ಪಾಲಿಗೆ ಹುತ್ತವಿದ್ದಂತೆ. ಈಗ ...ರಿ ಮಂಡಿಯನ್ನಾಳುತ್ತಿರುವ ಮಾರ್ಕೆಟ್ ವೇದಿ, ಆತನ ಗುರು ಸುನೀಲ, ... ಎಲ್ಲರೂ ಇಲ್ಲೇ ಅಡ್ಡೆ ಹಾಕುತ್ತಿದ್ದರು. ಇವತ್ತು ಶೇಖರ್‌ನನ್ನು ಮುಗಿಸಿದ ...ಕ್ಕು ವೇಲುವಿನ ತಂದೆ ಕೀರಿ ಉರ್ಫ್ ಮಣಿವೇಲು ಎಂಬಾತನೂ ...ರ್ಫ್ ಮಣಿವೇಲು ಇದೇ ರಾಮಣ್ಣ ಗಾರ್ಡನ್ ಸ್ಲಮ್ಮಿನಿಂದಲೇ ಎದ್ದು ...ು ಇಲ್ಲಿಗೆ 20 ವರ್ಷದ ಹಿಂದೆ ಬಂಡಿಮಠದ ಕೂಲಿಗಳ ದೊರೆಯಂತಿದ್ದ. ...ಕುಡಿದು ಮಚ್ಚು ಹಿಡಿದನೆಂದರೆ ಅಕ್ಷರಶಃ ಸೈತಾನನಂತಾಗುತ್ತಿದ್ದ ಕೀರಿ ...ಕ್ಕೆ ರೋಸತ್ತೇ ತಂಗಪ್ರಕಾಶ್ ಮತ್ತು ಮೀರಾ ಎಂಬಿಬ್ಬರು ಕೂಲಿ ...ರ್‌ಗಳು ಕೀರಿಯನ್ನು ಕೊಂದುಬಿಟ್ಟರು. ಈ ಕೀರಿ ಅಲಿಯಾಸ್ ...ವೇಲುವಿನ ಮಕ್ಕಳ ಪೈಕಿ ಈಗ ಶೇಖರ್ ಕೊಲೆ ಕೇಸಿನಲ್ಲಿ ಫಿಟ್ಟಾಗಿರುವ ...ಕ್ಕು ವೇಲು ಮತ್ತು ಸನ್ನು ಬಿಟ್ಟರೆ ಇನ್ನೂ ಅನಾಹುತಕಾರಿಯಂತಿದ್ದವನು ... ಸುಬ್ಬ, ವೇಲು, ಸನ್ನು ಇತ್ಯಾದಿ ಕೀರಿಯ ಕಿರಾತಕ ಮಕ್ಕಳ ಕಾಟ ...ಣ್ಣ ಗಾರ್ಡನ್ ಸ್ಲಮ್ಮಿನಲ್ಲಿ ಎಷ್ಟೊಂದು ವಿಪರೀತಕ್ಕೆ ಹೋಯಿತೆಂದರೆ, ರೋಸತ್ತ ರುದ್ರ ಎಂಬ ವಿದ್ಯಾವಂತ ...ಪಟನೋರ್ವ ಅದೊಂದು ರಾತ್ರಿ ಸುಬ್ಬನನ್ನೇ ಕೊಚ್ಚಿ ಕೊಂದ.

...ಲೇದಿನ ಪಿತ್ಥ ನೆತ್ತಿ ಸೇರಿದ ಸನ್ನು ಮತ್ತು ಕೊಕ್ಕು ವೇಲು ರುದ್ರನ ಅಣ್ಣ ಸೇಟು ಎಂಬ ನಿಷ್ಪಾಪಿಯನ್ನು ಕೊಂದು ...ೆ ಹಕ್ಕಿಗೆ ಪ್ರತೀಕಾರ ಕೈಗೊಂಡರಾದರೂ ರುದ್ರನ ವಿರುದ್ಧ ಕತ್ತಿ ಮಸೆಯುತ್ತಲೇ ಇದ್ದರು. ಈಗ ಗುರು ...ಯೇ ಬಂಡಿಮಠ್ ಕೂಲಿ ದಂಧೆಗೆ ಪಟ್ಟ ಕಟ್ಟಿದ್ದಾನೆ. ಅದೂ ಕೊಂದ ಪಾಪಕ್ಕೆ ಕಾಣಿಕೆಯಾಗಿ? ತಂದೆ ಕೀರಿ ...ಲೆಯಾದ ಜಾಗದಲ್ಲೇ ಮಕ್ಕಳು ಅದೇ ಜಾಗಕ್ಕೆ ಕೊಲೆ ಮಾಡಿ ಬರುತ್ತಾರೆಂದರೆ ಎಂಥ ವಿಕಟವಲ್ಲವೆ?



ಗೋಕರ್ಣ ದೇವಳ ಗುಳುಂ ಗಲಾಟೆ

ರಗಳೆ ರಾಘವನಿಗೆ 'ಸುಪ್ರೀಂ' ಮುಖಭಂಗ!!



'ವಿಜಯ ಕರ್ನಾಟಕ' ಸಂಪಾದಕ ವಿಭಟ್ಟರಿಗೆ ಸಮೃದ್ಧ ಗೋಕರ್ಣ ದೇವಳ ಅನಾಮತ್ತು ನುಂಗಿರುವ ಸೋಗಲಾಡಿ ಸ್ವಾಮಿ ರಾಘವನ ಬಗ್ಗೇಕೆ ವಿಪರೀತ ಪ್ರೀತಿ? ಈ ರಸಿಕ ಸ್ವಾಮಿಯ ದುರಾಸೆ-ದುರಾಚಾರ-ದಗಾ-ದಗಲ್ಬಾಜಿಯನ್ನೆಲ್ಲ ವಿಕೆ ವಿಕ 'ಧರ್ಮೋದ್ಧಾರ' ಎಂಬಂತೆ ರೀಮುಗಟ್ಟಲೆ ಬರೆಯುತ್ತಿದೆ? ಯಾಕೆ ರಾಘವನಿಗೆ ಕೋರ್ಟು ಗಳಲ್ಲಿ-ಸಾರ್ವಜನಿಕರಲ್ಲಿ ಭರ್ಜರಿ ಮುಖಭಂಗವಾದರೂ 'ಚಾತುರ್ಮಾಸ ಸಂಭ್ರಮ' ಎಂಬಂತೆ ಬಿಂಬಿಸುತ್ತಿದೆ? ಬಾಲಿವುಡ್ ಬಿಚ್ಚಮ್ಮಗಳ ಪಕ್ಕ ಕುಳಿತು ಪಕಪಕ ನಕ್ಕರೆ, ಅಮಾಯಕ ಭಕ್ತರ ಸುಲಿಯುತ್ತ ಮಂತ್ರಾಕ್ಷತೆ ಕೊಟ್ಟರೆ ಅದೆಲ್ಲ ಲೋಕಕಲ್ಯಾಣ ಕಾರ್ಯವೆಂಬಂತೆ ವಿಕ ಗೀಚುವುದೇಕೆ? ಪದೇಪದೇ ಸುಳ್ಳು ಸುದ್ದಿ ಸೃಷ್ಟಿಸಿ ಓದುಗರನ್ನು ದಿಕ್ಕೆಡಿಸುವುದೇಕೆ?

ಇದೆಲ್ಲ ವಿಕ ಓದುಗರನ್ನು ಕಾಡುತ್ತಿರುವ ಮಿಲಿಯನ್ ಡಾಲರ್ ಪ್ರಶ್ನೆಗಳು. ಈ ತಿರುಚಿದ, ಸೃಷ್ಟಿಸಿದ, ಕೃತಿಮ ಬೋಗಸ್ ಸುದ್ದಿಗಳನ್ನು ಓದಿ-ಓದಿ ಜನರು ತಲೆ ರೋಸಿಹೋಗಿದ್ದಾರೆ.



12 ವಿಜಯ ಕರ್ನಾಟಕ ಶನಿವಾರ, 2 ಅಕ್ಟೋಬರ್ 2010, ಬೆಂಗಳೂರು » ಬೆಂಗ

ಗೋಕರ್ಣ: ರಾಮಚಂದ್ರಾಪುರ ಮಠಕ್ಕೆ ಗೆಲುವು

ವಿಕ ಸುದ್ದಿಲೋಕ ಬೆಂಗಳೂರು

ತೀರ್ಪು ಸ್ವಾಗತಾರ್ಹ

ವಿಕದ ಸುಳ್ಳು ವರದಿ

ವಿಭಟ್ಟರು ಯಾಕಿಂಥ ಸುಳ್ಳು ಸುದ್ದಿಗಳನ್ನು ಪಾಪದ ವರದಿಗಾರರಿಂದ ಹೆಣೆಸುತ್ತಿದ್ದಾರೆಂಬುದು ಭಟ್ಟರ-ಸ್ವಾಮಿ ಸ್ನೇಹ ಬಲ್ಲವರಿಗೆಲ್ಲ ಗೊತ್ತು. ಆದರೂ ಬ್ರಾಹ್ಮಣಶಾಹಿ ಪುನರುತ್ಥಾನಕ್ಕಾಗಿ, ಸರ್ಕಾರಿ-ಸಾರ್ವಜನಿಕ ಆಸ್ತಿ ಲಪಟಾಯಿಸುವುದಕ್ಕಾಗಿ ಇಂಥ ಸೊಫೆಸ್ಟಿಕೇಟ್ ಕೀಳು ಮಟ್ಟಕ್ಕೆ ಇಳಿಯಬೇಕಿತ್ತಾ? ಹಾಗೆನ್ನುತ್ತಾ ಜನ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆ.

ಮೊನ್ನೆ ಅಕ್ಟೋಬರ್ ಎರಡ ರಂದು ವಿಕದ ಮುಖಪುಟದ ಬಾಟಮ್‌ನಲ್ಲೊಂದು ಹಸಿಹಸೀ ಸುಳ್ಳು ಸುದ್ದಿ ಅಚ್ಚಾಗಿತ್ತು! ಅದೂ ಸತ್ಯ ಪ್ರತಿಪಾದಕ ರಾಷ್ಟ್ರಪಿತ ಗಾಂಧೀಜಿ ಹುಟ್ಟುಹಬ್ಬದ ದಿನವೇ ಇಂಥ ಅಪಚಾರ ಮಾಡಲಾಗಿತ್ತು!! ಅಷ್ಟೇ ಸೀರಿಯಸ್ ಆಫೆನ್ಸ್ ಮತ್ತೊಂದಾಗಿತ್ತು, ಈ ಕೊಳಕು ವರದಿಯಿಂದ. ಅದೆಂದರೆ ಈ ನೆಲದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನೇ ಮನಸೋ ಇಚ್ಛೆ ತಿರುಚಿ ಬರೆಯಲಾಗಿತ್ತು. "ರಾಮಚಂದ್ರಾಪುರ ಮಠಕ್ಕೆ ಗೆಲುವು" ಎಂಬ ಹರಾಮಿ ಹೆಡ್ಡಿಂಗ್‌ನ ವರದಿಯಿದು. 'ಗೋಕರ್ಣ ದೇವಾಲಯ ಹಸ್ತಾಂತರ ವಿವಾದ ಕುರಿತು ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಯಲ್ಲಿ ಹೊಸನಗರದ ಶ್ರೀರಾಮಚಂದ್ರಾಪುರ ಮಠಕ್ಕೆ ಮಹತ್ವದ ಗೆಲುವು ಲಭಿಸಿದೆ' ಎಂಬುದು ಸುದ್ದಿ ತಿರುಳು.

ವಾಸ್ತವಿಕವಾಗಿ ಆಗಿದ್ದು ತದ್ವಿರುದ್ಧ. ಸುಪ್ರೀಂ ಕೋರ್ಟ್‌ನಲ್ಲಿ ಸಗಣಿ ಸ್ವಾಮಿ ರಾಘು ಮತ್ತವನ ಬೆನ್ನಿಗೆ ನಿಂತು ಸ್ವಾಹಕ್ಕೆ ಸೆಕ್ಯುರಿಟಿ ಕೊಡುತ್ತಿರುವ ಯಡ್ಡಿ ಸರ್ಕಾರಕ್ಕೆ ಇನ್ನು 'ಮಹತ್ವದ' ಸೋಲಾಗಿತ್ತು!!

ಎರಡು ವರ್ಷದ ಹಿಂದೆ ಯಡ್ಡಿ ಸರ್ಕಾರ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಮತ್ತು ಪರಿವಾರ ದೇವರನ್ನು ದಗಲ್ಬಾಜಿ ಸ್ವಾಮಿ ರಾಘವನಿಗೆ ಹಸ್ತಾಂತರಿಸಿತ್ತು. ಈ ಪರಭಾರೆಯನ್ನು ಪ್ರಶ್ನಿಸಿ ಮೂರು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಹೈಕೋರ್ಟ್‌ನಲ್ಲಿ ಹೂಡಲಾಗಿತ್ತು. ಈ ಪಿಐಎಲ್‌ಗಳು ಸಿಂಧು ಎಂದು ಹೈಕೋರ್ಟ್‌ನ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತ್ತು. ನ್ಯಾ.ಗೋಪಾಲಗೌಡ ನೇತೃತ್ವದ ವಿಭಾಗೀಯ ಪೀಠದ ತೀರ್ಪನ್ನು ಪ್ರಶ್ನಿಸಿ ರಾಮಚಂದ್ರಾಪುರ ಮಠ ಮತ್ತು ಯಡ್ಡಿಯ ಚೆಡ್ಡಿ ಸರ್ಕಾರ ಒಂದಾಗಿ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದವು.

ರಾಘು-ಯಡ್ಡಿ ಕಡೆಯವರ ಎಸ್‌ಎಲ್‌ಪಿ (ಮೇಲ್ಮನವಿ)ಯನ್ನು ಮೊನ್ನೆ ಸುಪ್ರೀಂ ಕೋರ್ಟ್ ವಜಾ ಮಾಡಿತು. ಹೈಕೋರ್ಟ್‌ನ ತೀರ್ಪಿನಲ್ಲಿ ಮಧ್ಯಪ್ರವೇಶಿಸುವ ಅವಶ್ಯಕತೆ ಕಾಣದೆಂದು ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ತೀರ್ಮಾನಕ್ಕೆ ಬಂದಿದೆ. ಅಲ್ಲಿಗೆ ಪ್ರಕರಣ ಅಂತಿಮ ವಿಚಾರಣೆ ಮರಳಿ ಹೈಕೋರ್ಟ್‌ಗೆ ಕಳುಹಿಸಲಾಗಿದೆ. ಅಲ್ಲಿಗೆ ದೇವಸ್ಥಾನ ಹೈಗರ ಮಠಕ್ಕೆ ವಹಿಸಿದ್ದು ಸರಿ ಎಂದು ವಾದಿಸುವ ರಾಮಚಂದ್ರಾಪುರ ಮಠ ಮತ್ತು ಯಡ್ಡಿ ಸರ್ಕಾರಗಳೆರಡಕ್ಕೂ ಬರೋಬ್ಬರಿ ಕಪಾಳಮೋಕ್ಷ ನ್ಯಾಯದೇವತೆ ಮಾಡಿದಂತಾಗಿದೆ!!

ಕಾವಿ ಮಠ ಮತ್ತು ಚೆಡ್ಡಿ ಸರ್ಕಾರಕ್ಕೆ ಹೇಗಾದರೂ ಮಾಡಿ ಸುಪ್ರೀಂಕೋರ್ಟ್‌ನಲ್ಲಿ ಗೆಲ್ಲಬೇಕೆಂಬ ಹಠವಿತ್ತು. ಸ್ವಾಮಿ ಮತ್ತಾತನ ಬೆಂಬಲಕ್ಕೆ ನಿಂತಿರುವ ಪಕ್ಕಾ ಪುರೋಹಿತ ಶಾಹಿ ಬಿಜೆಪಿ ಲೀಡರ್‌ಗಳಿಗೆ ಗೋಕರ್ಣ, ಸರ್ಕಾರ ಮತ್ತು ಬ್ರಾಹ್ಮಣ ವಲಯದಲ್ಲಿ ಆಗುತ್ತಿರುವ ಡ್ಯಾಮೇಜ್ ಕಂಟ್ರೋಲ್‌ಗೆ ಇದು ಅನಿವಾರ್ಯ ಕಾನೂನು ಹೋರಾಟ ವಾಗಿತ್ತು. ಹೀಗಾಗಿ ಯಡ್ಡಿ ಸರ್ಕಾರ -ರಾಘವನ ಮಠ ಜಂಟಿಯಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪರವಾಗಿದ್ದ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ಗೆ ಹೋಗಿತ್ತು.

ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ತಮ್ಮ ಪರವಾಗಿಸಿಕೊಳ್ಳಬೇಕೆಂದು ಸರ್ಕಾರ-ಮಠದ ಕಡೆಯವರು ಹದಿನೈದು ಘಟಾನುಘಟಿ ವಕೀಲರ ದೊಡ್ಡ ತಂಡವನ್ನೇ ನಿಯೋಜಿಸಿತ್ತು. ಅಟಾರ್ನಿ ಜನರಲ್ ಜಿ.ಜಿ. ವಾಹನ್ವತಿ, ಹೆಚ್ಚುವರಿ ಸಾಲಿಸಿಟರ್ ಜನರಲ್ ಪರಾಗ್ ತ್ರಿಪಾಟಿ, ಹಿರಿಯ ವಕೀಲರಾದ ಅಭಿಷೇಕ್ ಸಿಂಘ್ವಿ, ಬಸವನ ಪ್ರಭು ಪಾ... ವಿ.ಎನ್. ರಘುಪತಿ ಭಟ್, ಅರುಣ್ ಶ್ಯಾಮ್ ... ದವರು ಸರ್ಕಾರ- ಮಠದ ಪರವಹಿಸಿದ್ದರು. ... ಮೇಲ್ಮನವಿ ಸುಪ್ರೀಂಕೋರ್ಟ್‌ನಲ್ಲಿ ಸಾರಾಸ... ತಿರಸ್ಕರಿಸಲ್ಪಟ್ಟಿತ್ತು! ಗೋಕರ್ಣ ದೇವಳದ 50 ಲ... ವ್ಯಾಜ್ಯಕ್ಕೆ ವೇಸ್ಟಾಯ್ತು.

ಈಗ ನೀವೇ ಹೇಳಿ. ಸುಪ್ರೀಂಕೋರ್ಟ್‌ನಲ್ಲಿ ... ಯಾರು? ದೇವಳ ಹಸ್ತಾಂತರ ಪ್ರಶ್ನಿಸಿದ್ದ ಸಾವ... ಹಿತಾಸಕ್ತಿ ಮೊಕದ್ದಮೆದಾರರಾ? ಹಸ್ತಾಂತರ ಮಾಡಿದ... ಸರ್ಕಾರವಾ? ಹಸ್ತಾಂತರಿಸಿಕೊಂಡ ರಾಘವ ಸ್ವಾಮಿ... ಯಡ್ಡಿ-ರಾಘುಗೆ ಸುಪ್ರೀಂ ಕೋರ್ಟ್‌ನಲ್ಲಿ ಸೋಲಾಗಿರ... ಎಂಥ ಗಾಂಪನಿಗೂ ಅರ್ಥವಾಗುವಂಥ ಸರಳ... ಆದರಿದು ರಾಘವನ ದಿಗ್ವಿಜಯವಾಗಿ, ಆತನ ಎದುರ... ದಯನೀಯ ಸೋಲಾಗಿ ವಿಕದ ವಿಭಟ್ಟರಿಗೆ ಕಂಡಿರು... ವಿಪರ್ಯಾಸವೇ ಸರಿ. ಖುದ್ದು ರಾಘವನಂತೂ ... ಮಹಾಬಲೇಶ್ವರನ ಇಚ್ಛೆ! ನಾವು ಗೆದ್ದಿದ್ದೇವೆ" ಎ... ಆತ್ಮವನ್ನೇ ವಂಚಿಸಿಕೊಂಡಿದ್ದಾನೆ. ಆತ ತಾನು ಗೆದ್ದಿದ್ದೇ... ಬಿಡುಗಡೆ ಮಾಡಿರುವ ಪ್ರೆಸ್ ನೋಟ್‌ನಲ್ಲಿ ಮಾತ್ರ ಸೋ... ದಟ್ಟ ಛಾಯೆ ವ್ಯಾಪಿಸಿತ್ತು!!

ಮಠದ ಕರಪತ್ರದಂತಾಗಿರುವ 'ವಿಜಯ ಕನಾ... ಸತ್ಯ ತಿರುಚಿ ಬರೆದಿರುವುದು ಇದೇ ಮೊದಲೇನಲ್ಲ. ... ಬಾರಿ ಕೋರ್ಟ್-ಕಚೇರಿ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ... ವನೇ ಗೆದ್ದಿದ್ದಾನೆ, ಎದುರಾಳಿಗಳು ಮಕಾಡೆ ಬಿದ್ದಿದ್ದಾ... ವಿಕ ಸುಳ್ಳು ಬರೆದಿದೆ. ಜನರನ್ನು ತಪ್ಪು ದಾರಿ... ರಾಘವನನ್ನು ಹೀರೋ ಮಾಡಲು ಹವಣಿಸಿದೆ. ದಾ... ವ್ಯಕ್ತಿ ಚಿತ್ರಣ ಹೇಗೆ ಬೇಕೋ ಹಾಗೆ ವಿ.ಕ. ಕೊಟ್ಟುಕೊ... ರಾಘವ ಸಚ್ಚಾರಿತ್ರ್ಯವಂತ, ಲೋಕೋದ್ಧಾರಕ, ಸವ... ಪರಿತ್ಯಾಗಿ, ಕೌಬಾಯ್... ಎಂದೆಲ್ಲ 'ಆರೋಪಿಸಿ' ಬರ... ಯಾರದೂ ತಕರಾರಿಲ್ಲ, ಕೋರ್ಟ್ ಕಚೇರಿ ಕಲಾಪ... ತಿರುಚಿ-ನ್ಯಾಯಕ್ಕೆ ಅಪಚಾರ ಮಾಡಿ ಬರೆಯುವ... 'ಪತ್ರಿಕಾ ಧರ್ಮ'?

ಪ್ರತಿ ವ್ಯಾಜ್ಯ ಮುಗಿದಾಗಲೂ ಗೆದ್ದಿದ್ದೇವೆಂದು ... ಚಂದ್ರಾಪುರ ಮಠದವರು ಬೊಂಬಡಾ ಬಜಾಯಿಸು... ರಾಘವನ ತಾರೀಫು ಮಾಡಿ ವಿಕ ಬರೆಯುವುದಕ್ಕೊ... 'ಹಿಡನ್ ಅಜೆಂಡಾ' ಇದೆ. ರಾಘವನ ರಗಳೆಯ... ಬಹುಸಂಖ್ಯಾತ ಬ್ರಾಹ್ಮಣರು ಮತ್ತು ಗೋಕರ್ಣ ... ಯವರು ರೋಸತ್ತು ಹೋಗಿದ್ದಾರೆ. ನ್ಯಾಯಾಲಯದ... ರಾಘವನ ಬಣ್ಣ ಬಯಲಾದರೆ, ಆತನ ಬಗೆಗಿನ ಬೇ... ಇನ್ನಷ್ಟು ಜೋರಾಗಬಹುದು; ಸಿಟ್ಟಿಗೆದ್ದು ... ಗೋಕರ್ಣದಿಂದ ಓಡಿಸಬಹುದು ಎಂಬ ಭಯ ರ... ಬಳಗ ಮತ್ತವನ ಹಿತೈಷಿ ಬ್ರಾಹ್ಮಿನ್ ಜರ್ನಲಿಸ್ಟ್‌ಗಳ... ಬೇಸರದಲ್ಲಿರುವ ರಾಘವನ ವಿರೋಧಿಗಳನ್ನು ಮಾನಸಿ... ನಿಯಂತ್ರಿಸುವ ತಂತ್ರವಿದು; ರಸಿಕ ರಾಘವನ ಪಟ್ಟ ಹ... ಗೋಕರ್ಣ ದೇಗುಲದಲ್ಲಿ ಭದ್ರಮಾಡಿ ಬಚಾವ್ ಮಾ... ಕುತಂತ್ರವಿದು.

ಎಲ್ಲರನ್ನೂ ಎಲ್ಲ ಕಾಲಕ್ಕೂ ಮೋಸ ಮಾಡ... ದೆಂಬುದನ್ನು ವಿಕ-ವಿಭಟ್ಟಗಳು ಆದಷ್ಟು ಬೇಗ ಅ... ಅವರಿಗೇ ಒಳ್ಳೆಯದು.

ಮೈಸೂರು: ಸಾರಾ ಮಹೇಶ್ ಫ್ಯಾಮಿಲಿಯ ಗೂಂಡಾಗಿರಿಯಿಂದ ದಲಿತರಿಗೆ ಬಹಿಷ್ಕಾರ!



ಸಾರಾಮಹೇಶ್

ಮೈಸೂರು ಜಿಲ್ಲೆಯ, ಕೆಆರ್ ನಗರ ತಾಲ್ಲೂಕಿನ ಸಾಲಿಗ್ರಾಮವು 20000 ಜನಸಂಖ್ಯೆ ಇರುವ ದೊಡ್ಡ ಗ್ರಾಮ ಮತ್ತು ಹೋಬಳಿ ಕೇಂದ್ರ. ವಿಧಾನಸಭೆಗೆ ಕೆಆರ್ ನಗರ ಕ್ಷೇತ್ರಕ್ಕೂ, ಲೋಕಸಭೆಗೆ ಮಂಡ್ಯ ಕ್ಷೇತ್ರಕ್ಕೂ ಸೇರುವ ದೊಡ್ಡ ಗ್ರಾಮ. ಭೂಗಳ್ಳ ಖ್ಯಾತಿಯ ಸಾ.ರಾ.ಮಹೇಶ್ ಎಂಬ ಎಮ್ಮೆಲ್ಲೆ ಇದೇ ಊರಿನವ. ಈತ ಮತ್ತು ಎಂಪಿ ಚಲುವರಾಯಸ್ವಾಮಿ ಇಬ್ಬರೂ ಸಹ ಜಾತ್ಯತೀತ ಜನತಾದಳದವರೇ. ಆದರೇನಂತೆ ದೇಶಾದ್ಯಂತ ಇರುವ ಜಾತಿವ್ಯವಸ್ಥೆ ನರಕದಲ್ಲಿ ಸಾಲಿಗ್ರಾಮ ದಲಿತರ ಪಾಲಿಗೆ ನಿತ್ಯ ನರಕ. ಇಲ್ಲಿ ಸಣ್ಣಪುಟ್ಟ ತಪ್ಪುಗಳಿಗೂ ದಂಡ, ದಲಿತರು ತಪ್ಪನ್ನೇ ಮಾಡದಿದ್ದರೂ ದಂಡ. ಇಲ್ಲಿ ಬಹುಸಂಖ್ಯಾತರಾಗಿರುವ ಒಕ್ಕಲಿಗರಲ್ಲಿನ ಫ್ಯೂಡಲ್‌ಗಳಾದ ರಾಮೇಗೌಡ (ಸಾರಾ ಮಹೇಶ್‌ನ ಅಪ್ಪ), ಸ್ವಾಮಿಗೌಡ, ಕೆಂಬೂತೇಗೌಡರೆಂಬುವವರು ಹೇಳಿದ್ದೇ ಕಾನೂನು. ಇವರ ದರ್ಪ ದೌರ್ಜನ್ಯಗಳು ಅಷ್ಟಿಷ್ಟಲ್ಲ. ಬಿಟ್ಟಿ ಚಾಕರಿ, ಜೀತಗಾರಿಕೆ ಇನ್ನೂ ಇಲ್ಲಿ ಜೀವಂತ.



ಗೋವಿಂದರಾಜು

ದಲಿತರಿಗೆ ಬಹಿಷ್ಕಾರ!

ಆಗಸ್ಟ್ 17ರಂದು ಬೆಳಗ್ಗೆ 11ರ ಸುಮಾರಿಗೆ ದಲಿತ ಕೇರಿಯ ಕೊನೆಯ ಬೀದಿಯಲ್ಲಿ ಒಕ್ಕಲಿಗ ಸಮುದಾಯದ ಪ್ರಕಾಶ್‌ನ ಹೆಂಡತಿ ಶೋಭಾ ಮತ್ತು ಕೃಷ್ಣೇಗೌಡನ ಹೆಂಡತಿ ರತ್ನಮ್ಮ ಎಂಬುವವರು ತಮ್ಮ ಆಡು, ಕುರಿ, ಎಮ್ಮೆಗಳನ್ನು ರಸ್ತೆಯಲ್ಲಿ ಬಿಟ್ಟು ದೂರದಲ್ಲಿ ಬರುತ್ತಿದ್ದಾಗ ಆಡು ಮತ್ತು ಕುರಿಗಳು ಚಲುವಯ್ಯನ ಮನೆಯ ಸುತ್ತಲಿರುವ ಕೈತೋಟಕ್ಕೆ ನುಗ್ಗಿ ಹೂಗಿಡಗಳನ್ನು ಮೇಯ್ದಿವೆ. ಇದನ್ನು ಮನೆಯಲ್ಲೇ ಇದ್ದ ಚಲುವಯ್ಯನ ಮಗ, ವಿದ್ಯಾವಂತ ಗೋವಿಂದರಾಜ್ ಸಹಜವಾಗಿಯೇ ಪ್ರಶ್ನಿಸಿದ್ದಾನೆ ಮತ್ತು ದನಕರುಗಳ ಜೊತೆಜೊತೆಯಲ್ಲಿ ಹೋಗೋದಲ್ವಾ ಅಂತಾ ಗೌರವಯುತವಾಗೇ ಕೇಳಿದ್ದಾನೆ. ಇದನ್ನು ಸಹಿಸಿಕೊಳ್ಳದ ಸವರ್ಣೀಯ ಶೋಭಾ ತನ್ನ ಗೌಡಿಕೆಯ ಗತ್ತಿನಿಂದ ಅಶ್ಲೀಲವಾಗಿ ಬೈದಿದ್ದಾಳೆ.

ನಂತರ ಬಂದ ಸಾ.ರಾ ಮಹೇಶ್ ನೆಂಟ ಕೃಷ್ಣೇಗೌಡ ಮತ್ತು ಆತನ ನೆಂಟ ನಾಗ ಎಂಬುವವರು ಗೋವಿಂದರಾಜು ಮೇಲೆ ಬಲವಾಗೇ ಹಲ್ಲೆ ನಡೆಸಿದ್ದಾರೆ. ಆಮೇಲೆ ಶೋಭಾಳ ಗಂಡ, ಸಾ.ರಾ. ಮಹೇಶ್ ಚೇಲಾ, ಮಾಜಿ ಗ್ರಾ.ಪಂ.ಸದಸ್ಯ ಕೆಂಬೂತೇಗೌಡನೂ ವಿಚಾರಿಸದೇ ಮತ್ತೇ ಅಕ್ಕನ್, ತಾಯಿನ್ ಅಂತೆಲ್ಲಾ ಬೈಯ್ಯುತ್ತಾ ಬಟ್ಟೆ ಹರಿದುಹಾಕಿ ಹಲ್ಲೆ ನಡೆಸಿದ್ದಾನೆ.

ಅದೇ ದಿನ ಸಾಯಂಕಾಲ ಕೃಷ್ಣೇಗೌಡ, ಮಗ ನಾಗ, ರತ್ನಮ್ಮ, ಪ್ರಕಾಶ್, ಶೋಭಾ, ಮಗ ಕುಮಾರರು ಚಲುವಯ್ಯನ ಮನೆ ಬಳಿ ಹೋಗಿ ಮತ್ತೆ ಗಲಾಟೆ ಶುರುಮಾಡಿದ್ದಾರೆ. ದಲಿತ ಚಲುವಯ್ಯ ಮತ್ತು ಹೆಂಡತಿ ದೇವೀರಮ್ಮ ಇಬ್ಬರಿಗೂ ಹೊಡೆದು ನಂತರ ಗೋವಿಂದರಾಜುವಿಗೆ ಮತ್ತೆ ಥಳಿಸಿದ್ದಾರೆ.


ಸಾಲಿಗ್ರಾಮ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ದಲಿತರ ಮೇಲೆ ಸಾಕಷ್ಟು ಹಲ್ಲೆಗಳಾಗಿದ್ದಾಗ್ಯೂ, ದಲಿತರು ಕೊಡುವ ದೂರುಗಳು ದಾಖಲಾಗುವುದಿಲ್ಲ, ಅದರಲ್ಲೂ ಇತ್ತೀಚೆಗೆ ಸಾಲಿಗ್ರಾಮಕ್ಕೆ ಬರುವ ಎಸ್.ಐ.ಗಳು ಸಾ.ರಾ ಮಹೇಶ್‌ನ ಚೇಲಾಗಳಂತೆ ಕೆಲಸ ಮಾಡುವಂಥವ... ಆಗಿರುತ್ತಾರೆ. ಗೋವಿಂದರಾಜುವಿನ ಪ್ರಕರಣದಲ್ಲೂ ಎಸ್.ಐ. ಶಿವನಂಜಶೆಟ್ಟಿ ಅದೇ ಕೆಲಸ ಮಾಡಿದ್ದಾ...

ಸಾರಾ ಮಹೇಶ್ ಗೂಂಡಾಗಿರಿ.!

ಸಾರಾ ಮಹೇಶ್ ಶಾಸಕನಾದ ಮೇಲೆ ಈತನ ಫ್ಯಾಮಿಲಿಯ ಗೂಂಡಾಗಿರಿ ಇನ್ನೂ ಹೆಚ್ಚಾಗಿದೆ. ಅದರಲ್ಲೂ ಜಾತಿವಿಚಾರ ಬಂದಾಗ ಸಾರಾ ತಂದೆ ರಾಮೇಗೌಡ ಮತ್ತು ಸಾರಾ ತಮ್ಮ ರವೀಶ್ ಮು... ನಿಂತು ತಮ್ಮ ಜಾತಿ ವಿರೋಧಿಗಳನ್ನು ಮಟ್ಟಹಾಕುವುದರಲ್ಲಿ ಎತ್ತಿದ ಕೈ. ತಮ್ಮ ಎಂದಿನ ಚಾಳಿಯಂತೆ ತಮ್ಮ ಸಂಬಂಧಿಗಳ ಮೇಲೆ ಜಾತಿನಿ... ದೂರನ್ನು ಗೋವಿಂದರಾಜು ನೀಡಿದ್ದರಿಂದ ಕುಪಿತಗೊಂಡ ಇವರು ತಮ್ಮ ಜಾತಿಬಾಂಧವರನ್ನು...



ಯಡ್ಡಿ ಎಡವಟ್ಟು: ಅಷ್ಟ ಅನಿಷ್ಟಾಧಿಪತಿಗಳಿಗೆ ಕೃಷ್ಣ ದೇವಸ್ಥಾನ ದಾನ!!



...ರ್ನಾಟಕ ಸಿಂಹಾಸನಾಧೀಶ್ವರ ಯಡ್ಡಿ ಮಹಾರಾಜ್ ...ತ್ತೊಂದು ಅನ್ಯಾಯ-ಅವಾಂತರ ಮಾಡಿದ್ದಾರೆ! ಪ್ರತಿದಿನ ...ಕ್ಷ ವರಮಾನವಿರುವ ಉಡುಪಿ ಕೃಷ್ಣ ದೇವಸ್ಥಾನವನ್ನು ... ಮಠಾಧೀಶರ ಜೋಳಿಗೆಗೆ ಹಾಕಿ ಕೃತಾರ್ಥರಾಗಿದ್ದಾರೆ. ...ನಾಸ್ತಿಕರ ಪ್ರತಿರೋಧ ಬುಲ್ಡೋಜ್ ಮಾಡಿ ಹಣ ...ಗುಡುವ ಗೋಕರ್ಣ ದೇಗುಲವನ್ನು ರಸಿಕ ...ದನೆಂಬ ಹವ್ಯಕ ಬ್ರಾಹ್ಮಣ ಮಠಾಧೀಶನ ಉಡಿ ...ದ್ದ ಯಡ್ಡಿಯೀಗ ಕೃಷ್ಣ ಮಂದಿರವನ್ನು ಬಿಜೆಪಿ ಆಸ್ಥಾನ ...ೀಹಿತ ಪೇಜಾವರ ಸ್ವಾಮಿಯನ್ನು ಸಂಪ್ರೀತಗೊಳಿ...ಯು ಡಿನೋಟಿಫೈ ಮಾಡಿದ್ದಾರೆ!


...ಡಿನೋಟಿಫಿಕೇಶನ್ ಮೇನಿಯಾ

...ಉಡುಪಿ ದೇವಸ್ಥಾನವನ್ನು ತರಾತುರಿಯಲ್ಲಿ ಚೆಡ್ಡಿ ಸಿಎಂ ...ಖಾಸಗೀಕರಣ ಮಾಡಿ ಮುಗಿಸಿದ್ದಾರೆ. ಮುಜರಾಯಿ ...ಯ ಈ ಸಾರ್ವಜನಿಕ ದೇಗುಲದ ಒಡೆತನವನ್ನು ...ವರ ಸ್ವಾಮಿ ವಿಶ್ವೇಶತೀರ್ಥರ ಕ್ಯಾಪ್ಟನ್‌ಶಿಪ್ಪಿನ ಅಷ್ಟ ...ಗಳ ಗ್ಯಾಂಗಿಗೆ ಏಕಪಕ್ಷೀಯವಾಗಿ ವಹಿಸಲಾಗಿದೆ. ...ಮು-ಕಟ್ಟಳೆ, ರೀತಿ-ರಿವಾಜು, ಸುಪ್ರೀಮ್‌ಕೋರ್ಟಿನ ಆದೇಶ ... ಕಸದಂತೆ ಬದಿಗೆ ಸರಿಸಿ ಯಡ್ಡಿ ಸರ್ಕಾರ ದೇಗುಲ ... ಬ್ರಾಹ್ಮಣ ಸ್ವಾಮಿಗಳಿಗೆ ಪರಭಾರೆ ಮಾಡಿಬಿಟ್ಟಿದೆ. ...ಈ ಡಿನೋಟಿಫೈ ಪ್ರಕ್ರಿಯೆಯಲ್ಲಿ ಯಡ್ಡಿ ...-ಮರ್ಯಾದೆಯನ್ನೂ ಬಿಟ್ಟಿದ್ದಾರೆ. ಕೋಟ್ಯಂತರ ...ಯಿ ಆದಾಯದ ದೇವಾಲಯವನ್ನು ಖಾಸಗಿ ವಿಪ್ರರ ...ಗೆ ಕೊಡುವ ಮೂಲಕ ರಾಜ್ಯಕ್ಕೆ ದೊಡ್ಡ ಅನ್ಯಾಯ ...ದ್ದಾರೆ. ಉಡುಪಿ ದೇವಾಲಯಕ್ಕೆ ಸಂಬಂಧಿಸಿದ ಫೈಲನ್ನು ... ಮಂಗಳವಾರ ರಾತ್ರಿ ಗಡಿಬಿಡಿಯಲ್ಲಿ ತರಿಸಿಕೊಂಡ ... ಸಾಹೇಬರು ತುಂಬ ರಹಸ್ಯವಾಗಿ ಸಾರ್ವಜನಿಕ ...ಕ್ತಿ ವಿರುದ್ಧ ಕಾರ್ಯಾಚರಣೆ ನಡೆಸಿದ್ದಾರೆ. ಸಾರ್ವಜನಿಕ ...ನ ಆಹ್ವಾನಿಸದೆ, ನ್ಯಾಯಾಲಯದ ಮುಂದಿರುವ ...-ಕಲಾಪಗಳನ್ನೂ ಕೇರ್ ಮಾಡದೆ ದೇವಸ್ಥಾನ ...ೀಟಿಫಿಕೇಶನ್‌ಗೆ ಸಹಿ ಜಡಿದಿದ್ದಾರೆ! ಆರೆಸೆಸ್‌ನ ರಿಂಗ್ ...ರ್‌ಗಳನ್ನು ಸಂಧಿಸಿದ ಕೆಲವೇ ತಾಸುಗಳಲ್ಲಿ ಈ ...ೀಕರಣ ಪುರಾಣ ನಡೆದುಹೋಗಿದೆ.

...ಯಡ್ಡಿ ಹೀಗೆ ಅವಸರವಸರವಾಗಿ ಉಡುಪಿ ದೇವಸ್ಥಾನ ...ಾರೆ ಮಾಡಿರುವುದರ ಹಿಂದೆ ಬಿಜೆಪಿಯ ಭಿನ್ನಮತದ ...ಳೂ ವ್ಯಾಪಿಸಿದೆ. ಸಂಪುಟ ಸರ್ಜರಿ ನಂತರ ಮುನಿಸಿ...ತಿರುವ ಬಿಜೆಪಿಯ ಶಕ್ತಿಶಾಲಿ ಬ್ರಾಹ್ಮಣ ಮುಖಂಡ-...ಮೂಂಡ್ ಮಾಂಡಲೀಕ ಅನಂತಕುಮಾರ್‌ರ ಓಲೈಸಲು ... ತಿಪ್ಪರಲಾಗ ಹಾಕುತ್ತಿದ್ದಾರೆ. ಈ ಅನಂತಕುಮಾರ್ ತುಂಬ ದಿನದಿಂದ ಗೋಕರ್ಣ ದೇವಸ್ಥಾನವನ್ನು ರಾಮಚಂದ್ರಾಪುರ ಮಠಕ್ಕೆ ಕೊಟ್ಟಂತೆ ಉಡುಪಿ ದೇವಾಲಯವನ್ನು ಅಷ್ಟಮಠಗಳಿಗೆ ದಾನ ಮಾಡುವಂತೆ ಸಿಎಂಗೆ ಕಾಡುತ್ತಿದ್ದರು. ಅದಕ್ಕೀಗ ಮುಹೂರ್ತ ಕೂಡಿಬಂತು. ಅನಂತಕುಮಾರ್‌ರ ಖುಷಿಪಡಿಸಲು ಉಡುಪಿ ಕೃಷ್ಣ ದೇವಸ್ಥಾನವನ್ನು ರಾತ್ರೋರಾತ್ರಿ ಯಡ್ಡಿ ಮಹಾತ್ಮ ಮಾಧ್ವ ಬ್ರಾಹ್ಮಣ ಸ್ವಾಮಿಗಳಿಗೆ ಕೊಟ್ಟಿದ್ದಾರೆಂಬ ಸುದ್ದಿ ಚೆಡ್ಡಿ ಪಡಸಾಲೆಯಲ್ಲಿ ಹಬ್ಬಿದೆ.

ಮಠವಲ್ಲ-ದೇಗುಲ

ಉಡುಪಿ ಕೃಷ್ಣ ಮಂದಿರದ ಮಾಲೀಕತ್ವಕ್ಕಾಗಿ ಹಲವು ದಶಕಗಳಿಂದ ಪೇಜಾವರ ಅಂಡ್ ಕೋ ಕಸರತ್ತು ಮಾಡುತ್ತಲೇ ಬಂದಿದೆ. ಮಾಧ್ವ ಬ್ರಾಹ್ಮಣ ಪಡೆ 1969 ರಲ್ಲಿ ಕೆಳವರ್ಗದವರು ಶ್ರೀಕೃಷ್ಣ ದೇವಾಲಯವನ್ನು ಪ್ರವೇಶ ಮಾಡುವಂತಿಲ್ಲವೆಂದು ಫರ್ಮಾನು ಹೊರಡಿಸಿತ್ತು, ದೇವಾಲಯ ಪ್ರಾಧಿಕಾರ ಹಿಂದುಳಿದವರು ದೇಗುಲಕ್ಕೆ ಬರದಂತೆ ತಡೆದಾಗ ಕೇಸು ಸುಪ್ರೀಂಕೋರ್ಟಿನ ತನಕ ಹೋಗಿತ್ತು, ಆಗ ಮಡಿ-ಮೈಲಿ, ಮೇಲು-ಕೀಳು 'ತತ್ವಾದರ್ಶ'ದ ಅಷ್ಟ ಮಠಾಧೀಶರ ಅನಿಷ್ಟ ಗ್ಯಾಂಗ್ 'ಕೃಷ್ಣ ವಿಗ್ರಹವಿರುವ



ಜಾಗ ದೇವಸ್ಥಾನವೇ ಅಲ್ಲ... ಅದು ಮಠ..... ಹೀಗಾಗಿ ಕೆಳವರ್ಗದವರು ಒಳಬರುವಂತಿಲ್ಲ' ಎಂದು ಹೇಯ-ಬರ್ಬರ ವಾದ ಮಂಡಿಸಿತ್ತು,

ಕೃಷ್ಣ ಮೂರ್ತಿ ಮಠದಲ್ಲಿದೆ ಎಂದಮಾತ್ರಕ್ಕೆ ಅದು ದೇವಸ್ಥಾನ ಎಂದು ಹೇಳಲಾಗದು. ಮಠದಲ್ಲಿ ಕೃಷ್ಣ ವಿಗ್ರಹ ಪೂಜೆಗೆ ಇಡಲಾಗಿದೆಯಷ್ಟೇ. ಬಂದವರಿಗೆ ತೀರ್ಥ-ಪ್ರಸಾದ ಕೊಡುತ್ತಿದ್ದೇವೆ. ಅದೊಂದು ಮಠ. ಮುಜರಾಯಿ ಕಾಯಿದೆಯಂತೆ ಅದನ್ನು ಸರ್ಕಾರಕ್ಕೆ ಒಪ್ಪಿಸಲಾಗದು. ಹಾಗಂತ ಅಷ್ಟ ಮಠಾಧಿಪತಿಗಳು ಕೋರ್ಟಿನಲ್ಲಿ ಹೇಳಿದ್ದರು. ಇದು ಎಂಥ ಐತಿಹಾಸಿಕ ಸುಳ್ಳು ನೋಡಿ. ಹಿಂದುಳಿದವರ ಕನಕದಾಸರ ಚರಿತ್ರೆಗೇ ಅಪಚಾರ ಮಾಡುವ ಧೂರ್ತತನವಿದು. ಈ ಬ್ರಾಹ್ಮಣಶಾಹಿಯ ಹುನ್ನಾರಕ್ಕೆ ಸುಪ್ರೀಂ ಕೋರ್ಟಿನಲ್ಲಿ ಕವಡೆ ಕಿಮ್ಮತ್ತೂ ಸಿಗಲಿಲ್ಲ. ಅಂದೇ ಸರ್ವೋಚ್ಚ ನ್ಯಾಯಾಲಯ 'ಉಡುಪಿ ಕೃಷ್ಣ ವಿಗ್ರಹದ ಪೂಜಾ ಸ್ಥಳ ದೇವಸ್ಥಾನ-ಅದೆಂದಿಗೂ ಮಠ ಅಲ್ಲ...." ಎಂದು ಸ್ಪಷ್ಟ ತೀರ್ಪು ಕೊಟ್ಟಿತ್ತು! ಈ ಮಹತ್ವದ-ಚಾರಿತ್ರಿಕ ತೀರ್ಪನ್ನು ನೋಟಿಫಿಕೇಶನ್ ಮೇನಿಯಾದ ಸಿಎಂ ಯಡ್ಡಿ ನಿಕೃಷ್ಟವಾಗಿ ಕಂಡು ಅವಮಾನಿಸಿದ್ದಾರೆಂಬುದು ಆತನ ಪರಭಾರೆ ಪ್ರಕರಣವೇ ಸಾರಿ ಹೇಳುತ್ತಿದೆ!!

ಸಾರ್ವಜನಿಕ ಮಾಲಿಕತ್ವ

ಉಡುಪಿ ಅಷ್ಟ ಮಠಾಧೀಶರು, ಅವರ ಅಡ್ನಾಡಿ ಅನುಯಾಯಿಗಳಾದ ಸಿಎಂ ಯಡ್ಡಿ, ಮಂತ್ರಿ ಆಚಾರ್ಯ ಮತ್ತು ಸಂಸದ ಅನಂತಕುಮಾರ್ ಏನೇ ಹೇಳಲಿ, ಸಾಕ್ಷಾತ್ ಅಡ್ವಾನಿಯೇ ಶ್ರೀಕೃಷ್ಣ ದೇವಸ್ಥಾನದ ಹಕ್ಕುದಾರರು ಅಷ್ಟಮಠಾಧೀಶರೆನ್ನಲಿ. ಕಾನೂನು, ನೈಸರ್ಗಿಕ ನ್ಯಾಯ ತತ್ವ, ಇತಿಹಾಸ ಈ ಪ್ರಸಿದ್ಧ ದೇವಾಲಯ ಸಾರ್ವಜನಿಕ (ಸರ್ಕಾರಿ) ಒಡೆತನದ್ದೆಂದು ಸಾಧಿಸುತ್ತಿದೆ. 2003 ರಲ್ಲಿ ಅಂದಿನ ಸರ್ಕಾರ ಮುಜರಾಯಿ ಕಾನೂನೊಂದನ್ನು ಜಾರಿಗೆ ತಂದಿತ್ತು. ಆ ಕಾಯ್ದೆಯಂತೆ ಈ ಶ್ರೀಕೃಷ್ಣ ದೇವಾಲಯ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿತ್ತು. ಕೃಷ್ಣ ವಿಗ್ರಹ ಕಬ್ಜಾ ಮಾಡಿಕೊಂಡು ಧಾರ್ಮಿಕ ದಂಧೆ ನಡೆಸುತ್ತಿರುವ ಅಷ್ಟ ಯತಿಗಳಿಗೆ, ಅವರ ಸುತ್ತಲಿನ ಮಾಧ್ವ ಬ್ರಾಹ್ಮಣರಿಗೆ ಈ ಕಾಯ್ದೆಯಿಂದ ಕಷ್ಟ ಶುರುವಾಗಿತ್ತು, ಬಿಸಿನೆಸ್‌ಗೆ ಹೊಡೆತ ಬೀಳುವುದು ಖಾತ್ರಿಯಾಗಿತ್ತು,

ಕಂಗಾಲಾದ ಪೇಜಾವರ ಸ್ವಾಮಿ ಬಳಗ ದೇವಸ್ಥಾನದ ಟ್ರಸ್ಟಿಗಳಿಂದ ಸದ್ರಿ ಕಾಯ್ದೆ ಪ್ರಶ್ನಿಸಿ ಹೈಕೋರ್ಟಿನಲ್ಲಿ ಕೇಸು ಹಾಕಿಸಿತು. ಹೈಕೋರ್ಟಿನ ಏಕ ಸದಸ್ಯ ಪೀಠ ಟ್ರಸ್ಟಿಗಳ ಅರ್ಜಿ ತಿರಸ್ಕರಿಸಿತು. ವಿಭಾಗೀಯ ಪೀಠಕ್ಕೆ ಅಪೀಲು ಹೋಯ್ತು ಟ್ರಸ್ಟಿ ತಂಡ. ಆಗ ಈ ಮುಜರಾಯಿ ಕಾಯ್ದೆಯನ್ನೇ ವಿಭಾಗೀಯ ಪೀಠ ರದ್ದುಗೊಳಿಸಿಬಿಟ್ಟಿತ್ತು, ಈ ಆದೇಶಕ್ಕೆ ಸುಪ್ರೀಮ್ ಕೋರ್ಟಿನಿಂದ ಸರ್ಕಾರ ತಡೆಯಾಜ್ಞೆ ತಂದಿತ್ತು, ತಕ್ಷಣ ಉಡುಪಿ ಕೃಷ್ಣ ದೇಗುಲವನ್ನು ಮುಜರಾಯಿ ಇಲಾಖೆಯ ಸ್ವಾಧೀನಕ್ಕೆ ತೆಗೆದುಕೊಂಡಿದ್ದ ಸರ್ಕಾರ ಆಡಳಿತಾಧಿಕಾರಿ ನೇಮಕಕ್ಕೆ ಕೈಹಾಕಿತ್ತು, ಈ ಆಡಳಿತಾಧಿಕಾರಿ ನೇಮಕವಾಗದಂತೆ ರಹಸ್ಯ ಕಾರ್ಯಾಚರಣೆ ಪೇಜಾವರ ಸ್ವಾಮಿ ನಡೆಸುತ್ತಲೇ ಬಂದರು. ಅದರಲ್ಲಾತ ಯಶಸ್ವಿಯೂ ಆದರು ಬಿಡಿ.

ಒಂದೆಡೆ ರಾಜಕೀಯ ರಗಳೆ ಇನ್ನೊಂದೆಡೆ ಕಾನೂನು ಕರಾಮತ್ತನ್ನು ಪೇಜಾವರ ಸ್ವಾಮಿ ತಂಡ ನಡೆಸಹತ್ತಿತ್ತು, ಹೇಗಾದರೂ ಮಾಡಿ ಕೋಟಿ ಕೋಟಿ ರೂ.ಗಳ ಉತ್ಪನ್ನ ತರುವ ಶ್ರೀಕೃಷ್ಣನ ದೇಗುಲವನ್ನು ಕಬಳಿಸುವ 'ಧರ್ಮಕಾರ್ಯ'ವನ್ನು ಮಾಧ್ವ ಮಠಾಧೀಶರು ನಡೆಸಿದ್ದರು. ಉಡುಪಿಯಲ್ಲಿರುವುದು. ಶ್ರೀಕೃಷ್ಣನ ದೇವಸ್ಥಾನವಲ್ಲ; ಅದೊಂದು ಮಠ. ಹಾಗಾಗಿ ಅದಕ್ಕೆ ಸರ್ಕಾರದ ಹೊಸ ಕಾನೂನಿನಿಂದ ವಿನಾಯ್ತಿ ಕೊಡಬೇಕೆಂದು ಪೇಜಾವರ ಮತ್ತು ಫಲಿಮಾರು ಮಠಾ ಧೀಶರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ್ದರು. ಸರ್ಕಾರ ಮಾತ್ರ ಇದು ದೇವಾಲಯವೇ; ಮಠ ಅಲ್ಲವೇ ಅಲ್ಲವೆಂಬ ಬಲವಾದ ವಾದ ಮಂಡಿಸಿತ್ತು,

ಈ ಅರ್ಜಿ ವಿಚಾರಣೆಯಲ್ಲಿರುವಾಗಲೇ ಇಬ್ಬರು ಯತಿವರ್ಯರು ಉಡುಪಿ ಸಿವಿಲ್ ನ್ಯಾಯಾಲಯದಲ್ಲಿ ಇನ್ನೊಂದು ವ್ಯಾಜ್ಯ ಹೂಡಿಬಿಟ್ಟರು. ದೇವಸ್ಥಾನದ ಆಡಳಿತ ವ್ಯವಹಾರದಲ್ಲಿ ಸರ್ಕಾರ ಮತ್ತದರ ಅಧಿಕಾರಿಗಳು ಮಧ್ಯ ಪ್ರವೇಶಿಸಬಾರದೆಂದು. ಇಂಜಕ್ಷನ್ ತಂದುಕೊಂಡರು. ಇದನ್ನು ಸರ್ಕಾರ ಪ್ರಶ್ನಿಸಿತು. ಈ ಹೋರಾಟವಿನ್ನೂ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಈ ಮಧ್ಯೆ ದೇವಸ್ಥಾನವನ್ನು ಮುಜರಾಯಿ ಇಲಾಖೆಯ ಸ್ವಾಧೀನಕ್ಕೆ ತೆಗೆದುಕೊಂಡ ಬಳಿಕ ಆಡಳಿತಾಧಿಕಾರಿ ನೇಮಕ ಪ್ರಕ್ರಿಯೆ ವಿಳಂಬಿಸುವುದು ತಪ್ಪೆಂಬ ಚರ್ಚೆಯೂ ನಡೆಯುತ್ತಲಿದೆ. ಉಡುಪಿ ಕೃಷ್ಣ ದೇವಸ್ಥಾನದ ಒಡೆತನ ಸಾರ್ವಜನಿಕರ (ಸರ್ಕಾರ)ದ್ದೋ, ಅಷ್ಟ ಮಠಗಳದ್ದೋ ಎಂಬ ಅಂತಿಮ ತೀರ್ಪಿಗಾಗಿ ನ್ಯಾಯಾಲಯದತ್ತ ನೋಡಲಾಗುತ್ತಿದೆ.

ಧರ್ಮಕಾರಣ

ಇಂಥ ವಾದ-ವಿವಾದ, ಕಾನೂನು ಸಮರದ ಸಂದರ್ಭದಲ್ಲಿ ಸಿಎಂ ಯಡ್ಡಿ ದಾದಾಗಿರಿಯಿಂದ ದೇವಳವನ್ನು ಡಿನೋಟಿಫೈ ಮಾಡಿ ಮುಗಿಸಿದ್ದಾರೆ. ಇದ್ಯಾವ ಸೀಮೆ ನ್ಯಾಯ! ಕುರ್ಚಿ ತೆವಲಿಗೆ ಇಡೀ ರಾಜ್ಯವನ್ನೇ 'ಕೇಶವ ಕೃಪ'ಕ್ಕೆ ಅಡವಿಡುತ್ತಿರುವುದು ಯಡ್ಡಿಯಿಂದ ನ್ಯಾಯ ನಿರೀಕ್ಷಿಸುವುದೇ ಮೂರ್ಖತನವೇನೋ? ರಾಜ್ಯದ ಒಂದೊಂದೇ ಸಮೃದ್ಧ ದೇವಾಲಯ ಸಂಘ ಪರಿವಾರದ ಸೋಗಲಾಡಿ ಸ್ವಾಮಿ-ಮಠಾಧೀಶರಿಗೆ ಪರಭಾರೆ ಮಾಡುತ್ತಿರುವ ಯಡ್ಡಿಯ ಎಡವಟ್ಟುಗಳಿಗೆ ಎಣೆಯುಂಟೇ? ಗೋಕರ್ಣ ಗಲಾಟೆಯಂತೆ ಉಡುಪಿ ಉಪದ್ವ್ಯಾಪ ಶುರುವಾಗುವುದಂತೂ ಗ್ಯಾರಂಟಿ!

ಮೊದಲು ಭರ್ಜರಿ ಹುಂಡಿ-ಆಸ್ತಿ-ಬಂಗಾರದ ಗೋಕರ್ಣ ದೇವಸ್ಥಾನ, ಬಳಿಕ ಉಡುಪಿಯ ಹಣವಂತ ಕಡಿಯಾಳಿದೇಗುಲ, ಈಗ ಉಡುಪಿಯ ಕೋಟ್ಯಾಧೀಶ ಕೃಷ್ಣ... ಸರ್ಕಾರಿ (ಸಾರ್ವಜನಿಕ) ಹಕ್ಕಿನಿಂದ ಡಿನೋಟಿಫೈಯಾಗಿ ಖಾಸಾ ಆಸ್ತಿಯಾಗುತ್ತಿವೆ, ಸರ್ಕಾರಿ ಬೊಕ್ಕಸ ಕೊಳ್ಳೆ ಹೊಡೆದು ಪಟ್ಟಭದ್ರ ಖಾಸಗಿ ಕಾವಿಗಳ ಖಜಾನೆ ತುಂಬುತ್ತಿರುವ ಯಡ್ಡಿಯ ಪಂಚೇಂದ್ರಿಯಗಳು ಇಂಗಿ ಹೋಗಿವೆಯಾ? ಹಾಗಂತ ಉಡುಪಿ ಕೃಷ್ಣ ದೇವಸ್ಥಾನದ ಅಕ್ರಮ ಡಿನೋಟಿಫಿಕೇಶನ್ ವೃತ್ತಾಂತವನ್ನು ಕಂಡವರು ಕೇಳುತ್ತಿದ್ದಾರೆ. ಇದೆಂಥ ದರಿದ್ರ ಧರ್ಮಕಾರಣ?

● ನಹುಶ

...ಹಾಕಿ ಸಭೆ ನಡೆಸಿದ್ದಾರೆ. ಆದರೂ ಕೇಸು ಮಾತ್ರ ...ಲಾಗುವುದಿಲ್ಲ.

...ಗೋವಿಂದರಾಜು ಬಿ.ಎಸ್.ಪಿ. ಮುಖಂಡ ...ಮೂರ್ತಿ ಸಂಪರ್ಕ ಮಾಡಿ, ಎಸ್.ಪಿ. ...ಸುಂದರ್ ಸಂಪರ್ಕಿಸಿದ ಮೇಲೂ ಅಯೋಧ್ಯೆ ...ನ ನೆಪ ಒಡ್ಡಿ ಕೇಸನ್ನು ದಾಖಲಿಸುವುದೇ ಇಲ್ಲ, ...ಾಗಿ ಮುಖಂಡ ಕೃಷ್ಣಮೂರ್ತಿ ನೇತೃತ್ವದಲ್ಲಿ ...ಂದರಾಜು ಮತ್ತಿತರರು ಎಸ್.ಪಿ. ಮತ್ತು ಐಜಿಪಿ



...ರ್ಗೆ ಭೇಟಿ ಮಾಡಿದಮೇಲೆ ಕೇಸು ದಾಖಲಿಸಿ ...ಕ್ಷಿ ನೀಡಲು ಡಿ.ವೈ.ಎಸ್.ಪಿ ಜಗದೀಶ್‌ಗೆ ...ಸುತ್ತಾರೆ. ಸಾರಾ ಸಂಬಂಧಿ ಜಗದೀಶ್ ...ಂದನೆ ಹದ ತೆಗೆಯಲು ಒತ್ತಾಯಿಸಿ ಹೊಸ ...ಶುರು ಮಾಡಿದ್ದಾನೆ. ಇದಕ್ಕೊಪ್ಪದ್ದರಿಂದ ಸಾರಾಗೆ ...ತಿ ರವಾನೆಯಾಗಿದೆ. ಸಣ್ಣಪುಟ್ಟ ಸೆಕ್ಷನ್‌ಗಳನ್ನ... ಒಂದು ಕೇಸು ಹಾಕಲಾಗಿದೆ. ಒತ್ತಡದಿಂದ ...ಗೌಡ ಮತ್ತು ಆತನ ಮಗ ಇಬ್ಬರನ್ನು ಬಂಧಿಸಿ ಅದೇ ದಿನ ಬಿಡುಗಡೆಯ ನಾಟಕವೂ ನಡೆದುಹೋಗಿದೆ.

ಇದು ಸಾರಾ ಮಹೇಶ್ ಫ್ಯಾಮಿಲಿಯ ಕೋಪಕ್ಕೆ ಪೆಟ್ರೋಲ್ ಸುರಿದಂತಾಗಿದೆ. ತಮ್ಮ ಸಂಬಂಧಿಗಳಾದ ಸ್ವಾಮಿಗೌಡ, ಶಿವಣ್ಣೇಗೌಡ, ಕೆಂಬೂತಿಗೌಡರಂತಹ ಫ್ಯೂಡಲ್‌ಗಳು ಸೇರಿದಂತೆ ಸುಮಾರು ಒಂದು ಸಾವಿರ ಒಕ್ಕಲಿಗರನ್ನು ಕಲೆಹಾಕಿ ಬಹಿಷ್ಕಾರದ ಅಮಾನವೀಯ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಇದು ಸಾಲಿಗ್ರಾಮದ ಸುತ್ತಮುತ್ತಲಿನ ದಲಿತರಿಗೆ ಎಚ್ಚರಿಕೆ ನೀಡಲು ಮತ್ತು ಆರ್ಥಿಕ ಹೊಡೆತ ನೀಡಲು ಕರೆ ನೀಡಿದ್ದಾರೆ.


ದಲಿತರಿಗೆ ಕೆಲಸ ನೀಡಿದರೆ, ಮಾತನಾಡಿಸಿದರೆ 2000 ದಂಡ ವಿಧಿಸಲಾಗುವುದು ಮತ್ತು ಇದನ್ನು ನೋಡಿ ಯಜಮಾನರಿಗೆ ತಿಳಿಸಿದರೆ 500 ರೂ.ಗಳ ಬಹುಮಾನ ಎಂದು ಪೊಲೀಸ್ ಠಾಣೆಯ ಎದುರೇ ಘೋಷಿಸಿದ್ದಾರೆ. ಇವೆಲ್ಲವನ್ನೂ ಸಾರಾ ತಂದೆ ಮತ್ತು ತಮ್ಮ ರವೀಶ್ ಸಮ್ಮುಖದಲ್ಲೇ ನಡೆಸಲಾಗಿದೆ.

ಜೀತದಿಂದಲೂ ಹೊರಗೆ ಕಳುಹಿಸಿದ್ದಾರೆ.

ಸಾರಾ ಮಹೇಶ್ ಕುಟುಂಬವು ಎಂತಹ ಕ್ರೂರಿ ಎಂಬುವುದಕ್ಕೆ ಇದೇ ಸಾಕ್ಷಿ. 4000 ದಲಿತರಲ್ಲಿ ತುಂಡು ಭೂಮಿ ಇರುವುದು ಕೇವಲ ಹತ್ತುಹದಿನೈದು



ಜನರಿಗಷ್ಟೆ. ಮಿಕ್ಕವರು ಕೂಲಿ ನಾಲಿ ಮಾಡಿ, ಪುರಿ ಉಂಡೆ ಮಾಡುವ ಭಟ್ಟಿಗಳಲ್ಲಿ, ಒಕ್ಕಲಿಗರ ಮತ್ತು ಮೇಲ್ಜಾತಿ ಜನರ ಬಳಿ ಕೆಲಸಗಳನ್ನವಲಂಬಿಸಿ ಕೊಂಡಿರುವವರೇ. ಆದರಲ್ಲೂ ಬಹುಪಾಲು ದಲಿತರ ಭೂಮಿಗಳು ಸಣ್ಣಪುಟ್ಟ ಸಾಲಗಳಿಗೆ ಒಕ್ಕಲಿಗರ ಪಾಲಾಗಿವೆ. ಇಂತಹ ಸಂದರ್ಭವನ್ನು ಬಳಸಿಕೊಂಡು ಕಾಂಗ್ರೆ ಓಟ್‌ಬ್ಯಾಂಕಾಗಿದ್ದ ದಲಿತರನ್ನು ಹಣಿಯಲು, ಅವರು ಕೆಲಸ ಮಾಡುತ್ತಿದ್ದ ಶಾಮಿಯಾನ ಅಂಗಡಿಗಳು, ಸಿನಿಮಾ ಮಂದಿರ, ಕೇಬಲ್ ಅಂಗಡಿ, ರೈಸ್ ಮಿಲ್‌ಗಳಲ್ಲಿ ಕೆಲಸ ಮಾಡುತ್ತಿದ್ದ ದಲಿತರನ್ನು ಹೊರದಬ್ಬಿಸಿ, ಮಾಲಿಕರಿಗೆ ಖುದ್ದು ರಾಮೇಗೌಡ ಎಚ್ಚರಿಕೆ ನೀಡಿದ್ದಾನೆ.





ಅಷ್ಟೇ ಅಲ್ಲದೆ ಹತ್ತಾರು ವರ್ಷಗಳಿಂದ ಶಿವಣ್ಣಗೌಡ, ರವೀಗೌಡ, ರವೀಶ, ಹಂಪಾಪುರದ ಶಿವಣ್ಣರ ಪುರಿ ಬಟ್ಟಿಗಳಲ್ಲಿ ಜೀತ ಮಾಡುತ್ತಿದ್ದ ದಲಿತರನ್ನು ಏಕಾಏಕಿ ಅಮಾನವೀಯವಾಗಿ ಹೊರ ಹಾಕಿಸಲಾಗಿದೆ. ಪಕ್ಕದ ಊರಿಗೆ ಮಹಿಳೆಯರು ಕೂಲಿಗೆ ಹೋಗಿದ್ದರೂ ಸಹಿಸದೆ ಅಲ್ಲಿಂದಲೂ ಕೆಲಸದಿಂದ ಅರ್ಧಕ್ಕೆ ಕಳುಹಿಸಿ ತಮ್ಮ ಜಾತಿ ಕ್ರೌರ್ಯ ಮೆರೆದಿದ್ದಾರೆ. ಇಷ್ಟೆಲ್ಲಾ ಅನಾಹುತಗಳಿಗೆ ಇದೇ ಸಾರಾ ಫ್ಯಾಮಿಲಿ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದೆ. ಇವೆಲ್ಲಾ ಪೊಲೀಸರಿಗೆ ಗೊತ್ತಿದ್ದರೂ ಸಾರಾ ಮಹೇಶ್‌ನ ಏಜೆಂಟರಂತೆ ಡಿವೈಎಸ್ಪಿ ಜಗದೀಶ್ ಮತ್ತು ಎಸ್.ಐ ಶಿವನಂಜಶೆಟ್ಟಿ ಕೆಲಸ ಮಾಡಿದ್ದಾರೆ. ಸಾರಾ ಮಹೇಶ್ ಪಕ್ಕಾ ಫ್ಯೂಡಲ್‌ನಂತೆ ಕೆಲಸ ಮಾಡಿದ್ದಾನೆ.

ಇನ್ನು ಇಲ್ಲಿನ ಮಾಧ್ಯಮದವರು ಸಾರಾನ ಎಂಜಲು ಕಾಸಿಗೆ ಬಾಯೊಡ್ಡಿ ಹೊಗಳುಭಟರಂತೆ ಸುಮ್ಮನಾಗಿದ್ದಾರೆ. ದಲಿತರ ಬದುಕು ಮಾತ್ರ ದುಸ್ತರವಾಗಿದೆ. ಮೈಸೂರು ಜಿಲ್ಲಾಡಳಿತ ದಲಿತರ ಪಾಲಿಗೆ ಸತ್ತು ಹೋಗಿರುವಂತಿದೆ. ಬಹುಶಃ ಬಿಎಸ್ಪಿಯ ಕೃಷ್ಣಮೂರ್ತಿ, ಎನ್.ಮಹೇಶ್, ಸುಭಾಷ್ ಭರಣಿ ಸ್ಥಳಕ್ಕೆ ಭೇಟಿ ಕೊಟ್ಟು ದಲಿತರಿಗೆ ಧೈರ್ಯಹೇಳಿ, ಮಾಧ್ಯಮಗಳಲ್ಲಿ ಮಾತಾಡದಿದ್ದರೆ ಇದು ಹೊರ ಜಗತ್ತಿಗೆ ಗೊತ್ತಾಗದೆ ಅದೇ ನರಕಯಾತನೆಯಲ್ಲಿ ದಲಿತರು ನರಳಬೇಕಾಗುತ್ತಿತ್ತೇನೋ. ಭರಣಿ ಜಿಲ್ಲಾಡಳಿತಕ್ಕೆ ಎಕ್ಕಾಮಕ್ಕ ಜಾಡಿಸಿದ್ದಕ್ಕೆ ಡಿಸಿ ಹರ್ಷಗುಪ್ತ ಕ್ಷಮೆ ಕೇಳಿ ದಲಿತಕೇರಿಗೆ ಬರುವಂತಾಗಿದೆ. ಇಂತಹ ಸಂದರ್ಭದಲ್ಲಿ ಪ್ರತೀ ಚುನಾವಣೆಯಲ್ಲೂ ದಲಿತರ ಓಟನಿಂದ ಗೆದ್ದು ಬರುತ್ತಿದ್ದ ಕಾಂಗ್ರೆಸಿನವರು ನರವಿಲ್ಲದವರಾಗಿದ್ದಾರೆ. ದಲಿತ ಸಂಘಟನೆಗಳವರು ವಾಯ್ಸ್ ಮಾಡುತ್ತಿದ್ದ ಕಾಲ ಇತಿಹಾಸದ ಪುಟ ಸೇರಿಕೊಂಡಿದೆ.

● ಲಕ್ಷ್ಮಣ್ ಚೀರನಹಳ್ಳಿ
lakshmancheeranahally@gmail.com

ಯಡ್ಡಿಯ ಯಡವಟ್ಟುಗಳು ಮತ್ತು ಸೋಮಣ್ಣ ಎಂಬ ಶನಿಪರಮಾತ್ಮ





ಶಾಸಕರ ಅಸಮಾಧಾನ, ಸಿಟ್ಟು, ಅವರವರೊಳಗೇ ಏರ್ಪಡುತ್ತಿದ್ದ ಒಳಸಂಚುಗಳು, ವಿರೋಧಿ ನಾಯಕರೊಡನೆ ಕದ್ದುಮುಚ್ಚಿ ನಡೆಸುತ್ತಿದ್ದ ಚಕ್ಕಂದ, ಜೊತೆಗಿದ್ದೇ ದಿಕ್ಕು ತಪ್ಪಿಸುತ್ತಿದ್ದ ಭಟ್ಟಂಗಿಗಳ ಮರ್ಮ ಇತ್ಯಾದಿ ಕುದಿಯುತ್ತಿದ್ದ ಒಳಬೇಗುದಿಯನ್ನು ಕಂಡೂ ಕಾಣದೇ ಹೋದ ಮುಖ್ಯ ಮಂತ್ರಿಯ ವೈಫಲ್ಯಕ್ಕೆ ಕಾರಣವೇನು?

ಅಂಥ ಅನೇಕ ಕಾರಣಗಳ ಪೈಕಿ ಒಂದು ಸೋಮಣ್ಣ!

ವಿಜಯನಗರದ ಸೋಕಾಲ್ಡ್ ವೀರಪುತ್ರ ಸೋಮಣ್ಣ ಬಿಜೆಪಿಗೆ ಕಾಲಿಟ್ಟಗಳಿಗೆಯೇ ಸರಿಯಿಲ್ಲವೋ ಅಥವಾ ಸೋಮಣ್ಣನದ್ದೇ ಭಸ್ಮಾಸುರ ಹಸ್ತವೋ ಗೊತ್ತಿಲ್ಲ. ಸೋಮಣ್ಣನನ್ನು ಬಿಜೆಪಿಗೆ ಕರೆತಂದು ಎಮ್ಮೆಲ್ಸಿ ಮಾಡಿದ್ದೂ ಅಲ್ಲದೇ ಮಂತ್ರಿ ಮಾಡಿಬಿಟ್ಟರೆ ಸಲೀಸಾಗಿ ಗಣಿರೆಡ್ಡಿಗಳನ್ನು ತೆಪ್ಪಗಾಗಿಸಬಹುದೆಂಬುದು ಯಡ್ಡಿಯ ಲೆಕ್ಕಾಚಾರವಾಗಿತ್ತು, ಜೊತೆಗೆ ತನ್ನ ವಿರುದ್ಧ ಒಳಗೊಳಗೇ ಕತ್ತಿ ಮಸೆಯುತ್ತಿದ್ದ ಶೆಟ್ಟರ್, ಈಶ್ವರಪ್ಪ, ಅನಂತ್ ಇತ್ಯಾದಿಗಳನ್ನೂ ಸದ್ದಡಗಿಸಬಹುದೆಂಬ ದೂರಾಲೋಚನೆಯೂ ಇತ್ತು.

ಯಾವತ್ತು ಸೋಮಣ್ಣನಿಗೆ ಮಂತ್ರಿಗಿರಿ ದಕ್ಕುವುದು ಗ್ಯಾರಂಟಿಯಾಯ್ತೋ ಒಂದೊಂದೇ ಅಪಸ್ವರ ಕೇಳಲಾರಂಭಿಸಿತು. ಯಡ್ಡಿ ಅದನ್ನು ನಿರ್ಲಕ್ಷಿಸಬಾರದಿತ್ತು, ಆದರೆ ಸೋಮಣ್ಣನ ತಾಕತ್ತಿನ ಮೇಲೆ ವಿಶ್ವಾಸವಿತ್ತಲ್ಲ, ಅದು ಮೊದಲ ಬಾರಿಗೆ ಹುಸಿಯಾದದ್ದು ಗಣಿರೆಡ್ಡಿಗಳ ಹೈದರಾಬಾದ್ ರೆಸಾರ್ಟ್ ಬಂಡಾಯದಿಂದ. ರೇಣುಕಾಚಾರ್ಯ, ಬೇಳೂರು, ಶೆಟ್ಟರ್ ಮತ್ತು ಪಕ್ಷೇತರ ಮಂತ್ರಿಗಳೆಲ್ಲರೂ ರೆಡ್ಡಿಗಳ ಜೊತೆ ಕೈಜೋಡಿಸಿ ಯಡ್ಡಿ ವಿರುದ್ಧ ಬುಸುಗುಡುತ್ತಿದ್ದರೆ, ಟ್ರಬಲ್ ಶೂಟರ್ ಸೋಮಣ್ಣ ಸಿದ್ಧಗಂಗೆ ಮಠ ಸೇರಿಕೊಂಡು ಬೆವರೊರೆಸಿಕೊಳ್ಳುತ್ತಿದ್ದ!

ಕರಂದ್ಲಾಜೆ ಜೊತೆ ಸೋಮಣ್ಣನೂ ತಲೆದಂಡ ತೆರಬೇಕಾಯ್ತು.

ಅಷ್ಟಾಗ್ಯೂ ಯಡ್ಡಿಗೆ ಸೋಮಣ್ಣನ ವ್ಯಾಮೋಹ ಬಿಡಲಿಲ್ಲ. ಸೋಮಣ್ಣ ಮಹತ್ವಾಕಾಂಕ್ಷಿ. ದೇವೇಗೌಡರನ್ನು ಬಿಟ್ಟರೆ ದಿನದ 24 ಗಂಟೆಯೂ ರಾಜಕೀಯದ ಕಿತಾಪತಿಯಲ್ಲೇ ಮುಳುಗುವ ಮತ್ತೊಬ್ಬ ಪುಡಾರಿಯೆಂದರೆ ಅದು ಸೋಮಣ್ಣ. ತನ್ನ ಮನೆಗೆ ರಾಷ್ಟ್ರಪತಿ, ಪ್ರಧಾನಿಗಳ್ಯಾರೂ ಬರಲಿ ಬಿಡಲಿ ಅದಕ್ಕಿಂತಲೂ ಪ್ರತಿನಿತ್ಯ ಬರುತ್ತಿದ್ದ ಕಾರ್ಪೊರೇಟರ್ ಓರ್ವ ಬರಲಿಲ್ಲವೆಂದರೆ ಸೋಮಣ್ಣ ಸಿಕ್ಕಾಪಟ್ಟೆ ತಲೆಕೆಡಿಸಿಕೊಳ್ಳುತ್ತಾನೆ. ಅಭಿವೃದ್ಧಿ ಕಾಮಗಾರಿಗಳ ವಿಷಯದಲ್ಲಿ ಅದೆಷ್ಟೇ ನಿಸ್ಸೀಮನಾದರೂ ಸೋಮಣ್ಣ ಜನಕ್ಕೆ ಒಳ್ಳೇದು ಮಾಡಿದ್ದಕ್ಕಿಂತಲೂ ಕೆಡುಕು ಮಾಡಿದ್ದೇ ಹೆಚ್ಚು.




ರವೀಂದ್ರನಂಥ ಕ್ರಿಮಿನಲ್‌ಗಳನ್ನೇ ಆಯ್ದು ಪಾಲಿಕೆಗೆ ಗೆಲ್ಲಿಸಿದ್ದು, ವಿಶ್ವನಾಥ ಗೌಡ, ನಟೋರಿಯಸ್ ನಂಬಿಕೈ, ರೌಡಿ ಉಮೇಶ, ಲ್ಯಾಂಡ್ ಡೀಲರ್ ಮೋಹನ್, ದಾಸರಹಳ್ಳಿ ಕಿಟ್ಟಿಯಂಥ ಕಿರಾತಕರನ್ನೇ ಜೊತೆ ಹಾಕಿಕೊಂಡಿದ್ದು, ತನಗಾಗಿ ದುಡಿದು ರೋಸತ್ತವರ ಮೇಲೆ ಪೊಲೀಸರನ್ನು ಛೂಬಿಟ್ಟು ಕೇಸು ಹಾಕಿಸಿದ್ದು; ಹೀಗೆ ಸೋಮಣ್ಣ ವಿಜಯನಗರಕ್ಕೆ ಒಳ್ಳೇದು ಮಾಡಿದ್ದಕ್ಕಿಂತಲೂ ಕೆಟ್ಟದ್ದು ಬಗೆದದ್ದೇ ಹೆಚ್ಚು. ಇಂಥಾ ಸೋಮಣ್ಣನನ್ನು ಬೇಕಿದ್ದರೆ ಬಲಗೈ ಬಂಟನಂತೆ ಇಟ್ಟುಕೊಳ್ಳಬಹುದಿತ್ತು. ತೆರೆಮರೆಯಲ್ಲೇ ಕಿಂಗ್‌ಮೇಕರ್ ಪಾತ್ರವನ್ನು ಸೋಮಣ್ಣ ನಿರ್ವಹಿಸಬಹುದಿತ್ತು.

ಮೊದಲ ಬಾರಿ ಮಂತ್ರಿಗಿರಿಯಿಂದ ಸೋಮಣ್ಣನನ್ನು ಇಳಿಸಿದ ಮೇಲೂ ಯಡ್ಡಿ ಬುದ್ಧಿ ಕಲಿಯಲಿಲ್ಲ, ಮತ್ತೆ ಮುಖ್ಯಮಂತ್ರಿ ಕಚೇರಿಯೊಳಕ್ಕೇ ಬಿಟ್ಟುಕೊಂಡರು. ಸಿದ್ಧಗಂಗೆ ಸ್ವಾಮಿಗಳ ಮಾನಸಪುತ್ರನಂತೆ ಯಡ್ಡಿ ಪಾಳಯಕ್ಕೆ ವಕ್ಕರಿಸಿದ ಸೋಮಣ್ಣ ಪ್ರತಿ ಮಂತ್ರಿಗಳ ಖಾತೆಯಲ್ಲೂ ಕೈಹಾಕತೊಡಗಿದ. ಸಹಜವಾಗೇ ರೇಣುಕಾಚಾರ್ಯ, ಗೂಳಿಹಟ್ಟಿ, ಅಸ್ನೋಟಿಕರ್ ಮತ್ತು ಸುಧಾಕರ್ ಥರದವರಿಗೆ ಹೊಟ್ಟೆಕಿಚ್ಚು ಶುರುವಾಯಿತು.

ಮತ್ತೊಂದೆಡೆ ಯಡ್ಡಿ ಮಗ ವಿಜಯೇಂದ್ರನನ್ನೇ ಬುಟ್ಟಿಗೆ ಹಾಕಿಕೊಂಡು ಡೀನೋಟಿಫಿಕೇಷನ್ ದಂಧೆಗೆ ಕೈಯಿಟ್ಟ. ನೋಡಪ್ಪಾ, ನಿಮ್ಮಪ್ಪನ್ನ ನಂಬಿಕೊಂಡ್ರೆ ಬಾಯಿಗೆ ಮಣ್ಣು ಬೀಳುತ್ತೆ, ಅಧಿಕಾರ ಇರೋವಾಗ ನಾಲ್ಕು ಕಾಸು ದುಡಕೋಬೇಕು... ಎಂದು ವಿಜಯೇಂದ್ರನ ತಲೆ ತಿಕ್ಕಿ ಕೋಟಿಗಟ್ಟಲೇ ಡಿನೋಟಿಫಿಕೇಷನ್ ಹಗರಣ ಮಾಲೆಗೆ ಕಾರಣಕರ್ತನೇ ಸೋಮಣ್ಣ!

ಸದ್ಯ ಮಾಜಿ ಸಿಎಂ ಕುಮಾರಸ್ವಾಮಿ ಆರೋಪಿಸಿದ ನಾಗರಬಾವಿ ಡಿನೋಟಿಫಿಕೇಷನ್ ಕರ್ಮಕಾಂಡವೊಂದೇ ಸೋಮಣ್ಣನ ಕಿಲಾಡಿಬುದ್ಧಿಗೆ ಹೇಳಿ ಮಾಡಿಸಿದಂತಿತ್ತು.



ನಾಗರಬಾವಿಯ ಸರ್ವೆ ನಂ. 78 ರಲ್ಲಿದ್ದ 5.13 ಎಕರೆ ಬಿಡಿಎ ಸೊತ್ತಿನ ಸದ್ಯದ ಮಾರುಕಟ್ಟೆ ಬೆಲೆಯೇ ನೂರು ಕೋಟಿಯಷ್ಟಾಗುತ್ತದೆ. ಮೂಲತಃ ಸೊಸೈಟಿ ನಾರಾಯಣಪ್ಪನಿಗೆ ಸೇರಿದ ಈ ಭೂಮಿಯನ್ನು 1985 ರಲ್ಲೇ ಬಿಡಿಎ ಅಂತಿಮ ಅಧಿಸೂಚನೆಯ ಮೂಲಕ ಬಡಾವಣೆ ನಿರ್ಮಾಣಕ್ಕೆಂದು ಸ್ವಾಧೀನಪಡಿಸಿಕೊಂಡಿತ್ತು. ಅದರ ಪರಿಹಾರದ ಮೊತ್ತ ಕೂಡ ನ್ಯಾಯಾಲಯದಲ್ಲಿ ಜಮೆಯಾಗಿತ್ತು. 1991 ರ ಸೆಪ್ಟೆಂಬರ್ 26 ರಂದು ಇಡೀ ಆಸ್ತಿಯನ್ನು ತನ್ನ ವಶಕ್ಕೆ ತೆಗೆದುಕೊಂಡ ಬಿಡಿಎ ವಿರುದ್ಧ ನಾರಾಯಣಪ್ಪ ಕೋರ್ಟ್ ಮೆಟ್ಟಿಲು ಹತ್ತಿದ್ದ. ಹೈಕೋರ್ಟ್ ಖಡಾಖಂಡಿತವಾಗಿ ನಾರಾಯಣಪ್ಪನ ಅರ್ಜಿಯನ್ನು ತಳ್ಳಿ ಹಾಕಿತ್ತು.

ಅನಂತರ ಸುಪ್ರೀಂ ಕೋರ್ಟಿಗೂ ಅಪೀಲು ಹೋ[...] ನಾರಾಯಣಪ್ಪ ಬಿಡಿಎ ವಶಪಡಿಸಿಕೊಂಡಿದ್ದ ತನ್ನ ಭೂಮಿ[...]ಯನ್ನು ಬಿಟ್ಟುಕೊಡುವಂತೆ ಏನೇ ಸರ್ಕಸ್ ಮಾಡಿದರೂ ಪ್ರಯೋಜನವಾಗಲಿಲ್ಲ. ಇತ್ತೀಚೆಗಷ್ಟೇ ಸುಪ್ರೀಂಕೋರ್ಟ್ ಕೂಡ ಸರ್ಕಾರ ಒಮ್ಮೆ ವಶಪಡಿಸಿಕೊಂಡ ಜಮೀನನ್ನು ಮತ್ತೆ ಭೂಮಾಲೀಕನಿಗೆ ನೀಡಲು ಸಾಧ್ಯವಿಲ್ಲ ಎಂದು ನಾರಾಯಣಪ್ಪನ ಅರ್ಜಿಯನ್ನು ವಜಾ ಮಾಡಿತ್ತು.

ಆ ಪ್ರಕಾರವೇ ನಿಸ್ಸಂಶಯವಾಗಿ ನಾಗರಬಾವಿಯ 5.13 ಎಕರೆ ಭೂಮಿ ಬಿಡಿಎ ಸೊತ್ತಾಗಿ ಹೋಗಿತ್ತು. ಅದಿ[...] ಕನಿಷ್ಠ ನಾಲ್ಕು ಸಾವಿರ ರೂಪಾಯಿಯಂತೆ ಮಾರಾಟಕ್ಕಿಟ್ಟರೂ ಇವತ್ತಿನ ರೇಟಿಗೆ ನೂರು ಕೋಟಿಗೂ ಅಧಿಕ ಬೆಲೆಬಾಳುವ ಆಸ್ತಿ. ಇದಕ್ಕೆ ಕಣ್ಣು ಹಾಕಿದ್ದು ಸೋಮಣ್ಣ. ಸೊಸೈಟಿ ನಾರಾಯಣಪ್ಪನನ್ನು ಕರೆಸಿಕೊಂಡಿದ್ದೇ ಡೀಲು ಕುದುರಿಸಿಕೊಂಡು ತನಗೆ 60x40 ಅಳತೆಯ ಐದು ಸೈಟು, ಆದಿ ಚುಂಚನಗಿರಿ ಬಾಲಗಂಗಾಧರನಾಥ ಸ್ವಾಮಿಗೆ ಮುಕ್ಕಾಲು ಎಕರೆ ಮತ್ತು ಯಡ್ಡಿ ಮಗ ವಿಜಯೇಂದ್ರನಿಗೆ ಒಂದೂವ[...] ಎಕರೆ ಕೊಟ್ಟರಷ್ಟೇ ಡೀನೋಟಿಫೈ ಮಾಡಿಸುತ್ತೇನೆಂದು ನಂಬಿಸಿದ್ದ.

ಸುಪ್ರೀಂಕೋರ್ಟಿಗೆ ಹೋದರೂ ಪ್ರಯೋಜನವಾಗದೆ ಪೂರ್ತಿ ಕೈತಪ್ಪಿ ಹೋಗಿದ್ದ ಆಸ್ತಿಯಲ್ಲಿ ಪಾಲಿಗೆ ಬಂದದ್ದೇ ಪಂಚಾಮೃತ ಎಂಬ ಲೆಕ್ಕಕ್ಕೆ ನಾರಾಯಣಪ್ಪ ಬಂದ[...] ಸುಪ್ರೀಂಕೋರ್ಟ್ ಆದೇಶವನ್ನೇ ಧಿಕ್ಕರಿಸಿ, ಕಾಯ್ದೆ ಕಾನೂನುಗಳನ್ನೆಲ್ಲ ಬದಿಗೊತ್ತಿದ ಮುಖ್ಯಮಂತ್ರಿ ಯಡ್ಡಿ ಇಡೀ 5.13 ಎಕರೆ ಬಿಡಿಎ ಆಸ್ತಿಯನ್ನು ಡೀನೋಟಿಫೈ ಮಾಡಿಬಿಟ್ಟರು.

ಯಡ್ಡಿಯ ಎರಡೂವರೆ ವರ್ಷ: ನೂರೆಂಟು ಹಗರಣಗಳು, ಹತ್ತಾರು ದೋಖಾಗಳು...

2008

ಮೇ : ರಾಜ್ಯದಲ್ಲಿ ಮೊದಲ ಬಾರಿಗೆ ಬಿಜೆಪಿ 110 ಸೀಟುಗಳೊಂದಿಗೆ ಅಧಿಕಾರ ಗದ್ದುಗೆಯ ಸಮೀಪಕ್ಕೆ ಬಂದು, ಅಗತ್ಯ ಸಂಖ್ಯಾಬಲಕ್ಕಾಗಿ 'ಆಪರೇಷನ್ ಕಮಲ' ಎಂಬ ಹೇಸಿಗೆಯ ಕಾರ್ಯಕ್ರಮವನ್ನು ಆರಂಭಿಸುವ ಮೂಲಕ ಜನನದಲ್ಲೇ ಜನದ್ರೋಹಿ ಪಟ್ಟ ಕಟ್ಟಿಕೊಂಡಿತು. ಒಂದು ರೀತಿಯಲ್ಲಿ, ಬಿಜೆಪಿಯ ಗೆಲುವು ಕೆಳಜಾತಿಗಳ ವಿರುದ್ಧ ಮೇಲ್ಜಾತಿಗಳು ತೆಗೆದುಕೊಂಡ ಪ್ರತೀಕಾರದಂತಿತ್ತು.

* ಬೆಂಗಳೂರಿನಿಂದ ಸುಮಾರು ಡಜನ್ ಭೂಗಳ್ಳರು ಬಿಜೆಪಿಯಿಂದ ಗೆದ್ದು ಬಂದು ಮುಂಬರುವ ಭೂದರೋಡೆಯ ಮುನ್ಸೂಚನೆ ನೀಡಿದ್ದರು.

ಜೂನ್: ಗಣಿ ರೆಡ್ಡಿಗಳ ಹಡಬೆ ದುಡ್ಡಿನಿಂದ ಪಕ್ಷೇತರ ಶಾಸಕರನ್ನು ಖರೀದಿಸಿ ಸಿ.ಎಂ. ಆದ ಯಡಿಯೂರಪ್ಪ ಇಡೀ ಸರ್ಕಾರವನ್ನು ಗಣಿರೆಡ್ಡಿಗಳ ಕಪಿಮುಷ್ಠಿಯಲ್ಲಿಟ್ಟು ರಾಜ್ಯದ ಮತದಾರರಿಗೆ ಅವಮಾನ ಮಾಡಿದ.

* ಪ್ರಮಾಣ ವಚನದ ಕಾವು ಆರುವ ಮುನ್ನವೇ ಹಾವೇರಿಯಲ್ಲಿ ಗೊಬ್ಬರಕ್ಕಾಗಿ ಪ್ರತಿಭಟಿಸಿದ ರೈತರ ಮೇಲೆ ಗೋಲಿಬಾರ್ ನಡೆಸಿದ ಯಡ್ಡಿ ಸರ್ಕಾರ ಇಬ್ಬರು ಅನ್ನದಾತರನ್ನು ಬಲಿ ತೆಗೆದುಕೊಳ್ಳುವ ಮೂಲಕ ರಕ್ತ ಅಂಟಿದ ಕೈಗಳಿಂದಲೇ ಆಡಳಿತ ಆರಂಭಿಸಿತು.



* ಇದರ ಬೆನ್ನಲ್ಲೇ ಉಡುಪಿಯ ಬೆಡ್ಡಿ ಶಾಸಕ ರಘುಪತಿಭಟ್ಟನ ಪತ್ನಿ ಪದ್ಮಪ್ರಿಯ ನಿಗೂಢವಾಗಿ ಸತ್ತಾಗ, ಯಡ್ಡಿ ಸರ್ಕಾರ ಸರಿಯಾದ ತನಿಖೆ ನಡೆಸದೇ ರಘುಪತಿಭಟ್ಟನ ಪರ ನಿಂತಿತು. ಘಟನಾವಳಿಗಳ ಜಾಡು ಹಿಡಿದಾಗ ಪದ್ಮಪ್ರಿಯಾ ಕೊಲೆಯಾಗಿದ್ದು ಆ ಕೊಲೆಯ ಹಿಂದೆ ಶಾಸಕ ರಘುಪತಿಭಟ್ಟ, ಗೃಹ ಸಚಿವ ಆಚಾರ್ಯರ ನೆರಳೇ ಕಂಡಿತ್ತು. ಮುಂದೆ ಪೊಲೀಸರ ಸಹಾಯದಿಂದ ಈ ಕೊಲೆ ತನಿಖೆಯನ್ನು ಹಾದಿ ತಪ್ಪಿಸುತ್ತ ಬರಲಾಗುತ್ತಿದೆ.

* ಇವತ್ತು ಭಾರೀ ಸುದ್ದಿಯಲ್ಲಿರುವ ಕಟ್ಟಾ ಜಗ್ಗನ ಕೆಐಎಡಿಬಿ ಹಗರಣದ ಕುರಿತು 'ಲಂಕೇಶ್' ಅಂದೇ ಬರೆದಿತ್ತು, ಆ ಕಾಲದಲ್ಲೇ. ಬಿಜೆಪಿ ಅಧಿಕಾರಕ್ಕೆ ಬಂದ ತಿಂಗಳಲ್ಲೇ ತನ್ನ ಭೂಗಳ್ಳತನದ ವಿರುದ್ಧ ಪ್ರತಿಭಟಿಸಿದ ದೇವನಹಳ್ಳಿಯ ರೈತನಾಯಕ ಡಿ.ಎಸ್. ಗೌಡರ ಮೇಲೆ ಕಟ್ಟಾ ಜಗ್ಗನ ಗ್ಯಾಂಗ್ ಮಾರಣಾಂತಿಕ ಹಲ್ಲೆ ನಡೆಸಿತು.

ಜುಲೈ: ಬೀಜ, ಗೊಬ್ಬರಗಳ ಕೊರತೆ, ಸಾಲದ ಕಾಟದಿಂದ ಶಿಕಾರಿಪುರದ ಅಂಜನಾಪುರದ ರೈತ ನಾರಾಯಣಸ್ವಾಮಿ ಆತ್ಮಹತ್ಯೆ ಮಾಡಿಕೊಂಡರು. ಯಡ್ಡಿ ಅಧಿಕಾರಕ್ಕೆ ಬಂದ ತಿಂಗಳಲ್ಲಿ ಹೀಗೆ 15 ರೈತರು ಆತ್ಮಹತ್ಯೆ ಮಾಡಿಕೊಂಡರು.

* ಬೆಂಗಳೂರಿನಲ್ಲಿ ಒಂದೇ ದಿನ (ಜುಲೈ 26) ಸಿಡಿದ ಒಂಭತ್ತು ಕಚ್ಚಾ ಬಾಂಬ್‌ಗಳನ್ನು ಆಪರೇಟ್ ಮಾಡಿದ ಶೈಲಿಗಳು ಹಿಂದೂತ್ವ ಭಯೋತ್ಪಾದಕರ ಶೈಲಿಯನ್ನೇ ಹೋಲುತ್ತಿದ್ದವು. ಮುಂದೆ ಈ ಪ್ರಕರಣವನ್ನೂ ದಾರಿ ತಪ್ಪಿಸಿ ಕೇರಳದ ಮದನಿ ತಲೆಗೆ ಕಟ್ಟಲಾಯಿತು.

ಆಗಸ್ಟ್: ಆರ್‌ಎಸ್‌ಎಸ್‌ನ ಗುಪ್ತ ಅಜೆಂಡಾದಂತೆ ಹಿಂದೂತ್ವದ ಪರವಿರುವ ಸ್ವಾಮಿಗಳಿಗೆ ಮಣೆ ಹಾಕಲು ಆರಂಭ. ಅದರ ಭಾಗವಾಗಿ ಸಗಣಿ ಸ್ವಾಮಿಯ ಮಡಿಲಿಗೆ ಅಜ್ಜಂಪುರದ ಅಮೃತಮಹಲ್ ರಾಸುಕೇಂದ್ರವನ್ನು ಹಾಕಲು ಯತ್ನಿಸಿತು. ಆದರೆ ಸ್ಥಳೀಯರು ರೊಚ್ಚಿಗೆದ್ದ ಮೇಲಷ್ಟೇ ಸರ್ಕಾರ ತೆಪ್ಪಗಾಗಬೇಕಾಯಿತು.

* ಆದಿ ಉಡುಪಿ ಬೆತ್ತಲೆ ಪ್ರಕರಣದ ಆರೋಪಿಗಳಾದ ಭಜರಂಗಿಗಳನ್ನು ಸರ್ಕಾರವೇ ರಕ್ಷಿಸಿತು. ಪ್ರಾಸಿಕ್ಯೂಷನ್ ಬೇಕೆಂತಲೇ ಸಾಕ್ಷ್ಯಾಧಾರಗಳನ್ನು ಕೋರ್ಟಿಗೆ ಒದಗಿಸದೇ ಹೋಗಿದ್ದರಿಂದ ಆರೋಪಿ ಭಜರಂಗಿಗಳು ಖುಲಾಸೆಗೊಂಡರು.

ಸೆಪ್ಟೆಂಬರ್: ಜಾತ್ಯತೀತ ಪರಂಪರೆ ಹೊಂದಿದ್ದ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನವನ್ನು ಡಕಾಯಿತ ಸ್ವಾಮಿ ರಾಘವೇಶ್ವರ ಸುಪರ್ದಿಗೆ ನೀಡಿದ ಯಡ್ಡಿ, ಅಲ್ಲಿ ಬ್ರಾಹ್ಮಣಶಾಹಿಯನ್ನು ಗಟ್ಟಿಗೊಳಿಸಲು ಶುರು ಮಾಡಿದರು. ಇತ್ತೀಚೆಗಷ್ಟೇ ಸುಪ್ರೀಂಕೋರ್ಟ್ ಆ ಕ್ರಮವನ್ನು ತರಾಟೆಗೆ ತೆಗೆದುಕೊಂಡಿದೆ.

* ರಾಜ್ಯದ ಹಲವು ಕಡೆ ಭಜರಂಗಿ, ಶ್ರೀರಾಮಸೇನೆ ಪುಂಡರಿಂದ ಚರ್ಚ್‌ಗಳ ಮೇಲೆ ದಾಳಿ, ಕ್ರಿಶ್ಚಿಯನ್ನರ ಮೇಲೆ ಹಲ್ಲೆ ನಡೆದು ಅಲ್ಪಸಂಖ್ಯಾತರಲ್ಲಿ ಭೀತಿ ಹುಟ್ಟು ಹಾಕಲಾಯಿತು.

* ಪೊಲೀಸ್ ಇನ್ಸ್‌ಪೆಕ್ಟರ್, ತಹಶೀಲ್ದಾರ್, ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್ ಇತ್ಯಾದಿ ಹುದ್ದೆಗಳ ಟ್ರಾನ್ಸ್‌ಫರ್‌ನಲ್ಲಿ ಯಡ್ಡಿ ಪುತ್ರ ವಿಜಯೇಂದ್ರನಿಂದ 500 ಕೋಟಿ ಕಮಾಯಿ.

ಡಿಸೆಂಬರ್: 'ಕರಾವಳಿ ಅಲೆ' ಪತ್ರಿಕೆ ಮೇಲೆ ದಾಳಿಗಳನ್ನು ಪುನಃ ಶುರು ಮಾಡುವ ಮೂಲಕ ಮಾಧ್ಯಮಗಳನ್ನು ಹತ್ತಿಕ್ಕಲು ನೋಡಿದ ಪುಂಡ ಕಾರ್ಯಕರ್ತರ ಬೆನ್ನಿಗೆ ನಿಂತು ಸಲುಹಿದ ಸರ್ಕಾರ.

2009

ಜನವರಿ: ವಿವೇಕಾನಂದ ಜಯಂತಿ ನೆಪದಲ್ಲಿ ಕಾಲೇಜು ವಿದ್ಯಾರ್ಥಿಗಳಲ್ಲಿ ಆರ್‌ಎಸ್‌ಎಸ್‌ನ ಕೋಮುವಿಷವನ್ನು ಬಿತ್ತಲು ಉನ್ನತ ಶಿಕ್ಷಣ ಸಚಿವ ಲಿಂಬಾವಳಿ ಯತ್ನ. ಕಾಲೇಜುಗಳನ್ನು ಆರ್‌ಎಸ್‌ಎಸ್ ಅಡ್ಡೆಗಳನ್ನಾಗಿ ಮಾಡುವ ಈ ಕ್ರಮಕ್ಕೆ ವ್ಯಾಪಕ ವಿರೋಧ ವ್ಯಕ್ತವಾಯಿತು.

ಫೆಬ್ರವರಿ: ಬಂಗಾರಪ್ಪನನ್ನು ರಾಜಕೀಯವಾಗಿ ಹಣಿಯಲು, ಮ[...] ರಾಘವೇಂದ್ರನನ್ನು ರಾಜಕೀಯವಾಗಿ ಬೆಳೆಸಲು ದಂಡಾವತಿ ಯೋಜನೆಯ ಉದ್ಘಾಟನೆ ಮಾಡಿದ ಯಡಿಯೂರಪ್ಪ, ಅಗತ್ಯ ನೀರು ಲಭ್ಯವಿಲ್ಲದಿದ್ದರೂ ಸ್ವಾರ್ಥಕ್ಕಾಗಿ ಯೋಜನೆಗೆ ಯಡ್ಡಿ ಚಾಲನೆ ನೀಡಿದ,

* ಕೆಜಿಎಫ್‌ನ ಬಿಜೆಪಿ ಶಾಸಕ ವೈ. ಸಂಪಂಗಿ ಶಾಸಕರ ಭವನದಲ್ಲೇ ಲಂ[...] ಪಡೆಯುವಾಗ ಲೋಕಾಯುಕ್ತರ ಕೈಗೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದ. ಆತ[...] ರಾಜೀನಾಮೆ ಕೇಳಬೇಕಿದ್ದ ಅಥವಾ ಆತನನ್ನು ಸಸ್ಪೆಂಡ್ ಮಾಡಬೇಕಿ[...] ಸರ್ಕಾರವೇ ಆತನ ರಕ್ಷಣೆಗೆ ನಿಂತು ಕೇಸ್ ಅನ್ನು ಹಳ್ಳ ಹಿಡಿಸಿತು.

* ಮಂಗಳೂರಿನಲ್ಲಿ ಭಜರಂಗದಳ ಮತ್ತು ಶ್ರೀರಾಮಸೇನೆ ಪುಂಡರು ಪ[...] ಮೇಲೆ ದಾಳಿ ಮಾಡಿ ಅಲ್ಲಿದ್ದ ಯುವತಿಯರ ಮೇ[...] ಹಲ್ಲೆ ಲೈಂಗಿಕ ದೌರ್ಜನ್ಯ ನಡೆಸಿದರು. ಆಗಲೂ ಸರ್ಕಾ[...] ಅದನ್ನು ಪರೋಕ್ಷವಾಗಿ ಸಮರ್ಥಿಸಿಕೊಂಡು ಅಸಹ್ಯತೆ ಮೆರೆದಿತ್ತು.



ಮಾರ್ಚ್: ಹಣಕಾಸು ಸಚಿವ ಯಡ್ಡಿಯಿಂ[...] ದಿವಾಳಿಕೋರ ಬಜೆಟ್ ಮಂಡನೆ. ಮಠಮಾನ್ಯಗಳಿ[...] ಬೇಕಾಬಿಟ್ಟಿ ದುಡ್ಡು ನೀಡುವ ಮೂಲಕ ಸಂವಿಧಾನ[...]

ಹಕೀಕತ್ತೇನೆಂದರೆ ಮಗ ವಿಜಯೇಂದ್ರನೇ ಅಪ್ಪ ...ಖ್ಯಮಂತ್ರಿಯ ಸಹಿಯನ್ನು ಫೋರ್ಜರಿ ಮಾಡಿ ...ಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸಾಗ ...ಿದ್ದ. ಇದು ಅಧಿಕಾರಿಗಳ ಗಮನಕ್ಕೆ ಬಂದಿತ್ತು. ಇನ್ನೆಲ್ಲಿ ...ಬಯಲಾಗುತ್ತೋ ಎಂದು ಭೀತಿಗೆ ಬಿದ್ದ ಮುಖ್ಯಮಂತ್ರಿ ...ನೆಗೆ ತಾನೇ ಸಹಿ ಮಾಡಿದ್ದೆಂದು ಸಾಧಿಸಿಬಿಟ್ಟರು. ಈ ...ದೇ ಡೀಲಿನಿಂದ ಸೋಮಣ್ಣನ ಮೂಲಕ 25 ಕೋಟಿಯ ...ತ್ತು ಯಡ್ಡಿ ಮಗನ ಕೈಸೇರಿತ್ತು. ಡೀನೋಟಿಫೈ ಮಾಡಿ ...ಡುವಂತೆ ಆದಿಚುಂಚನಗಿರಿ ಸ್ವಾಮಿಯಿಂದ ಯಡ್ಡಿಗೆ ...ನ್ ಮಾಡಿಸಿದ್ದ. ಇವತ್ತು ಈ ಒಂದೇ ಡೀಲನ್ನು ...ಹಚ್ಚಿದ ಜೆಡಿಎಸ್ ನಾಯಕ ಕುಮಾರಸ್ವಾಮಿ ಯಡ್ಡಿಯ ...ನೋಟಿಫಿಕೇಶನ್ ಬಣ್ಣ ಬಯಲು ಮಾಡುತ್ತಿದ್ದಾರೆ.


ವಿಜಯೇಂದ್ರನನ್ನು ಬುಟ್ಟಿಗೆ ಹಾಕಿಕೊಂಡ ...ಮಣ್ಣ ಮಾಡಿದ್ದು ಇದೊಂದೇ ಡೀಲಲ್ಲ. ಇದೇ ... ಹಲಗೆ ವಡೇರಹಳ್ಳಿಯಲ್ಲಿ 5 ಎಕರೆ ಬಿಡಿಎ ...ಯನ್ನು ಗತಿ ಕಾಣಿಸಿದ್ದ. ...ೇರುಘಟ್ಟ ರಸ್ತೆಯ ...ಕೆರೆಯಲ್ಲೂ ನಾಲ್ಕೆಕರೆ ಬಿಡಿಎ ...ಯನ್ನು ಯಡ್ಡಿ ಮಗನ ...ತೆ ಸೇರಿ ಲಪಟಾಯಿಸಿದ. ...ಗೂ ಸೋಮಣ್ಣನಿಂದ ...ಟಿಗಟ್ಟಲೇ ದುಡ್ಡು ...ುತ್ತಿದೆಯಲ್ಲ ಎಂದು ...ಾಶೆಗೆ ಬಿದ್ದ ಅಪ್ಪ ಯಡ್ಡಿ ...ತ್ತು ವಿಜಯೇಂದ್ರ ಸೋಮಣ್ಣ ...ಬಿಟ್ಟ ಫೈಲುಗಳಿಗೆಲ್ಲ ...ಣ್ಣುಮುಚ್ಚಿ ಸಹಿ ...ಕತೊಡಗಿದರು.

ಮತ್ತೊಂದೆಡೆ ಭಿನ್ನಮತೀಯರ ...ಕ್ಷಕ್ಕೇ ತಾನು ಕೈಹಾಕುತ್ತೇನೆಂದು ...ೇಮಣ್ಣ ಪೋಜು ಕೊಟ್ಟ. ಗಣಿ ...ಗಳ ಬುಡಕ್ಕೇ ಬೆಂಕಿಯಿಡು ...ಂದು ಹೋಗಿ ಹರಪನಹಳ್ಳಿಯ ...ುರಾಜ ನಾಯ್ಕ ಮತ್ತು ಹೊಸಪೇಟೆಯ ಆನಂದ್ ...ರಂಥ ಗಣಿ ನಿಷ್ಠ ಶಾಸಕರನ್ನು ಹಿಡಿತಂದು ಯಡ್ಡಿ ...ಾನದಲ್ಲಿ ಕೆಡವಿದ್ದ.

ಸಹಜವಾಗೇ ಸೋಮಣ್ಣನ ವಿರುದ್ಧ ಗಣಿರೆಡ್ಡಿಗಳು ...ಸುಗುಡತೊಡಗಿದರು. ರೆಡ್ಡಿಗಳ ಸಿಟ್ಟು ಮತ್ತು ...ಪಿತೂರಿಯ ತಾಕತ್ತು ಗೊತ್ತಿದ್ದೂ ಅದನ್ನು ಯಡ್ಡಿ ...ರ್ಲಕ್ಷಿಸಿಬಿಟ್ಟರು. ಮೊನ್ನೆ ನಡೆದ ಉಪಚುನಾವಣೆಯಲ್ಲಿ ...ೂರಿನ ಉಸ್ತುವಾರಿಯನ್ನು ಸೋಮಣ್ಣನಿಗೇ ವಹಿಸಿದ್ದು ...ಡ್ಡಿಯ ಜಾಣ ನಿರ್ಧಾರವಾಗಿತ್ತಾದರೂ ಗುಲ್ಬರ್ಗದ ...ದಯದಲ್ಲಿ ರೇವೂರರ ಪತ್ನಿಗೆ ಟಿಕೆಟ್ಟು ಕೊಡದೇ ...ತುಕಿದರು. ಇದರಿಂದ ಯಾರ್‍ಯಾರು ಯಡ್ಡಿ ವಿರುದ್ಧ ...ತಾಡುತ್ತಾರೋ ಅಂಥವರಿಗೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ಟು ಸಿಗಲ್ಲ ಎಂಬ ಸಂದೇಶ ರವಾನೆಯಾಗಿತ್ತು.

ಇದೆಲ್ಲಕ್ಕೂ ಮೊದಲೇ ಯಡ್ಡಿಗೆ ತನ್ನ ಜಾತಿಯ ಪಿತ್ಥ ನೆತ್ತಿಗೇರಿತ್ತು. ರಾಜ್ಯದ ಅತೀ ಪ್ರಬಲ ಜನಸಮೂಹವಾದ ಲಿಂಗಾಯತರ ಆಶೋತ್ತರದ ಫಲವಾಗೇ ಬಿಜೆಪಿಗೆ ಅಧಿಕಾರ ದಕ್ಕಿದ್ದರಿಂದ ತಾನು ಯಾರಿಗೇಕೆ ತಲೆಬಗ್ಗಿಸಬೇಕೆಂದು ಹಮ್ಮಿಗೆ ಬಿದ್ದರು. ಲಿಂಗಾಯತರಿಂದಾಗಿಯೇ ಬಿಜೆಪಿ ಅಧಿಕಾರಕ್ಕೆ ಬಂದಿದ್ದು ನಿಜವಾದರೂ ಅದಕ್ಕೆ ಮುತ್ಸದ್ಧಿತನವನ್ನು ಯಡ್ಡಿ ಮೈಗೂಡಿಸಿಕೊಳ್ಳಲಿಲ್ಲ. ಇಡೀ ಪಕ್ಷವೇ ತನ್ನ ಕೈಯಲ್ಲಿರಬೇಕೆಂದೂ, ತನ್ನ ಮನೆ ಮತ್ತು ಶೋಭಾ ಕರಂದ್ಲಾಜೆಯ ಮರ್ಜಿಗಾಗಿಯೇ ಅಧಿಕಾರ, ಪಕ್ಷ ಎಲ್ಲವೂ ಇದೆಯೆಂಬಂತೆ ಭ್ರಮೆಗೆ ಬಿದ್ದರು.

ಈ ರೀತಿ ಯಡ್ಡಿ ಭಾವಿಸುವುದಕ್ಕೂ ಕಾರಣವಿತ್ತು. ಅದು ಇಡೀ ವೀರಶೈವ ಸಮೂಹ ಯಡ್ಡಿಯ ಬೆನ್ನಿಗೆ ನಿಂತು ಬೆಂಬಲಿಸಿದ್ದು. ಬಹುತೇಕ ವೀರಶೈವ ಮಠಗಳೆಲ್ಲ ಮೊದಲ ಬಾರಿಗೆ ಮುಖ್ಯಮಂತ್ರಿಯೊಬ್ಬನ ಬೆಂಬಲಕ್ಕೆ ನಿಂತುಬಿಟ್ಟಿದ್ದವು. ಈ ಎಲ್ಲಾ ಬೆಳವಣಿಗೆಗಳನ್ನು ಸದ್ದಿಲ್ಲದೇ ಗಮನಿಸುತ್ತಿದ್ದ ಆರೆಸ್ಸೆಸ್ ಒಳಗೊಳಗೇ ಕುದಿಯುತ್ತಿದ್ದುದ್ದನ್ನು ಯಡ್ಡಿ ಗಮನಿಸದೇ ಹೋದರು. ಎಷ್ಟೆಂದರೂ ಸರ್ಕಾರಕ್ಕೆ ತಾನೇ ಅಧಿಪತಿಯಲ್ಲವೆ? ರೆಡ್ಡಿಗಳು ಆಪಾಟ ಗಣಿ ಸಂಪತ್ತನ್ನು ದೋಚಿ ದುಡ್ಡೂ ಕಾಸಿನ ವಿಷಯದಲ್ಲಿ ಭಯಂಕರ ಕೊಬ್ಬಿ ಮುಂದೊಮ್ಮೆ ತನಗೆಲ್ಲಿ ಮುಳುವಾಗುತ್ತಾರೋ ಎಂದು ಅವರನ್ನು ಮಟ್ಟಹಾಕಲು ನಿಂತರು. ಮೇಲುನೋಟಕ್ಕೆ ಇವೆಲ್ಲವೂ ಗಣಿ ಲೂಟಿಕೋರರ, ಆರೆಸ್ಸೆಸ್ ಚೆಡ್ಡಿಗಳ ಮತ್ತು ಭ್ರಷ್ಟ ಮಂತ್ರಿಗಳ ವಿರುದ್ಧ ಸ್ವಾಭಿಮಾನಿ ಮುಖ್ಯಮಂತ್ರಿಯೊಬ್ಬನ ಹೋರಾಟವಾಗೇ ಪ್ರತಿಧ್ವನಿಸಿತ್ತು.



ಡಿನೋಟಿಫಿಕೇಷನ್ ಲೆಟರ್

ಮೊದಲ ಬಾರಿಗೆ ಗಣಿ ರೆಡ್ಡಿಗಳು ಬಂಡೆದ್ದು ಹೈದರಾಬಾದ್ ರೆಸಾರ್ಟ್ ಬ್ಲಾಕ್‌ಮೇಲ್‌ಗೆ ಕೈಯಿಟ್ಟಾಗಲೇ ಯಡ್ಡಿ ದಿಟ್ಟತನವನ್ನು ತೋರಬೇಕಿತ್ತು. ಇಡೀ ಗಣಿ ಲೂಟಿಯನ್ನು ಸಿಬಿಐಗೊಪ್ಪಿಸಿದರೆ, ಅಥವಾ ತನ್ನದೇ ಅಧಿಕಾರ ಬಳಸಿ ರೆಡ್ಡಿಗಳ ಮೇಲೆ ಕ್ರಿಮಿನಲ್ ಕೇಸು ಹಾಕಿ ಬಂಧಿಸುತ್ತೇನೆಂದಿದ್ದರೆ ಇಡೀ ಬಂಡಾಯವೇ ಸದ್ದಡಗುತ್ತಿತ್ತು. ಈ ನಿಟ್ಟಿನಲ್ಲಿ ಸರ್ಕಾರ ಪತನಗೊಂಡಿದ್ದರೂ ಜನ ಯಡ್ಡಿ ಪರ ನಿಲ್ಲುತ್ತಿದ್ದರು.

ಆದರೆ ಗಣಿ ರೆಡ್ಡಿಗಳ ಬ್ಲಾಕ್‌ಮೇಲ್‌ಗೆ ಮಣಿದು ಕರಂದ್ಲಾಜೆಯನ್ನು ಕೈಬಿಟ್ಟರು. ಅದು ಯಡ್ಡಿ ಮಾಡಿದ ಮೊದಲ ತಪ್ಪಾಗಿತ್ತು. ರೇಣುಕಾಚಾರ್ಯನಂಥ ಕಮಂಗಿಯನ್ನು ಮಂತ್ರಿ ಮಾಡಿದ್ದು ಎರಡನೇ ಅನಾಹುತವಾಗಿತ್ತು. ಶಿವಮೊಗ್ಗದ ಲೋಕಸಭಾ ಚುನಾವಣೆಯ ಟಿಕೆಟ್ ವಿಷಯದಲ್ಲಿ ಮಗನಿಗೇ ಟಿಕೆಟ್ ಕೊಟ್ಟಿದ್ದು, ತನಗೆ ಪಕ್ಷದಲ್ಲಿ ಬೆಲೆಕೊಡದವರನ್ನು ಹಣಿಯಲು ಹೊರಟಿದ್ದು, ರೆಡ್ಡಿಗಳ ಬಂಡಾಯದ ನಂತರವೂ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಮತ್ತೆ ಅನುಮಾನಿಸಿದ್ದು, ಒಲ್ಲದ ಶಾಸಕರನ್ನು ಹತ್ತಿರಕ್ಕೇ ಬಿಟ್ಟುಕೊಳ್ಳದೇಹೋಗಿದ್ದು; ಇತ್ಯಾದಿ ವರ್ತನೆಗಳೆಲ್ಲವೂ ಯಡ್ಡಿ ಮತ್ತು ಶಾಸಕರ ಮಧ್ಯೆ ಪಕ್ಷ ಮತ್ತು ಮುಖ್ಯಮಂತ್ರಿ ಮಧ್ಯೆ ದೊಡ್ಡ ಕಂದರವನ್ನೇ ನಿರ್ಮಿಸಿಬಿಟ್ಟವು.

ಇದೆಲ್ಲದರ ಫಲವೆಂಬಂತೆ ಯಡ್ಡಿಯ ತವರು ಶಿವಮೊಗ್ಗದಲ್ಲಿ ಈಶ್ವರಪ್ಪ ಬಣ, ಉತ್ತರ ಕರ್ನಾಟಕದಲ್ಲಿ ಶೆಟ್ಟರ್ ಕೂಟ, ಬಳ್ಳಾರಿಯಲ್ಲಿ ಗಣಿಕಳ್ಳರ ಲಾಬಿ ಮತ್ತು ಬೆಂಗಳೂರಿನಲ್ಲಿ ಅಶೋಕ್ ನೇತೃತ್ವದ ಒಕ್ಕಲಿಗರ ಬಂಡುಕೋರ ಗುಂಪುಗಳು ಸೃಷ್ಟಿಗೊಂಡವು. ಯಡ್ಡಿ ತನಗರಿವಿಲ್ಲದಂತೆ ಬಿಜೆಪಿಯಲ್ಲೇ ವಿರೋಧಿ ಬಿಜೆಪಿಯನ್ನು ಸೃಷ್ಟಿಸಿಕೊಂಡರು.

ಯಡ್ಡಿ ನಂಬಿದ್ದಾದರೂ ಎಂಥವರನ್ನು ಕರಂದ್ಲಾಜೆ ಏನೇ ಪೋಜು ಕೊಟ್ಟರೂ ರೆಡ್ಡಿ ಗ್ಯಾಂಗ್, ಅಶೋಕ್ ಪಟಾಲಂ, ಶೆಟ್ಟರ್ ಬಣಗಳಂತೆ ಕಸುಬುಗಾರ್ತಿಯಲ್ಲ. ಆಚಾರ್ಯ, ರಾಮಚಂದ್ರಗೌಡ, ನಿರಾಣಿ, ಬೊಮ್ಮಾಯಿ ಇತ್ಯಾದಿಗಳಿಗೆ ಹಾಯುವುದು ಗೊತ್ತಿಲ್ಲ ಒದೆಯುವುದೂ ಗೊತ್ತಿಲ್ಲ. ಸೋಮಣ್ಣ ಕಿಲಾಡಿ ನಿಜ ಕಸುಬುದಾರ ಕೂಡ. ಆದರೆ ಆತನೇ ದೊಡ್ಡ ತಲೆನೋವಾಗಿಬಿಟ್ಟ.

ಮುಖ್ಯಮಂತ್ರಿಯನ್ನು ಯಾರು ಬೇಕಾದರೂ ಬ್ಲಾಕ್ ಮೇಲ್ ಮಾಡಬಹುದೆಂದು ಗೊತ್ತಾಗಿಯೇ ಅಶೋಕ್ ಉಪಮುಖ್ಯಮಂತ್ರಿ ಗಾದಿಗೆ ಲಾಬಿ ಶುರುಹಚ್ಚಿಕೊಂಡರು. ಈಗ ಮನೆಮಗನಂತಿದ್ದ ರೇಣುಕಾಚಾರ್ಯನೇ ಬ್ಲಾಕ್‌ಮೇಲ್‌ಗಿಳಿದಿದ್ದಾನೆ. ಸಂಧಾನಕ್ಕೆ ಹೋದ ಸೋಮಣ್ಣನಿಗೆ ಬಂಡುಕೋರರು ಕ್ಯಾರೇ ಎನ್ನದೇ ಉಗಿದು ಕಳಿಸಿದ್ದಾರೆ. 'ಯಾಕೆ ತಲೆ ಕೆಡಿಸಿಕೊಳ್ತೀರಿ? ನೋಡ್ತಾ ಇರಿ, ಕಾಂಗ್ರೆಸ್ಸಿನಿಂದ 20 ಮಂದಿ ಎಮ್ಮೆಲ್ಲೆಗಳನ್ನ ಹೇಗೆ ಹಿಡಿದು ತರ್ತೀನಿ ಅಂತ.....?' ಎಂದು ಸೋಮಣ್ಣ ಬಂಡಲ್ ಬಿಟ್ಟಿದ್ದನ್ನು ನಂಬಿ ಪಕ್ಷೇತರ ಸಚಿವರನ್ನು ವಜಾ ಮಾಡಿದ ಯಡ್ಡಿಗೆ ವಾಸ್ತವ ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು.

ಸದ್ಯ ಸೋಮಣ್ಣನನ್ನು ಉಗಿದಟ್ಟಿದ್ದಾರೆ. ತನ್ನ ಬೇಳೆಕಾಳು ಬೇಯದೇ ಥಂಡಾ ಹೊಡೆದ ಸೋಮಣ್ಣ ಈಗ ಮನೆಬಿಟ್ಟು ಆಚೆ ಬರುತ್ತಿಲ್ಲ. ಕೊನೆಗೂ ರೆಡ್ಡಿಗಳ ಪಾದವೇ ಗತಿ ಎಂಬಂತೆ ಸಿಎಂ ಕೈಚೆಲ್ಲಿದ್ದಾರೆ. ಲಿಂಗಾಯತರ ಆಶೋತ್ತರದ ಫಲವಾಗಿ ದಕ್ಕಿದ ಮುಖ್ಯಮಂತ್ರಿಗಿರಿಯ ಮೇಲೆ ಆರೆಸ್ಸೆಸ್, ಗಣಿಕಳ್ಳರು, ನೆಲಗಳ್ಳರು ಒಟ್ಟೊಟ್ಟಿಗೆ ಸವಾರಿ ಹೊರಟಿದ್ದಾರೆ. ಬಿಡಿಸಿಕೊಳ್ಳದೇ ಹೋದರೆ ಮುಖ್ಯಮಂತ್ರಿಗೆ ಮುಕ್ತಿಯಿಲ್ಲ, ಬಿಡಿಸಿಕೊಂಡರೆ ಮುಖ್ಯಮಂತ್ರಿಗಿರಿಯೇ ಉಳಿಯೋಲ್ಲ.


ಯಡ್ಡಿಯ ದುರಂತಕ್ಕೆ ಏನೆನ್ನಬೇಕು?

-ರಾ. ಸೋಮನಾಥ್

ಒಂದಲ್ಲ ಎರಡಲ್ಲ ನಾಲ್ವರು ಬ್ರಾಹ್ಮಣರು?

ಮೊನ್ನೆ ನಡೆದ ಸಚಿವ ಸಂಪುಟ ವಿಸ್ತರಣೆಯಲ್ಲಿ ಯಡ್ಡಿ ಮಾಡಿಕೊಂಡ ಯಡವಟ್ಟುಗಳು ಒಂದಾ ಎರಡಾ?

ಯಾವುದೇ ಕಾರಣಕ್ಕೂ ಇಷ್ಟು ಬೇಗ ವಿಸ್ತರಣೆ ಬೇಡ ಎಂದು ಸ್ವತಃ ಅನಂತ್‌ಕುಮಾರ್ ಎಚ್ಚರಿಸಿದ್ದನ್ನು ಯಡ್ಡಿ ಲೆಕ್ಕಿಸಲಿಲ್ಲ. ಏನೇ ಬಂದ್ರೂ ನಾನು ನೋಡ್ಕೋತೀನಿ ನೀವ್ಯಾಕೆ ತಲೆ ಕೆಡಿಸಿಕೊಳ್ತೀರಿ ಎಂದು ಅನಂತ್‌ಕುಮಾರ್ ಬಾಯಿ ಮುಚ್ಚಿಸಿದ್ದರು. ಉಪ ಮುಖ್ಯಮಂತ್ರಿ ಗಾದಿಗೆ ಲಾಬಿ ಶುರುವಿಟ್ಟಿದ್ದ ಅಶೋಕ್‌ಗೆ ಹೆಚ್ಚುವರಿ ಗೃಹ ಖಾತೆ ಕೊಟ್ಟು ತನ್ನ ದೌರ್ಬಲ್ಯವನ್ನು ತಾವೇ ಎತ್ತಿ ತೋರಿಸಿದ್ದರು. ಅಶೋಕ್‌ಗೆ ಅಂಕುಶ ಹಾಕಲು ಸಿ.ಟಿ. ರವಿಯನ್ನು ಮಂತ್ರಿ ಮಾಡಬಹುದಿತ್ತು.



ಪ್ರತಿಭೆ, ಸಂಘಟನಾ ಚಾತುರ್ಯ, ವರ್ಚಸ್ಸು ಎಲ್ಲಾ ಇದ್ದೂ ಮಂತ್ರಿಗಿರಿಯಿಂದ ವಂಚಿತರಾದ ಸಿ.ಟಿ. ರವಿಗೆ ಹೋಲಿಸಿದರೆ ಮೈಸೂರಿನ ರಾಮದಾಸ್ ಏನೇನೂ ಅಲ್ಲ. ಶಾಸಕ ಎಂಬುದನ್ನು ಬಿಟ್ಟರೆ ಪಕ್ಷಕ್ಕಾಗಲಿ, ಸರ್ಕಾರಕ್ಕಾಗಲಿ ನಯಾಪೈಸೆಯ ಪ್ರಯೋಜನವಿಲ್ಲದ ರಾಮದಾಸ್ ಬದಲಿಗೆ ಶಂಕರಲಿಂಗೇಗೌಡರನ್ನೇ ಮಂತ್ರಿ ಮಾಡಿದ್ದರೆ ಮೈಸೂರಿಗೂ ಲಾಭವಾಗುತ್ತಿತ್ತು. ಒಕ್ಕಲಿಗರ ಓಟ್‌ಬ್ಯಾಂಕ್ ಸೃಷ್ಟಿಯಾಗುತ್ತಿತ್ತು. ಬ್ರಾಹ್ಮಣ ಎಂಬ ಒಂದೇ ಕಾರಣಕ್ಕೆ ರಾಮದಾಸ್ ಆರೆಸ್ಸೆಸ್‌ನ ಪುರೋಹಿತಶಾಹಿ ಹುನ್ನಾರದ ಫಲವಾಗೇ ಮಂತ್ರಿಗಿರಿ ಗಿಟ್ಟಿಸಿಕೊಂಡಿದ್ದ. ಹಿಂದಿದ್ದ ಯಾವ ಸರ್ಕಾರದಲ್ಲೂ ನಾಲ್ವರು ಬ್ರಾಹ್ಮಣ ಮಂತ್ರಿಗಳಿರಲಿಲ್ಲ. ಸುರೇಶ್‌ಕುಮಾರ್, ಕಾಗೇರಿ, ಆಚಾರ್ಯರಂಥ ಬ್ರಾಹ್ಮಣ ಮಂತ್ರಿಗಳಿದ್ದೂ ಮತ್ತೆ ರಾಮದಾಸ್‌ರನ್ನು ಮಂತ್ರಿ ಮಾಡಿದ್ದಕ್ಕೆ ಯಾವುದೇ ಸಮರ್ಥನೆಯಿರಲಿಲ್ಲ. ಸಂಪುಟಕ್ಕೆ ವ್ಯರ್ಥ ಹೊರೆ ಎಂಬುವನ್ನು ಬಿಟ್ಟರೆ ಈ ನಾಲ್ವರೂ ಬ್ರಾಹ್ಮಣ ಮಂತ್ರಿಗಳಿಂದ ಯಡ್ಡಿಗೇನೂ ಲಾಭವಾಗಲಿಲ್ಲ.

ಶಂಕರಲಿಂಗೇಗೌಡರಂಥ ಪಕ್ಷ ನಿಷ್ಠರು ಮಾಡಿದ ತ್ಯಾಗ, ಸೇವೆ, ಶ್ರಮ ಯಾವುದಕ್ಕೂ ಬೆಲೆಯಿಲ್ಲದ ಮೇಲೆ ತಿರುಗಿಬೀಳದೇ ಬೇರೆ ಏನು ತಾನೇ ಮಾಡಲು ಸಾಧ್ಯ?

ಹಿಂದಿದ್ದ ಮುಖ್ಯಮಂತ್ರಿಗಳ್ಯಾರೂ ಇಷ್ಟೆಲ್ಲ ಬಹುಮತವಿದ್ದೂ ಭಿನ್ನರಿಗೆ ಮಣಿದ ಉದಾಹರಣೆಯಿಲ್ಲ. ಆದರೆ ಯಡ್ಡಿಗೆ ಧೈರ್ಯಬೇಕಲ್ಲ? ಅಳುಕು, ಹಿಂಜರಿಕೆಗೆ ಬಿದ್ದು ಕೊನೆಗೆ ತನ್ನ ತಲೆ ಮೇಲೆ ಮಣ್ಣು ಹಾಕಿಕೊಂಡ ಯಡ್ಡಿಯ ಕರ್ಮಕ್ಕೆ ಮಕ್ಕಳಲ್ಲದೇ ಮರುಗುವವರ್‍ಯಾರು?

...ಆಶಯಗಳನ್ನು ನಿರ್ಲಕ್ಷಿಸಲಾಯಿತು.

...ತಮ್ಮ ತೆವಲಿಗಾಗಿ, ಸ್ವಾರ್ಥಕ್ಕಾಗಿ ಬಳ್ಳಾರಿಯ ಸಿರವಾರ, ಚಾಗನೂರುಗಳಲ್ಲಿ ಹೊಸ ಏರ್‌ಪೋರ್ಟ್ ಆರಂಭಿಸಲು ರೆಡ್ಡಿಗಳ ಹುನ್ನಾರ ಶುರು. ಭಾರೀ ಫಲವತ್ತಾದ ನೀರಾವರಿ ಭೂಮಿಯಿಂದ ರೈತರನ್ನು ಈಗ ಬಲವಂತವಾಗಿ ಒಕ್ಕಲೆಬ್ಬಿಸಲಾಗುತ್ತಿದೆ.


...ದಾವಣಗೆರೆ ಬಿಜೆಪಿಯ ಎಂ.ಪಿ. ಸಿದ್ದೇಶ್ ಎಂ.ಪಿ. ನಿಧಿಯ 80 ಲಕ್ಷ ರೂ.ಗಳನ್ನು ತನ್ನದೇ ಸಂಸ್ಥೆಯ ಉದ್ಧಾರಕ್ಕೆ ಬಳಸಿದ್ದು ಬಯಲಾಯಿತು. ಸರ್ಕಾರ ಈ ಲೂಟಿಯ ಪರ ನಿಂತಿದ್ದರಿಂದ ಸಿದ್ದೇಶ್ ಬಚಾವು.

...ಜುಲೈ: ಸರ್ಕಾರದ ಆಡಳಿತಯಂತ್ರದ ದುರುಪಯೋಗ ಮಾಡಿ, ಬೇಕಾಬಿಟ್ಟಿ ದುಡ್ಡು ಹಂಚಿ ಕೆಎಂಎಫ್ ಅನ್ನು ಬಳ್ಳಾರಿ ರೆಡ್ಡಿಗಳಿಗೆ ಗಿಫ್ಟ್ ನೀಡಿದ ಯಡಿಯೂರಪ್ಪ, ಆ ಮೂಲಕ ಎಚ್.ಡಿ. ರೇವಣ್ಣ ವಿರುದ್ಧ ಸೇಡು ತೀರಿಸಿಕೊಂಡ.

...ಮೈಸೂರಿನಲ್ಲಿ ಕೋಮುಗಲಭೆ ಎಬ್ಬಿಸಿದ ಚೆಡ್ಡಿಗಳು ಮೂವರು ಅಮಾಯಕರನ್ನು ಬಲಿ ತೆಗೆದುಕೊಂಡರು. ಆಗಲ್ಲಿ ಸರ್ಕಾರ ಅಪರಾಧಿಗಳಿಗೆ ಶಿಕ್ಷೆ ಕೊಡಿಸಲು ಯತ್ನಿಸುವ ಬದಲು ಅವರ ರಕ್ಷಣೆಗೆ ನಿಂತಿತು.

...ಮತ್ತೆ ರೇಣುಕಾಚಾರ್ಯನ ಸೆಕ್ಸ್ ಲೀಲೆಯ ರಾದ್ಧಾಂತ. ರೇಣುಕನ ರಕ್ಷಣೆಗೆ ನಿಂತ ಯಡ್ಡಿ.

...ಆಗಸ್ಟ್: ಮುಜರಾಯಿ ಸಚಿವ ಕೃಷ್ಣಯ್ಯ ಶೆಟ್ಟಿಯ ಕರ್ನಾಟಕ ಹೌಸಿಂಗ್ ಬೋರ್ಡ್ ಭೂಹಗರಣ ಪತ್ತೆಯಾಯಿತು. ಕೃಷ್ಣಯ್ಯ ಶೆಟ್ಟಿ ಮತ್ತಾತನ ಸಹೋದರನಿಂದ ಸರ್ಕಾರಕ್ಕೆ ಸುಮಾರು 500 ಕೋಟಿಗಳ ವಂಚನೆ. ಇಡೀ ಹಗರಣಕ್ಕೆ ಸಿ.ಎಂ. ಸಾಹೇಬರೇ ಸೂತ್ರಧಾರರಂತಿದ್ದರು.



...ಸೆಪ್ಟೆಂಬರ್: ಬೆಂಗಳೂರಿನ ಗಾಂಧಿನಗರದ ಎಸ್‌ಬಿಐ ಶಾಖೆಗೆ ಮಂತ್ರಿ ಸುಧಾಕರ್ ಏಳು ಕೋಟಿ ರೂಪಾಯಿ ವಂಚನೆ ಮಾಡಿದ್ದು ಬಯಲಿಗೆ ಬಂತು. ಯಡ್ಡಿ ಸುಧಾಕರ್ ಪರವಾಗಿ ನಿಂತಿದ್ದರಿಂದ ಆತ ಸಚಿವ ಸ್ಥಾನದಲ್ಲೇ ಮುಂದುವರೆದ.

...ಅಕ್ಟೋಬರ್: ನೆರೆ ಪ್ರವಾಹದಿಂದ ಉತ್ತರ ಕರ್ನಾಟಕದ ನೂರಾರು ಹಳ್ಳಿಗಳು ಜಲಾವೃತವಾಗಿ, ನೂರಾರು ನಾಗರಿಕರು ಪ್ರಾಣ ಕಳೆದುಕೊಂಡು, ಸಾವಿರಾರು ಕುಟುಂಬಗಳು ಬೀದಿಗೆ ಬಿದ್ದಾಗ, ಯಡ್ಡಿ ಸರ್ಕಾರದ ಮಂತ್ರಿ, ಶಾಸಕರು ಭಿನ್ನಮತ ರಾಜಕಾರಣದಲ್ಲಿ ಶಾಪಿಂಗ್, ಭೋಜನಕೂಟಗಳಲ್ಲಿ ಮುಳುಗಿದ್ದರು. ಇವತ್ತಿಗೂ ನೆರೆಸಂತ್ರಸ್ತರ ಬದುಕು ಅತಂತ್ರವಾಗಿದೆ. ಆದರೆ ಇಲ್ಲಿ ಮತ್ತೆ ಕುರ್ಚಿಗಾಗಿ ಕಿತ್ತಾಟ ನಡೆದಿದೆ.

* ಸಹಕಾರಿ ಮಹಾಮಂಡಳಕ್ಕೆ 1.37 ಕೋಟಿ ವಂಚಿಸಿದ ಸಚಿವ ಸುಧಾಕರನಿಗೆ ಮತ್ತೆ ಸರ್ಕಾರದ ರಕ್ಷಣೆ.

ನವೆಂಬರ್: ಮಂಗಳೂರಿನಲ್ಲಿ ಸರಣಿ ಸ್ತ್ರೀ ಹಂತಕ ಮೋಹನ್‌ಕುಮಾರ್ ಸಿಕ್ಕಿಬೀಳುವುದರೊಂದಿಗೆ ಸರ್ಕಾರವೇ ಪೋಷಿಸುತ್ತಾ ಬಂದಿದ್ದ ಚೆಡ್ಡಿಗಳ 'ಲವ್ ಜಿಹಾದ್' ಎಂಬ ಕಪೋಲಕಲ್ಪಿತ ನಾಟಕ ಬಯಲಾಯಿತು.

* ಈ ಮೊದಲು ಕರಾವಳಿಯಲ್ಲಿ ಮುಸ್ಲಿಂ ಯುವಕನೊಬ್ಬನನ್ನು ಪ್ರೀತಿಸಿದ ಹಿಂದೂ ಹುಡುಗಿಗೆ ಭಜರಂಗಿಗಳು ಅವಮಾನ ಮಾಡಿದ್ದರಿಂದ, ಆಕೆ ಆತ್ಮಹತ್ಯೆ ಮಾಡಿಕೊಂಡಳು.

* ಬಿಜೆಪಿಯಲ್ಲಿ ಭಿನ್ನಮತ ತಾರಕಕ್ಕೆ, ನೆರೆ ಪ್ರವಾಹ ಪೀಡಿತರನ್ನು ಮರೆತ ಭಿನ್ನಮತೀಯ ಶಾಸಕರು ಹೈದರಾಬಾದ್ ರೆಸಾರ್ಟಿನಲ್ಲಿ ಕುಡಿದು ಕುಪ್ಪಳಿಸಿ ನಿರ್ಲಜ್ಜರಂತೆ ವರ್ತಿಸಿದರು.

2010

ಜನವರಿ: ಇಟಾಸ್ಕಾ ಎಂಬ ನಕಲಿ ಸಾಫ್ಟ್‌ವೇರ್ ಕಂಪನಿಯ ಹೆಸರಲ್ಲಿ ಕೆಐಎಡಿಬಿಯ ಭ್ರಷ್ಟರೊಂದಿಗೆ ಸೇರಿಕೊಂಡು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತು ಮಗ ಕಟ್ಟಾ ಜಗ್ಗಾ ನಡೆಸಿದ ಭೂದರೋಡೆ ಮತ್ತು ಫೋರ್ಜರಿ ರ್‍ಯಾಕೆಟ್ ಹಗರಣವನ್ನು 'ಲಂಕೇಶ್' ಬಯಲಿಗೆಳೆಯಿತು. ಇವತ್ತು ಹತ್ತು ತಿಂಗಳ ನಂತರ ಅದೇ ದೊಡ್ಡ ವಿವಾದವಾಗಿ ಸರ್ಕಾರವನ್ನೇ ಅಲ್ಲಾಡಿಸುತ್ತಿದೆ.

* ದಾವಣಗೆರೆಯಲ್ಲಿ ಫಲವತ್ತಾದ ಭೂಮಿಯ ಸ್ವಾಧೀನವನ್ನು ವಿರೋಧಿಸಿದ ರೈತರ ಕೈಗೆ ಕೋಳ ಹಾಕುವ ಮೂಲಕ ಸರ್ಕಾರ ಮತ್ತೊಮ್ಮೆ ತನ್ನ ರೈತದ್ರೋಹಿ ನಿಲುವನ್ನು ಪ್ರಕಟಿಸಿತು.

* ಬೆಂಗಳೂರಿನ ಬಿಬಿಎಂಪಿಯಲ್ಲಿ ಚುನಾವಣಾ ನೀತಿಸಂಹಿತೆ ಉಲ್ಲಂಘಿಸಿ ರಾತ್ರೋರಾತ್ರಿ ನಡೆಸಿದ ಟೆಂಡರ್ ಪ್ರಕ್ರಿಯೆಯ ಹಿಂದೆ ಸಚಿವ ಕಟ್ಟಾ, ಅಶೋಕರ ಕೈವಾಡವಿತ್ತು. ಸುಮಾರು 3300 ಕೋಟಿ ರೂ.ಗಳ ಲೂಟಿ ಇದಾಗಿದ್ದು ಇಲ್ಲೂ ದರೋಡೆಕೋರರು ಬಚಾವಾಗಿಬಿಟ್ಟರು.

* ಮೈಸೂರಿನಲ್ಲಿ ನ್ಯಾಯಕ್ಕಾಗಿ ಪ್ರತಿಭಟಿಸುತ್ತಿದ್ದ ಚಾಮರಾಜನಗರದ ರೈತರ ಮೇಲೆ ಲಾಠಿಚಾರ್ಜ್.

ಫೆಬ್ರವರಿ: ಸರ್ಕಾರದಿಂದ ಜನದ್ರೋಹಿ, ರೈತದ್ರೋಹಿ, ದಲಿತದ್ರೋಹಿ ಅಲ್ಪಸಂಖ್ಯಾತದ್ರೋಹಿ ಗೋಹತ್ಯೆ ನಿಷೇಧ ಮಸೂದೆ ಮಂಡನೆಗೆ ಚಾಲನೆ.

ಮಾರ್ಚ್: ಬಳ್ಳಾರಿ ರೆಡ್ಡಿಗಳ ಮರ್ಜಿಗೆ ಬಿದ್ದು ಹಂಪಿ ವಿ.ವಿ.ಯ ಜಾಗ ಹೊಡೆಯಲು ಸರ್ಕಾರದ ಸಂಚು. ನಾಡಿನಾದ್ಯಂತ ತೀವ್ರಗೊಂಡ ಪ್ರತಿಭಟನೆಯಿಂದ ಸರ್ಕಾರಕ್ಕೆ ಸೋಲು.

* ಬಳ್ಳಾರಿ ರೆಡ್ಡಿಗಳ ಅಕ್ರಮ ಗಣಿಗಾರಿಕೆಯ ವಿರುದ್ಧ ದೃಢವಾಗಿ ಹೋರಾಡುತ್ತಿರುವ ಟಪಾಲ್ ಗಣೇಶ್ ಕೊಲೆಗೆ ಯತ್ನ. ಆರೋಪಿಗಳ ರಕ್ಷಣೆಗೆ ಬಳ್ಳಾರಿ ಜಿಲ್ಲಾಡಳಿತವೇ ನಿಂತಿತು.

ಮೇ: ಸೆಕ್ಸ್ ಹಗರಣದಲ್ಲಿ ಸಿಕ್ಕಿಬಿದ್ದ ಸಚಿವ ಹಾಲಪ್ಪ.

* ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಿ ಮಿತ್ತಲ್, ಬಳ್ಳಾರಿ ರೆಡ್ಡಿಗಳು, ಟಾಟಾಗಳಿಗೆ ರಾಜ್ಯದ ಫಲವತ್ತಾದ ಭೂಮಿಯನ್ನು ಕೊಡಲು ನಿರ್ಧರಿಸಿ, ರೈತರನ್ನು ಬೀದಿಗೆ ತಳ್ಳುವ ಸಂಚು ರೂಪಿಸಲಾಯಿತು.

* ಬೇಲೇಕೇರಿ ಬಂದರಿನಲ್ಲಿ ಜಪ್ತಿಯಾಗಿದ್ದ ಅದಿರನ್ನು ರಾತ್ರೋರಾತ್ರಿ ಕದ್ದು ಸಾಗಿಸಲಾಯ್ತು. ಇದರಲ್ಲಿ ಬಳ್ಳಾರಿ ರೆಡ್ಡಿಗಳ ಕೈವಾಡವಿದ್ದುದು ಬಯಲಾದರೂ, ಸಿ.ಎಂ. ಏನೂ ಮಾಡಲಿಲ್ಲ. ಈ ಕಾರಣಕ್ಕಾಗಿಯೇ ಲೋಕಾಯುಕ್ತ ಸಂತೋಷ್ ಹೆಗಡೆ ರಾಜೀನಾಮೆ ನೀಡುವಂತಾಯ್ತು.

ಆಗಸ್ಟ್: ಸವಣೂರಿನಲ್ಲಿ ಅನ್ಯಾಯಕ್ಕೊಳಗಾದ ಭಂಗಿ ಕುಟುಂಬಗಳಿಂದ ಮಲಸುರಿದುಕೊಂಡು ಪ್ರತಿಭಟನೆ. ರಾಜ್ಯದಲ್ಲಿ ದಲಿತರ ಮೇಲಾಗುತ್ತಿರುವ ದೌರ್ಜನ್ಯಗಳಿಗೆ ಈ ಘಟನೆ ಕನ್ನಡಿ ಹಿಡಿಯಿತು.

ಸೆಪ್ಟೆಂಬರ್: ಕಳೆದ ಎರಡು ವರ್ಷಗಳಿಂದ 'ಲಂಕೇಶ್' ಬಯಲಿಗೆಳೆಯುತ್ತ ಬಂದ ಇಟಾ ಸ್ಕಾ-ಕೆಐಎಡಿಬಿ ಹಗರಣದ ತನಿಖೆ ಕೈಗೆತ್ತಿಕೊಂಡ ಲೋಕಾಯುಕ್ತರಿಂದ ಕಟ್ಟಾ ಜಗ್ಗನ ಮೇಲೆ ಕೇಸು. ಸಾಕ್ಷಿದಾರರನ್ನು ಖರೀದಿಸಲು ಹೋದ ಕಟ್ಟಾ ಜಗ್ಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ.

ಸಿ.ಎಂ. ಪುತ್ರ ವಿಜಯೇಂದ್ರನ ಭೂಲೂಟಿಯೂ ಬಯಲಿಗೆ ಬಂತು. ಹಾಗೆಯೇ ರಾಜ್ಯ ಸರ್ಕಾರ ಡಿನೋಟಿಫಿಕೇಷನ್ ಹೆಸರಲ್ಲಿ ಮಾಡಿರುವ ಸಾವಿರಾರು ಕೋಟಿ ಮೌಲ್ಯದ ಭೂಹಗರಣಗಳು ದಿನಕ್ಕೊಂದರಂತೆ ಬಯಲಾಗತೊಡಗಿದವು.

ಅಕ್ಟೋಬರ್: ಭೂಹಗರಣಗಳು, ಒಂದೊಂದಾಗಿ ಹೊರಬೀಳುತ್ತಿದ್ದಂತೆ ರಾಜ್ಯ ಬಿಜೆಪಿಯಲ್ಲಿ ಭಿನ್ನಮತ ಸ್ಫೋಟಗೊಳ್ಳತೊಡಗಿತು.

• ಮಲ್ಲಿ

ತೆರೆಮರೆಯಲ್ಲಿ ನಡೆದದ್ದೇನು?

• ಪಾರ್ವತೀಶ
bparvateesha@gmail.com





ಮುಖ್ಯಮಂತ್ರಿ ಯಡ್ಡಿ ಹಣ ಕದಿಯುವುದರಲ್ಲಿ ಅದೆಷ್ಟು ಬ್ಯುಸಿಯಾಗಿಬಿಟ್ಟಿದ್ದರೆಂದರೆ ತನ್ನ ಸುತ್ತಮುತ್ತ ಏನೇನು ನಡೆಯುತ್ತಿವೆ ಎಂಬುದೇ ಅವರಿಗೆ ಗೊತ್ತಾಗಲಿಲ್ಲ, ಸಂಪುಟ ಪುನರ್‌ರಚನೆ ಮಾಡಿ ದಕ್ಕಿಸಿಕೊಂಡೆ ಎಂದು ಮೀಸೆ ತಿರುಗಿಸಿಕೊಳ್ಳುತ್ತಿದ್ದಾಗಲೇ ಬಿಜೆಪಿಯೊಳಗೆ ಸರಣಿ ಬಾಂಬ್‌ಸ್ಫೋಟಗಳು ಶುರುವಾಗಿಬಿಟ್ಟವು.

ಈಗಿನ ಭಿನ್ನಮತೀಯರ ಬಂಡಾಯದ ಅಸಲಿ ಸೂತ್ರಧಾರ ಕುಮಾರಸ್ವಾಮಿಯೇ ಹೌದು ಎಂಬುದು ಕೆಲವರಿಗಷ್ಟೇ ಗೊತ್ತು.

ಆದರೆ ಅದಕ್ಕಿಂತ ಆಶ್ಚರ್ಯದ ಸಂಗತಿ ಯಾವುದೆಂದರೆ ಒಂದೋ ಯಡ್ಡಿ ಕ್ಯಾಂಪಿನಲ್ಲಿ ಇಲ್ಲವೆ ರೆಡ್ಡಿ ಕ್ಯಾಂಪಿನಲ್ಲಿರುತ್ತಿದ್ದ ಈ ಬಿಜೆಪಿ ಶಾಸಕರನ್ನು ಅದ್ಯಾವ ಮಾಯದಲ್ಲಿ ಕುಮಾರಸ್ವಾಮಿ ಹೈಜಾಕ್ ಮಾಡಿಸಿದರೆಂಬುದು!

ಈ ಶಿವರಾಜ್ ತಂಗಡಗಿ, ಶಿವನಗೌಡ ನಾಯಕ, ಗೂಳಿಹಟ್ಟಿ ಶೇಖರ್, ಡಿ.ಸುಧಾಕರ್, ವೆಂಕಟರಮಣಪ್ಪ, ಜಾರಕಿಹೊಳಿ, ಬೇಳೂರು ಹಾಗೂ ರೇಣುಕಾಚಾರ್ಯ ಮುಂತಾದವರೆಲ್ಲ ಮೊದಲಿನಿಂದಲೂ ಒಂದೇ ಗುಂಪಾಗಿ ಉಳಿದುಕೊಂಡು ಬಂದವರು. ಕಳೆದ ಎರಡು ವರ್ಷಗಳಲ್ಲಿ ಬಹುತೇಕ ಬಾರಿ ರೆಡ್ಡಿಗಳೊಂದಿಗೆ ಕಾಣಿಸಿಕೊಂಡು ಯಡ್ಡಿಗೆ ಪದೇಪದೇ ಜಾಪಾಳ ಮಾತ್ರೆ ತಿನ್ನಿಸುತ್ತಾ ಬಂದಿದ್ದವರು.

ಆದರೆ ಇವರೆಲ್ಲಾ ಈಗ ರೆಡ್ಡಿಗಳ ಸಖ್ಯ ತೊರೆದಿರುವಂತೆ ಮೇಲ್ನೋಟಕ್ಕಂತೂ ಕಾಣುತ್ತಿದೆ. ತಮಗೆಲ್ಲಾ ಸೂಕ್ತ ಅಧಿಕಾರ ಸ್ಥಾನಮಾನ ಕೊಡಿಸುವ ಬಗ್ಗೆ ರೆಡ್ಡಿಗಳೂ ಪ್ರಯತ್ನಿಸಲಿಲ್ಲ ಎಂಬ ಅಸಹನೆ ಇವರಿಗೆಲ್ಲ ಇದೆ. ಮಜಾ ಅಂದರೆ ಈ ಹಿಂದಿನ ಬಂಡಾಯದ ವೇಳೆಯಲ್ಲಿ ರೆಡ್ಡಿಗಳೊಂದಿಗೆ ಹೋಗಿ ಬರುತ್ತಿದ್ದಾಗ, ಪ್ರತಿ ಸಾರಿಯೂ 'ಶಾಸಕರಿಗೆ ತಲಾ ಮೂರು ಕೋಟಿ, ಐದು ಕೋಟಿ ರೂ.ಗಳನ್ನು ರೆಡ್ಡಿಗಳು ಕೊಟ್ಟರಂತೆ' ಎನ್ನುವ ಗಾಳಿಸುದ್ದಿಗಳು ಕೇಳಿಬರುತ್ತಿದ್ದವು. ಈ ಶಾಸಕರೆಲ್ಲಾ ತಮ್ಮ ತಮ್ಮ ಕ್ಷೇತ್ರಗಳಿಗೆ ವಾಪಸ್ ಬಂದಾಗ ಕಾರ್ಯಕರ್ತರು ಹಾಗೂ ಹಿಂಬಾಲಕರೆಲ್ಲ ಯಾವಾಗಲೂ ಈ ಬಂಪರ್ ಲಾಟರಿಯ ಬಗ್ಗೆಯೇ ಕೇಳುತ್ತಿದ್ದರಂತೆ. ಆದರೆ ವಾಸ್ತವವಾಗಿ ರೆಡ್ಡಿಗಳು ಇವರಿಗೆಲ್ಲಾ ತಲಾ ಇಪ್ಪತ್ತೈದು ಲಕ್ಷಕ್ಕಿಂತ ಜಾಸ್ತಿ ಹಣವನ್ನು ಒಂದು ಸಾರಿಯೂ ಕೊಟ್ಟಿರಲಿಲ್ಲ. ಇದರಿಂದಾಗಿ "ಅತ್ತ ಮಾನವೂ ಹೋಯಿತು. ಇತ್ತ ದುಡ್ಡೂ ಸಿಗಲಿಲ್ಲ" ಎನ್ನುವ ಸ್ಥಿತಿ ಈ ಶಾಸಕರದಾಗಿತ್ತು.

ಯಾವಾಗ ರೆಡ್ಡಿ ಗ್ಯಾಂಗ್ ಯಡ್ಡಿ ಜೊತೆ ರಾಜಿ ಮಾಡಿಕೊಂಡು ಭಿನ್ನಮತೀಯರನ್ನು ನಡುನೀರಿನಲ್ಲಿ ಕೈಬಿಟ್ಟಿತೊ ಇವರೆಲ್ಲ ಅತಂತ್ರರಾದರು. ಆದರೆ ಯಡ್ಡಿ ಮೇಲಿನ ಸಿಟ್ಟಂತೂ ಆರಿರಲೇ ಇಲ್ಲ. ಈ ನಡುವೆ ಕಳೆದ ತಿಂಗಳು ನಡೆದ ಸಂಪುಟ ಪುನರ್‌ರಚನೆಯಲ್ಲಿ ರೇಣುಕಾಚಾರಿಗೆ ಗೃಹ, ಲೋಕೋಪಯೋಗಿ ಥರದ ಪ್ರಮುಖ ಖಾತೆ ಕೊಡುವ ಆಸೆ ತೋರಿಸಲಾಗಿತ್ತು, ಗೂಳಿಹಟ್ಟಿ ಶೇಖರ್ ಡ್ರಾಪ್ ಮಾಡುವ ನಿರೀಕ್ಷೆ ಇವರಿಗೆ ಇರಲೇ ಇಲ್ಲ, ಇನ್ನು ಡಿ.ಸುಧಾಕರ್ ಖಾತೆ ಬದಲಾಯಿಸಿದ್ದಂತೂ ಅಸಂಬದ್ಧವಾಗಿತ್ತು.



ಆದರೆ ಯಡ್ಡಿ ವಿನಾ ಕಾರಣ ಇವೆಲ್ಲವನ್ನೂ ಮೈಮೇಲೆಳೆದುಕೊಂಡರು. ರೆಡ್ಡಿ ಬಣ, ಅನಂತ್ ಕುಮಾರ್ ಹಾಗು ಭಿನ್ನಮತೀಯರೆಲ್ಲಾ ಕೆರಳುವಂತೆ ಸೋಮಣ್ಣನನ್ನು ಸಚಿವ ಪದವಿಗೆ ತರಲಾಯಿತು.

ಈ ಸೋಮಣ್ಣ ಸರ್ಕಾರವನ್ನೇ ಪಣಕ್ಕಿಟ್ಟು ಸಚಿವನನ್ನಾಗಿ ಮಾಡಬೇಕಿದ್ದ ಲೋಕನಾಯಕನೇನೂ ಆಗಿರಲಿಲ್ಲ. ಆದರೂ ಯಡ್ಡಿಗೆ ತನ್ನ ಸುತ್ತ ಲಿಂಗಾಯತರ ಒಂದು ಪ್ರಬಲ ಗ್ಯಾಂಗ್ ಕಟ್ಟಿಕೊಳ್ಳಬೇಕೆಂಬ ಹುಚ್ಚುತನ ಬೆಳೆಯುತ್ತಿತ್ತು.

ಇದನ್ನು ಬೇಕಾದರೆ 'ಲಿಂಗಾಯತ ಜ್ವರ' ಅಂದುಕೊಳ್ಳಬಹುದು.

ಹೀಗೆ ಯಡ್ಡಿಯಿಂದ ಪೆಟ್ಟು ತಿಂದ ಭಿನ್ನಮತೀಯರು ಸುಮ್ಮನೆ ಕೂರಲಿಲ್ಲ, ಸಚಿವನಾಗಿದ್ದ ರೇಣುಕಾಚಾರಿಯನ್ನು ತಟಸ್ಥನಾಗಿರಲು ಬಿಡಲಿಲ್ಲ, ಅಲ್ಲಿಂದಾಚೆಗೆ ರಾಜಕೀಯ ಪವಾಡಗಳೇ ನಡೆದುಹೋದವು.

ಬಳ್ಳಾರಿಯಿಂದ ಹಣ ಬಂತು

ಮೊದಲಿಗೆ ಕುಮಾರಸ್ವಾಮಿ ಬಿಜೆಪಿಯ ಈ ಭಿನ್ನಮತೀಯರ ಪೈಕಿ ಕೆಲವರನ್ನು ಬೆಂಗಳೂರಿನ ಒಂದು ಹೋಟೆಲ್‌ನಲ್ಲಿ ಭೇಟಿಯಾದರು. ಅಷ್ಟರೊಳಗೆ ಈ ಅತೃಪ್ತರನ್ನೆಲ್ಲಾ ಸ್ಫೋಟಕ್ಕೆ ತಯಾರುಗೊಳಿಸಲಾಗಿತ್ತು. ಆ ಕಾರ್ಯಕ್ಕೆ ಬಳ್ಳಾರಿಯಿಂದ ನೇರವಾಗಿ ಹಣ ಸರಬರಾಜಾಗಿತ್ತು. ಭಿನ್ನಮತೀಯರ ಜೊತೆ ನೇರವಾಗಿ ಕಾಣಿಸಿಕೊಳ್ಳಲು ಇಷ್ಟಪಡದ ಆದರೆ ಭಿನ್ನಮತೀಯರಿಗೆ ಕುಮ್ಮಕ್ಕು ಕೊಡಬಯಸಿದ್ದ ಗಣಿದಂಧೆಯ ಒಂದು ಗುಂಪಿನವರು ನೀಡಿದ್ದ ಪ್ರೋತ್ಸಾಹಧನ ಅದು.

ಹೀಗೆ ಸ್ವಕಾರಣ ಮತ್ತು ರಾಜಕಾರಣ ಎರಡೂ ಬೆರೆತು ಭಿನ್ನಮತೀಯ ಬಾಂಬ್ ಸ್ಫೋಟ ನಡೆದೇಹೋಯಿತು. ಅಷ್ಟರಲ್ಲಾಗಲೇ ಈ ಬೆಳವಣಿಗೆಗಳ ವಾಸನೆ ಹಿಡಿದಿದ್ದ ಕುಮಾರಸ್ವಾಮಿ ಬಂಡಾಯದ ಮಾರ್ಗದರ್ಶಕರಾಗಿ ಮುಂದೆ ನಿಂತೇಬಿಟ್ಟರು.

ಕಾಂಗ್ರೆಸ್ ಹೈಕಮಾಂಡ್‌ಗೆ ಎಲ್ಲಾ ಗೊತ್ತಿದೆ

ಕಳೆದವಾರ ಸಿದ್ದರಾಮಯ್ಯ ಹಾಗೂ ಕುಮಾರಸ್ವಾಮಿ ಇಬ್ಬರೂ ಸಿ.ಎಂ.ಇಬ್ರಾಹಿಂ ಮನೆಯಲ್ಲಿ ಭೇಟಿಯಾದ ವಿಚಾರವನ್ನು ಯಡ್ಡಿ ಅಪಾಯದ ಸೂಚನೆ ಎಂದು ಅರ್ಥಮಾಡಿಕೊಳ್ಳಲಿಲ್ಲ. ಆದರೆ ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕದ ರಾಜಕೀಯ ಬೆಳವಣಿಗೆಗಳ ಬಗ್ಗೆ ಪೂರ್ತಿ ಮಾಹಿತಿಯಿತ್ತು, ಹಾಗಾಗಿ ದಿಢೀರ್ ಎಂದು ಸಿದ್ದುಗೆ ದೆಹಲಿಯಿಂದ ಬುಲಾವ್ ಬಂತು. ದೆಹಲಿಯ ಕೆಲವು ಕಾಂಗ್ರೆಸ್ ಲೀಡರ್‌ಗಳು 'ಲಂಕೇಶ್'ಗೆ ಹೇಳಿದ್ದೇನೆಂದರೆ, ಸೋನಿಯಾ ಗಾಂಧಿ ಸಿದ್ದರಾಮಯ್ಯಗೆ "ಕುಮಾರಸ್ವಾಮಿ ಏನೋ ಮಾಡಲು ಹೊರಟಿದ್ದಾರೆ. ಅದಕ್ಕೆ ನಿರುತ್ತೇಜನಗೊಳಿಸುವಂತೆ ನಾವು ಮಧ್ಯೆ ಪ್ರವೇಶಿಸುವ ಅಗತ್ಯವಿಲ್ಲ!" ಎಂದು ಸೂಚನೆ ಕೊಟ್ಟರಂತೆ!

ಇದರಲ್ಲಿ ನಾನಾ ಅರ್ಥಗಳಿವೆಯಲ್ಲವೇ?

ಇದಾದ ನಂತರವೇ ಸಿದ್ದು ಹಾಗೂ ಕುಮಾರಸ್ವಾಮಿ ಭೇಟಿ ಆಯಿತು. ರಣತಂತ್ರ ಪೂರಾ ಸಿದ್ಧವಾಗಿ ಕಾರ್ಯಗತವಾಗಿಯೇ ಹೋಯಿತು.

ಭಿನ್ನರ ಗುಂಪಿನಲ್ಲಿ ಈಗ ಸ್ಪಷ್ಟವಾಗಿ ಕಾಣುವಂತೆ ಮೂರು ನೆಲೆಗಳಿಂದ ಹೊರಟುಬಂದ ಶಾಸಕರಿದ್ದಾರೆ.

ಒಂದು ರೆಡ್ಡಿ ಕ್ಯಾಂಪಿನ ಶಾಸಕರು, ಎರಡನೆಯವರು ಕುಮಾರಸ್ವಾಮಿಯ ಪ್ರಭಾವಕ್ಕೆ ಒಳಗಾದ ಶಾಸಕರು, ಇನ್ನು ಮೂರನೆಯ ಗುಂಪಿನ ಶಾಸಕರು ಯಾರು ಗೊತ್ತೆ?

ಸಿದ್ದರಾಮಯ್ಯನವರ ಮಾತಿಗೆ ಬೆಲೆಕೊಡುವವರು!

ಈ ಗುಂಪಿನಲ್ಲಿ ಬಾಲಚಂದ್ರ ಜಾರಕಿಹೊಳಿ, ನರೇಂದ್ರಸ್ವಾಮಿ ಮಾತ್ರವಲ್ಲ, ಮೈಸೂರಿನ ಬಿಜೆಪಿ ಶಾಸಕ ಶಂಕರಲಿಂಗೇಗೌಡರು ಸಹ ಇದ್ದಾರೆ.


ಸೂಸೈಡ್ ಬಾಂಬರ್ ಶಾಸಕರು

ಭಿನ್ನರ ಗುಂಪಿನಲ್ಲಿರುವ ಹದಿಮೂರು ಶಾಸಕ-ಸಚಿವರ ಪೈಕಿ ಏನೇ ಆದರೂ ಮತ್ತೆ ಬಿಜೆಪಿಗೆ ಬೆಂಬಲ ಕೊಡಬಾರದೆಂಬ ದೃಢ ನಿರ್ಧಾರದ ಶಾಸಕರೇ ಹೆಚ್ಚಿದ್ದಾರೆ ಯಡ್ಡಿ ಕ್ಯಾಂಪ್‌ನಲ್ಲಿ ರೆಡ್ಡಿ ಕಾಣಿಸಿಕೊಂಡ ನಂತರ ಶಾಸಕ ಬೆಳ್ಳುಬ್ಬಿ ಹಾಗೂ ರಾಜುಗೌಡ ಭಿನ್ನರ ಕ್ಯಾಂಪ್ ತ್ಯಜಿಸಿ ವಾಪಸ್ ಬಂದಿದ್ದಾರೆಂದು ಹೇಳಲಾಯಿತು. ಆದರೆ ವಾಸ್ತವ ಏನೆಂದರೆ ಇವರಿಬ್ಬರೂ ಭಿನ್ನರ ಟೀಮ್ ಜೊತೆ ಹೋಗೇ ಇರಲಿಲ್ಲ, ಬದಲಾಗಿ ಬೆಂಗಳೂರಿನಲ್ಲೇ ತಪ್ಪಿಸಿಕೊಂಡು ತಿರುಗುತ್ತಿದ್ದರು. ಹಾಗೆ ನೋಡಿದರೆ ಹರಿಹರದ ಶಾಸಕ ಹರೀಶ್ ಒಬ್ಬರೇ ಇದುವರೆಗೂ ಹಿಂತಿರುಗಿ ಬಂದಿರುವ ಶಾಸಕ. ಉಳಿದಂತೆ ಈಗ ಗೋವಾದಲ್ಲಿರುವ ಹದಿಮೂರು ಶಾಸಕರ ಪೈಕಿ ಬಹುತೇಕರು ಒಂದು ಅಂತಿಮ ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗಿದೆ. ಅದೇನೆಂದರೆ ಯಡ್ಡಿ ಸರ್ಕಾರ ಉರುಳಿಸಲು ಆತ್ಮಹತ್ಯಾ ಬಾಂಬರ್ ಶಾಸಕರಂತೆ ಕಾರ್ಯನಿರ್ವಹಿಸುವುದು!

ಅಂದರೆ ತಮ್ಮ ಸಚಿವಗಿರಿ ಶಾಸಕತ್ವ ಹೋದರೂ ಸರಿ ಯಡ್ಡಿ ಪರವಾಗಿ ವಿಶ್ವಾಸಮತ ಚಲಾಯಿಸುವುದಿಲ್ಲ ಎನ್ನುವ ತೀರ್ಮಾನ ಅದು. ಯಡ್ಡಿಯ ಗಂಟಲಲ್ಲಿ ಸಿಕ್ಕಿಕೊಂಡಿರುವ ಮುಳ್ಳಿದು.

ಇವರನ್ನು ಬದಲಿಸುವ, ಮರಳಿ ಬೆಂಬಲ ಗಿಟ್ಟಿಸುವ ಯಡ್ಡಿಯ ಪ್ರಯತ್ನಕ್ಕೆ ಯಶಸ್ಸು ಸಿಗುವ ಸಾಧ್ಯತೆ ತೀರಾ ಕಡಿಮೆ ಇದೆ.

ಹಣದ ಆಮಿಷ-ಲೋಕಾಯುಕ್ತ ಟ್ರ್ಯಾಪ್
ಸುರೇಶ್ ಗೌಡರಿಂದ ತಪ್ಪಿಸಿಕೊಂಡ ವಿಜಯೇಂದ್ರ!



ನಾಳಿನ ವಿಶ್ವಾಸಮತ ಯಾಚನೆಯಲ್ಲಿ ಯಡ್ಡಿ ಬಚಾವಾಗುತ್ತಾರೋ ಇಲ್ಲವೋ ಆದರೆ ಶಾಸಕರ ಖರೀದಿ ವ್ಯಾಪಾರಕ್ಕೆ ಕೈಹಾಕಿರುವ ಸಿಎಂ ಪುತ್ರ ವಿಜಯೇಂದ್ರ ಮಾತ್ರ ಲೋಕಾಯುಕ್ತರ ಕೈಗೆ ಸಿಕ್ಕಿಬೀಳುವುದರಿಂದ ಸ್ವಲ್ಪದರಲ್ಲಿ ಬಚಾವಾಗಿದ್ದಾನೆ.


ಈ ಕತೆ ಸ್ವಾರಸ್ಯಕರವಾಗಿದೆ.

ನಾಗಮಂಗಲದ ಕಾಂಗ್ರೆಸ್ ಶಾಸಕ ಸುರೇಶ್ ಗೌಡರು ಕಾಂಗ್ರೆಸ್‌ಗೆ ಹೊಸಬರಾದರೂ ಸಹ ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗ. ಮೊನ್ನಿನ ಬಿಜೆಪಿ ಭಿನ್ನಮತೀಯರ ಬಿಕ್ಕಟ್ಟು ಸ್ಫೋಟಗೊಂಡ ತಕ್ಷಣ ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಅತೃಪ್ತ ಶಾಸಕರನ್ನು ಸೆಳೆಯಲು ಬಿಜೆಪಿಗಳು ತಂತ್ರಗಾರಿಕೆ ಆರಂಭಿಸಿದ್ದರು. ಹೀಗೆ ಬಿಜೆಪಿಗಳು ಮಾಡಿಕೊಂಡಿದ್ದ ಪಟ್ಟಿಯಲ್ಲಿ ಕಾಂಗ್ರೆಸ್‌ನ ಅರಕಲಗೂಡು ಶಾಸಕ ವಾಲೆಮಂಜು. ನಾಗಮಂಗಲದ ಸುರೇಶಗೌಡ, ಮಂಡ್ಯದ ಜೆಡಿಎಸ್ ಶಾಸಕ ಎಂ.ಶ್ರೀನಿವಾಸ್ ಮುಂತಾದವರಿದ್ದರು.

ತಲಾ ಶಾಸಕರಿಗೆ 25 ಕೋಟಿ ರೂ.ಗಳು. ಸರ್ಕಾರ ಉಳಿದುಕೊಂಡರೆ ಕೆಲವರಿಗೆ ಸಚಿವ ಅಥವಾ ನಿಗಮ ಮಂಡಳಿ ಸ್ಥಾನ ಹೀಗೆ ಬೇಕಾಬಿಟ್ಟಿ ಆಶ್ವಾಸನೆಗಳನ್ನು ಬಿಜೆಪಿಗಳು ತೇಲಿಬಿಟ್ಟಿದ್ದರು. ವಾಲೆಮಂಜುಗಾಗಲಿ, ಸುರೇಶ್‌ಗೌಡರಿಗಾಗಲಿ ಕಾಂಗ್ರೆಸ್ ಬಗ್ಗೆ ಯಾವುದೇ ಅಸಮಾಧಾನಗಳಿಲ್ಲವಾದರೂ ಬಿಜೆಪಿಗಳ ಕಲ್ಪನೆಯಲ್ಲಿ ಇವರೆಲ್ಲ ಅತೃಪ್ತ ಶಾಸಕರಾಗಿದ್ದರು. ಸರಿ ಬಿಜೆಪಿಯಲ್ಲೊಂದು ಸ್ಕೆಚ್ ರೆಡಿಯಾಯಿತು. ಯಡ್ಡಿ ಪುತ್ರ ವಿಜಯೇಂದ್ರನೇ ಇದರ ಕಾರ್ಯಾಚರಣೆಗೆ ನಿಂತ. ಹಲವು ಕಾಂಗ್ರೆಸ್ ಶಾಸಕರಿಗೆ ಬಿಜೆಪಿ ಗಾಳ ಎಂಬ ಗಾಳಿಸುದ್ದಿಯೂ ಟಿವಿ ನ್ಯೂಸ್ ಚಾನೆಲ್‌ಗಳಲ್ಲಿ ಬಿತ್ತರಗೊಳ್ಳುವಂತೆ ಬಿಜೆಪಿ ಗುಂಪು ನೋಡಿಕೊಂಡಿತು.



ವಾಲೆಮಂಜು



ಸುರೇಶ್‌ಗೌಡ

ಆಗಲೇ ನಾಗಮಂಗಲದ ಕಾಂಗ್ರೆಸ್ ಶಾಸಕ ಸುರೇಶ್‌ಗೌಡರ ಮೊಬೈಲ್ 9900885511ಗೆ ಫೋನ್ ಕರೆಗಳು ಬರಲು ಶುರುವಾಯಿತು. ಅತ್ತ ಕಡೆಯಿಂದ ಮಾತನಾಡಿದ ವ್ಯಕ್ತಿ "ಸರ್ ನೀವು ನಂಜೊತೆ ಬನ್ನಿ. ನೀವು ಹೇಳಿದ ಜಾಗಕ್ಕೆ ಈಗಲೇ 25 ಸಿಆರ್(Crore-ಕೋಟಿ ಅನ್ನುವುದರ ಸಂಕ್ಷಿಪ್ತ ರೂಪ) ಕಳಿಸ್ತೀವಿ" ಎಂದ. ಮಜಾ ಅಂದರೆ ಸುರೇಶ್‌ಗೌಡ ಆಗ ಕುಮಾರಪಾರ್ಕ್‌ನ ಸಿದ್ದರಾಮಯ್ಯನವರ ಮನೆಯಲ್ಲೇ ಇದ್ದರು. ಸುರೇಶ್‌ಗೌಡ ಈ ಆಫರ್ ಬಗ್ಗೆ ಸಿದ್ದು ಹಾಗೂ ಡಿಕೆಶಿಗೆ ಹೇಳಿದರು.

ಅಲ್ಲಿಂದಾಚೆಗೆ ಪತ್ತೇದಾರಿ ಸಿನಿಮಾದ ರೀತಿ ಘಟನೆಗಳು ನಡೆದವು.

ಡಿಕೆ, ಕೃಷ್ಣಭೈರೇಗೌಡ ಹಾಗೂ ಯುವ ಕಾಂಗ್ರೆಸ್ ಪ್ರದ್ಯುಮ್ನ ಆಲನಹಳ್ಳಿ (ಕತೆಗಾರ ಶ್ರೀಕೃಷ್ಣ ಆಲನಹಳ್ಳಿ ಮಗ) ಒಟ್ಟಿಗೆ ಕುಳಿತು ಒಂದು ಕಾರ್ಯಾಚರಣೆ ಸಿದ್ಧಪಡಿಸಿದರು.

ಆ ಪ್ರಕಾರ ಸುರೇಶ್‌ಗೌಡರು ಬಿಜೆಪಿಗಳ ಹಣದ ಆಮಿಷಕ್ಕೆ ಒಪ್ಪಿದಂತೆ ನಟಿಸಿ ಒಂದು ಸ್ಥಳಕ್ಕೆ ಬಿಜೆಪಿಗಳನ್ನು ಹಣದೊಂದಿಗೆ ಬರುವಂತೆ ಹೇಳಿಕಳಿಸಬೇಕು. ಅಷ್ಟರೊಳಗೆ ಲೋಕಾಯುಕ್ತರಿಗೆ ಈ ಬಗ್ಗೆ ಮಾಹಿತಿ ನೀಡಿ ಹಣದೊಂದಿಗೆ ಬರಲಿರುವ ಬಿಜೆಪಿಯವರನ್ನು ಹಿಡಿಸಿಬಿಡಬೇಕು ಎಂಬುದೇ ಆ ತಂತ್ರವಾಗಿತ್ತು.

ಅದರಂತೆ ಸುರೇಶ್‌ಗೌಡ ಬಿಜೆಪಿಗಳೊಂದಿಗೆ ಮಾತನಾಡುವುದನ್ನು ಮುಂದುವರೆಸುತ್ತಾ 'ನನ್ನ ಜೊತೆ ಇನ್ನೂ ನಾಲ್ವರು ಶಾಸಕರಿದ್ದಾರೆ. ವಿಜಯೇಂದ್ರಗೆ ಬರಲು ಹೇಳಿ, ಎಲ್ಲಾ ಕೂತು 'ಮಾತಾಡೋಣ' ಎಂದು ಪುಸಲಾಯಿಸಿದರು.

ಅದರಂತೆ ಅಕ್ಟೋಬರ್ 6ರಂದು ಬುಧವಾರ ಸಂಜೆ ಈ ಡೀಲ್ ನಡೆಯುವುದೆಂದು ಮಾತುಕತೆಯೂ ಆಯಿತು. ಡಿಕೆ ಗುಂಪು ಅಮೆರಿಕಾದಿಂದ ತರಿಸಿರುವ ಅತ್ಯಾಧುನಿಕ ವಿಡಿಯೋ ಕ್ಯಾಮರಾಗಳನ್ನು ಸೆಟ್ ಮಾಡಿಟ್ಟುಕೊಂಡು ತಯಾರಾಗಿತ್ತು.

ವಿಜಯೇಂದ್ರ ರೆಡ್‌ಹ್ಯಾಂಡಾಗಿ ಸಿಕ್ಕಿಬೀಳುವುದಕ್ಕೆ ಇನ್ನು ಕೆಲವೇ ಗಂಟೆಗಳು ಬಾಕಿ ಇತ್ತು.

ಆದರೆ ಅಷ್ಟರಲ್ಲಿ ಒಂದು ಅನಿರೀಕ್ಷಿತ ಘಟನೆ ಆಗಿಹೋಯಿತು. ಟಿವಿ ನ್ಯೂಸ್ ತಂಡವೊಂದಕ್ಕೆ ಸುರೇಶ್‌ಗೌಡ ಸಿದ್ದರಾಮಯ್ಯನವರ ಮನೆಯಲ್ಲೇ ಇರುವುದು ಕಾಣಿಸಿಬಿಟ್ಟಿತು. ಮರುಕ್ಷಣದಲ್ಲೇ ಅದೇ ಸುದ್ದಿಯೂ ಟೆಲಿಕಾಸ್ಟ್ ಆಗಿಹೋಯಿತು.

ಅದರಿಂದ ಎಚ್ಚೆತ್ತ ವಿಜಯೇಂದ್ರನ ಗುಂಪು ಮತ್ತೆ ಸುರೇಶ್‌ಗೌಡರಿಗೆ ಫೋನ್ ಮಾಡುವ ರಿಸ್ಕನ್ನೇ ತೆಗೆದುಕೊಳ್ಳಲಿಲ್ಲ.

ವಿಜಯೇಂದ್ರ ಸ್ವಲ್ಪದರಲ್ಲಿ ಪಾರಾಗಿಹೋಗಿದ್ದ.

ಇದಾದನಂತರವೇ ಸುರೇಶ್‌ಗೌಡ ಸಿದ್ದು ಮನೆಯಿಂದ ಹೊರಬಂದು "ನಾನು ಕಾಂಗ್ರೆಸ್ ಬಿಟ್ಟು ಎಲ್ಲಿಗೂ ಹೋಗಲ್ಲ" ಎಂದು ಸ್ಪಷ್ಟನೆ ಕೊಟ್ಟರು. ಅದೇ ವೇಳೆಯಲ್ಲಿ ಸುವರ್ಣ ನ್ಯೂಸ್ ಚಾನೆಲ್‌ನ ಚರ್ಚೆಯಲ್ಲಿ ಭಾಗವಹಿಸಿದ್ದ ವಾಲೆಮಂಜು "ತಾನು ಬಿಜೆಪಿ ಸೇರುತ್ತಿರುವುದಾಗಿ' ಸುಳ್ಳು ಸುದ್ದಿ ಪ್ರಸಾರ ಮಾಡುತ್ತಿದ್ದ ಸುವರ್ಣ ಚಾನೆಲ್‌ನವರ ಮೇಲೆ ರೇಗಾಡಿ ಆ ಸುದ್ದಿ ಪ್ರಸಾರ ನಿಲ್ಲಿಸುವಂತೆ ಮಾಡಿದರು.

ಒಟ್ಟಿನಲ್ಲಿ ಅವಿವೇಕಿ ವಿಜಯೇಂದ್ರ ಲೋಕಾಯುಕ್ತರ ಕೈಗೆ ಸಿಕ್ಕಿಬೀಳುವುದರಿಂದ ಆಚಾನಕ್ಕಾಗಿ ಎಸ್ಕೇಪಾಗಿ ಹೋದ.

ಮುಖ್ಯಮಂತ್ರಿಯಾಗುವರೆ ಸಿದ್ದು?

ಜೆಪಿ ಸರ್ಕಾರ ಆಂತರಿಕ ಬಂಡಾಯದ ಬಿರುಗಾಳಿಯಲ್ಲಿ ಸಿಕ್ಕು ತ್ತಿರುವಾಗ ಸಹಜವಾಗಿಯೇ ಎಲ್ಲೆಡೆ ಟೆನ್‌ಷನ್. ಸಂಸದ, ಶಾಸಕರಿರಲಿ ಚೇಲಾಗಳು, ಸಣ್ಣಪುಟ್ಟ ರಾಜಕಾರಣಿಗಳೂ ತಾವೇನೋ ಎಲ್ಲದರಲ್ಲೂ ಪಾತ್ರ ನಿರ್ವಹಿಸುವಂತೆ ಪೋಸು ಕೊಡುತ್ತಾ ಬಿಟ್ಟೂಬಿಡದೆ ್‌ಗಳಲ್ಲಿ ಮಾತನಾಡುತ್ತಾ ಅತ್ತಿಂದಿತ್ತ ಓಡಾಡುತ್ತಿದ್ದಾರೆ.

ದರೆ ಸಿದ್ದರಾಮಯ್ಯ ಮಾತ್ರ ಹಾಗಿಲ್ಲ.

ಸಂಚಿಕೆ ಸಿದ್ದವಾಗುತ್ತಿರುವ ಗಡಿಬಿಡಿಯಲ್ಲೇ 'ಲಂಕೇಶ್' ಪತ್ರಿಯಿಂದ ಮಯ್ಯನವರನ್ನು ಭೇಟಿಯಾಗಿ ಹತ್ತಿಪ್ಪತ್ತು ನಿಮಿಷ ಅವರೊಂದಿಗೆ ಯ ಬೆಳವಣಿಗೆಗಳ ಬಗ್ಗೆ ವಿಚಾರವಿನಿಮಯ ಮಾಡಲಾಯಿತು.

ನತ್ತು ಬುಧವಾರ ಸಿದ್ದರಾಮಯ್ಯನವರ ಮನೆ ತುಂಬೆಲ್ಲಾ ಕಾಂಗ್ರೆಸ್ ತುಂಬಿಕೊಂಡಿದ್ದರು. ಎಲ್ಲಿ ನೋಡಿದರೂ, ಯಾರನ್ನೂ ಗಮನಿಸಿದರೂ .. ಮಾತು... ಬರೀ ಮಾತೇ...!

ದರೆ ನಮ್ಮೊಂದಿಗೆ ಟೀ ಕುಡಿಯಲು ಡೈನಿರಿಗ್‌ಹಾಲ್‌ಗೆ ಬಂದ ಮಯ್ಯ ಮಾತ್ರ ಬಹಳ ಕೂಲ್ ಆಗಿದ್ದರು. ಅವರ ಮಾತಿನಲ್ಲಾಗಲಿ, ದಲ್ಲಾಗಲೀ ಚೂರೂ ಆತಂಕ, ಉದ್ವೇಗಗಳಿರಲಿಲ್ಲ.

ನ್ ಸಾರ್, ಎಲ್ಲಾರು ಟೆನ್‌ಷನ್‌ನಲ್ಲಿದ್ದಾರೆ. ನೀವು ಆರಾಮಾಗಿ ರಿ!" ಎಂದು ಕೇಳಿದಾಗ ಸಿದ್ದರಾಮಯ್ಯ ಹೇಳಿದ್ದು:

ನಾನು ಯಾವುದಕ್ಕೂ ಟೆನ್‌ಷನ್ ಮಾಡ್ಕಳಲ್ಲ, ಯಾವುದೇ ವಿಚಾರ ಆದ್ರೆ ಆಗಲಿ, ಇಲ್ಲಾಂದ್ರೆ ಹೋಗಲಿ ಅಂತ ಇರೋದನ್ನ ಕಲ್ತಿದ್ದೀನಿ" ದಾದನಂತರ ಈಗಿನ ರಾಜಕೀಯ ಘಟನಾವಳಿಗಳ ಬಗ್ಗೆ ಸಿದ್ದರಾಮಯ್ಯ ಟ್ಟು ವಿವರಿಸಿ ಹೇಳಿದರು. ಅದಿಲ್ಲಿ ಮುಖ್ಯವಲ್ಲ.

ಈಗ ಬಹುತೇಕರಲ್ಲಿ ಇರುವ ಪ್ರಶ್ನೆ ಏನೆಂದರೆ 'ಯಡ್ಡಿ ಸರ್ಕಾರಕ್ಕೆ ಬಹುಮತ ಸಿಗದೇ ಹೋದರೆ ಸರ್ಕಾರ ವಜಾ ಆಗುತ್ತೆ. ಆಗ ಕಾಂಗ್ರೆಸ್-ಜೆಡಿಎಸ್ ಸೇರಿ ಸಮ್ಮಿಶ್ರ ಸರ್ಕಾರ ರಚಿಸುತ್ತಾರಾ? ಹೌದೆಂದಾದರೆ ಆ ಹೊಸ ಸರ್ಕಾರದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಇರುತ್ತಾರಾ?' ಎಂಬುದು.



ಬಹುತೇಕ ಈಗಿನ ಪರಿಸ್ಥಿತಿ ಹೀಗೇ ಮುಂದುವರೆದರೆ ಯಡಿಯೂರಪ್ಪನ ಸರ್ಕಾರ ಉಳಿಯಲಾರದು. ರಾಜ್ಯ ಬಿಟ್ಟು ಹೊರಗೆ ಹೋಗಿರುವ ಭಿನ್ನಮತೀಯರ ಪೈಕಿ ಒಬ್ಬ ಶಾಸಕನೂ ವಾಪಸ್ ಬರದಿರುವುದನ್ನು ನೋಡಿದರೆ ಯಡ್ಡಿಗಿದು ಅತಂತ್ರ ಸ್ಥಿತಿಯೇ ಹೌದು.

ಯಡ್ಡಿ ಸರ್ಕಾರ ಹೋಗಲಿದೆ ಎನ್ನುವ ಊಹೆಯ ನೆಲೆಯಲ್ಲಿ ಹೇಳಬಹುದಾದರೆ, ಆ ನಂತರ ಕಾಂಗ್ರೆಸ್-ಜೆಡಿಎಸ್‌ಗಳ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ. ಇವರೊಂದಿಗೆ ಪಕ್ಷೇತರರು ಹಾಗೂ ಕೆಲ ಬಿಜೆಪಿ ಭಿನ್ನಮತೀಯರೂ ಇರುತ್ತಾರೆ. ಕಾಂಗ್ರೆಸ್ ಹೈಕಮಾಂಡ್ ವಲಯದಲ್ಲಿರುವವರ ಪ್ರಕಾರ ಕರ್ನಾಟಕದಲ್ಲಿ ತಕ್ಷಣದಲ್ಲೇ ಹೊಸಚುನಾವಣೆ ಅವರಿಗೆ ಬೇಕಿಲ್ಲ. ಹಾಗೆಯೇ ರಾಷ್ಟ್ರಪತಿ ಆಳ್ವಿಕೆಯೂ ಅವರಿಗೆ ಸಮ್ಮತವಿಲ್ಲ. ಇವೆರಡೂ ಇಲ್ಲ ಅಂತಾದ ಮೇಲೆ ಇನ್ನು ಉಳಿಯುವುದೇ ಹೊಸ ಸಮ್ಮಿಶ್ರ ಸರ್ಕಾರದ ಸಾಧ್ಯತೆ!

ಈಗ ಆಗಿರುವ ಒಪ್ಪಂದದಂತೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿಯೂ ಜೆಡಿಎಸ್‌ನ ಎಚ್.ಡಿ.ರೇವಣ್ಣ ಉಪಮುಖ್ಯಮಂತ್ರಿಯಾಗಿಯೂ ಬರಲಿದ್ದಾರೆ. ಈಗಿನ ಬಂಡಾಯದ ಸೂತ್ರಧಾರ ಕುಮಾರಸ್ವಾಮಿ ಸಂಸತ್ ಸದಸ್ಯರಾಗಿರುವ ಕಾರಣ ಅವರಿಗೆ ಕೇಂದ್ರದಲ್ಲಿ ಸಚಿವರಾಗುವಂತೆ ಏರ್ಪಾಡಾಗುತ್ತದೆ ಎನ್ನಲಾಗಿದೆ.

ಯಡ್ಡಿ ವಿಶ್ವಾಸಮತ ಗಳಿಸದೆ ಹೋದ ತಕ್ಷಣದಲ್ಲಿ ಹೇಗೆ ಸರ್ಕಾರ ಬಿದ್ದುಹೋಗಬಹುದೋ ಅದೇ ಗಳಿಗೆಯಲ್ಲೇ ಸ್ಪೀಕರ್ ಬೋಪಣ್ಣ ಸಹ ಮಾಜಿಯಾಗುತ್ತಾರೆ. ಆ ಜಾಗಕ್ಕೆ ಹೊಸ ಸ್ಪೀಕರ್ ಬರುತ್ತಾರೆ. ಆಗ ಬಿಜೆಪಿ ಭಿನ್ನಮತೀಯರ ವಿಪ್ ಉಲ್ಲಂಘನೆ ಪ್ರಕರಣ ತಕ್ಷಣದಲ್ಲಿ ತೀರ್ಮಾನವಾಗುವುದೂ ಇಲ್ಲ, ಭಿನ್ನರ ಶಾಸಕಗಿರಿ ಅನರ್ಹತೆ ಪ್ರಶ್ನೆ ಬಗೆಹರಿಯದಂತೆ ನೋಡಿಕೊಳ್ಳಲಾಗುತ್ತಿದೆ.

ಇವಿಷ್ಟು ಕಾಂಗ್ರೆ ಹಾಗೂ ದಳದವರ ಕಾರ್ಯತಂತ್ರ.

ಆದರೆ ಕೇಳಬೇಕಾದ ಒಂದು ಪ್ರಶ್ನೆ ಏನೆಂದರೆ ರಾಜ್ಯದ ಸಜ್ಜನ ರಾಜಕಾರಣಿ ಹಾಗೂ ಮಾಸ್ ಲೀಡರ್ ಆಗಿರುವ ಸಿದ್ದರಾಮಯ್ಯ ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ, ಅತಂತ್ರ ಸನ್ನಿವೇಶದಲ್ಲಿ ಮುಖ್ಯಮಂತ್ರಿಯಾಗಬೇಕೆ? ಎನ್ನುವುದು.

ಸಿದ್ದರಾಮಯ್ಯ ಕರ್ನಾಟಕದ ಮುಖ್ಯಮಂತ್ರಿಯಾಗುವ ಎಲ್ಲಾ ಅರ್ಹತೆ, ವ್ಯಕ್ತಿತ್ವ ಹೊಂದಿದ್ದಾರೆಂಬುದು ನಿಜ. ಆದರೆ ಇವತ್ತು ಯಡಿಯೂರಪ್ಪ ಎದುರಿಸಿದ ಅಡೆತಡೆಗಳು ನಾಳೆ ಸಿದ್ದರಾಮಯ್ಯನವರನ್ನು ಬಾಧಿಸುವುದಿಲ್ಲವೆನ್ನುವ ಗ್ಯಾರಂಟಿ ಏನು?

ಈ ಪ್ರಶ್ನೆಗೆ ತಕ್ಷಣ ಉತ್ತರ ಸಿಗುವುದಿಲ್ಲ ಹೌದು.

ಆದರೆ ಬಿಜೆಪಿಯ ದುಷ್ಟರು, ಯಡ್ಡಿಯಂತ ಭ್ರಷ್ಟರು ಒಮ್ಮೆ ತೊಲಗಿಹೋದರೆ ಅದೇ ಈ ನಾಡಿನ ಭಾಗ್ಯ ಎನ್ನುವ ಪರಿಸ್ಥಿತಿ ಈಗಿದೆ.

ಅಂತಲ್ಲಿ ಸಿದ್ದರಾಮಯ್ಯ ಸಿಎಂ ಹುದ್ದೆಗೆ ಬೆಟರ್ ಕ್ಯಾಂಡಿಡೇಟ್ ಎನ್ನದೇ ವಿಧಿಯಿಲ್ಲ. ●

...ೊರೈರಾಜ್‌ರನ್ನು ತುಳಿದ ಪರಿ....

...ೆ ಆರೆಸ್ಸೆಸ್ ಹಾಗೂ ಬಿಜೆಪಿ ಮಂದಿ ಕಾರ್ಯಕರ್ತರನ್ನಷ್ಟೇ ಅಲ್ಲದೆ, ಪ್ರಭಾವಲಯದಲ್ಲಿರುವವರನ್ನೂ ಲ್ಲಾ ತುಳಿಯುತ್ತಾರೆಂಬ ಅಂಶ ಈ ಬಂಡಾಯದ ಚಿತ್ರಪಟದಲ್ಲಿ ಸ್ಪಷ್ಟವಾಗಿದೆ.

...ರಾ ಮುಖಂಡರುಗಳನೇಕರು ತಿಣುಕಾಡಿದರೂ ಅತೃಪ್ತರ ಮನವೊಲಿಸಲಾಗದಿದ್ದ ಸಂದರ್ಭದಲ್ಲಿ ...್ ಕುಮಾರ್, ಸದಾನಂದಗೌಡ ಸರದಿಯಲ್ಲಿ ನಿಂತರು. ಆದರೆ ಈ ಆಸಾಮಿಗಳು ತಾವೇ ...ಗುಂಪಾಗಿಸಿದ ಹಿರಿಯರೊಬ್ಬರ ಮುಂದೆ ನಿಂತು ಜೊತೇಲಿ ಬಂದು ಸಹಾಯ ಮಾಡುವಂತೆ ನೆದರು. ಅವರು ದೊರೈರಾಜ್!


...ಕೀಲರಾಗಿರುವ ದೊರೈರಾಜ್ ಆರೆಸ್ಸೆಸ್ ಪಡೆಯಲ್ಲಿರುವವರೆಂಬ ಏಕಮಾತ್ರ ತಕರಾರಿನ ಹೊರತಾಗಿ ...ಬ ವ್ಯಕ್ತಿತ್ವ ಹೊಂದಿರುವವರು. ನಂಬಿದ ಸಿದ್ಧಾಂತ, ಸಂಘಟನೆಗೆ ಬದ್ಧರಾಗಿದ್ದುಕೊಂಡು ಬದುಕುತ್ತಿರುವವರು. ಇಂಥಾ ದೊರೈರಾಜ್‌ರನ್ನು ಆರೆಸ್ಸೆಸ್-ಬಿಜೆಪಿ ಮಂದಿ ದಶಕಗಳಿಂದಲೂ ಬಳಸಿಕೊಳ್ಳುತ್ತಾ ಬಂದಿದ್ದಾರೆ. ತಾವು ಯಡವಟ್ಟು ಮಾಡಿಕೊಂಡು ಕೇಸು ಜಡಿಸಿಕೊಂಡಾಗಲೆಲ್ಲಾ ದೊರೈರಾಜ್ ಫೀಸು ತೆಗೆದುಕೊಳ್ಳದೇನೇ ಕೆಲಸ ಮಾಡಿದ್ದಾರೆ. ಇವರ ನಿಷ್ಠೆಯನ್ನು ಕಂಡ ಬಹುತೇಕರು ಯಡ್ಡಿ ಇವರನ್ನೇ ಅಡ್ವೋಕೇಟ್ ಜನರಲ್ ಆಗಿ ನೇಮಿಸಬಹುದೆಂದುಕೊಂಡಿದ್ದರು. ಆದರೆ ದುಷ್ಟ ಯಡ್ಡಿ ಅಧಿಕಾರಕ್ಕೇರುತ್ತಲೇ ಅವರನ್ನು ಮರೆತರು. ಆದರೆ ಅಡಿಗಡಿಗೆ ಬಂಡಾಯ ಎದುರಿಸಬೇಕಾದಾಗ ದೊರೈರಾಜ್‌ರನ್ನು ಹುಡುಕ್ಯಾಡಿ ಕರೆತಂದು ಸಂಧಾನ ನಡೆಸಿ ಬಚಾವಾದರು. ಸಂಧಾನ ಯಶಸ್ವಿಯಾದ ಬಳಿಕ ಅವರನ್ನು ಯಡ್ಡಿಯಾಗಲಿ ಆರೆಸ್ಸೆಸ್ ಮಂದಿಯಾಗಲಿ ತಿರುಗಿಯೂ ನೋಡುತ್ತಿರಲಿಲ್ಲ.



...ದೀಗ ಮತ್ತೆ ಯಡ್ಡಿಗೆ ದೊರೈರಾಜ್ ನೆನಪಾಗಿದ್ದಾರೆ. ಅವರೂ ಸಹ ನಿಷ್ಠೆಗೆ ನೇತುಬಿದ್ದವರಂತೆ ...ೀರ ಹಿಂದೆ ಹೋಗಿದ್ದಾರೆ. ಆದರೆ ಈ ಪ್ರಕ್ರಿಯೆ ಮುಗಿದ ಬಳಿಕ ಮೂಲೆಯೇ ಗತಿಯೆಂಬುದು ...ತ್ಯ. ಹಲವಾರು ಬಾರಿ ಇಂಥ ಅವಮಾನ, ತುಳಿತಕ್ಕೊಳಗಾಗಿರುವ ದೊರೈರಾಜ್ ಯಾಕೆ ಈ ...ಕೂಟದಲ್ಲೇ ಮುಂದುವರೆಯುತ್ತಿದ್ದಾರೆಂಬುದು ಖೇದಕರ ಪ್ರಶ್ನೆ.

ಆರ್‌ಎಸ್‌ಎಸ್ ಜಯದೇವ್

ಚರಂಡೀಲಿ ನಿಂತು ರಾಮಧ್ಯಾನ!



'ತನಗೂ, ರಾಜಕೀಯಕ್ಕೂ ಸಂಬಂಧವೇ ಇಲ್ಲ' ಎಂದು ರೀಲು ಬಿಡುತ್ತಲೇ ಬಂದಿರುವ ಆರ್‌ಎಸ್‌ಎಸ್‌ನ ಮುಖವಾಡ ಎಂದೋ ಬಯಲಾಗಿದೆ. ಹಾಗೆಯೇ 'ಶಿಸ್ತಿನ ಸಂಘಟನೆ' ಎಂಬ ಮಾಧ್ಯಮಬಿಂಬಿತ ಮುಖವಾಡವೂ ಎಂದೋ ಕಳಚಿ ಹೋಗಿದೆ. ರಾಜ್ಯದ ಆರ್‌ಎಸ್‌ಎಸ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬಿಜೆಪಿ ಸರ್ಕಾರ ನಡೆಸುತ್ತಿರುವ ಪಾಪದ ಕೆಲಸಗಳಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಬೆಂಬಲಿಸುತ್ತ ಕೊಳ್ಳೆ ಹೊಡೆದ ದುಡ್ಡಲ್ಲಿ ತಾನೂ ಪಾಲುದಾರ ಎಂಬಂತೆ ವರ್ತಿಸುತ್ತಿದೆ.

ಈ ರಾಜ್ಯ ಸರ್ಕಾರದ ಪೋಷಕನಂತಾಡುವ ರಾಜ್ಯ ಆರೆಸ್ಸೆಸ್ ಸದ್ಯ ನಡೆಯುತ್ತಿರುವ ಕುದುರೆ ವ್ಯಾಪಾರವನ್ನು ಬಿಜೆಪಿಯ ಗಟಾರು ರಾಜಕಾರಣವನ್ನು ಸುಮ್ಮನೇ ನೋಡುತ್ತಾ ಕುಳಿತಿದೆ. ಅಷ್ಟೇ ಅಲ್ಲ, ತನ್ನ ಹಿಡನ್ ಅಜೆಂಡಾಗಳನ್ನು ಸಾಧಿಸಿಕೊಳ್ಳಲು ಸೆಗಣಿ ತಿಂದಾದರೂ ಬಿಜೆಪಿ ಅಧಿಕಾರದಲ್ಲಿ ಉಳಿಯುವಂತಾಗಲಿ ಎಂಬ ಧೋರಣೆ ತಾಳಿದೆ. ಹೀಗೆ ಆರ್‌ಎಸ್‌ಎಸ್ ಅನ್ನು ಚರಂಡಿಗೆ ತಂದು ನಿಲ್ಲಿಸಿದ ಕೀರ್ತಿ ಅದರ ಮುಖಂಡ ಮೈ.ಚ. ಜಯದೇವ್‌ರಿಗೆ ಸಲ್ಲಬೇಕು. ಈಗಷ್ಟೇ ಅಲ್ಲ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಅವರೆಲ್ಲ ಕೊಳಕು, ಭ್ರಷ್ಟ ಕೆಲಸಗಳನ್ನು ನೋಡಿಯೂ ನೋಡದಂತೆ, ಕೆಲವೊಮ್ಮೆ ಅದರಲ್ಲೂ ಪಾಲು ಪಡೆದಂತೆ ಜಯದೇವರ ಆರ್‌ಎಸ್‌ಎಸ್ ವರ್ತಿಸಿದೆ. ಆರಂಭದಲ್ಲೇ ಬಹುಮತ ಪಡೆಯಲು ಬಿಜೆಪಿ ನಡೆಸಿದ 'ಆಪರೇಷನ್ ಕಮಲ' ಎಂಬ ಹೇಸಿಗೆಯ ಕಾರ್ಯಕ್ರಮಕ್ಕೂ ಆರ್‌ಎಸ್‌ಎಸ್ ಬೆಂಬಲವಿತ್ತು. ಯಡ್ಡಿ ಸರ್ಕಾರ ರೈತರ ಮೇಲೆ ಗೋಲಿಬಾರ್ ಮಾಡಿದಾಗಲೂ ಅದು ತೆಪ್ಪಗಿತ್ತು.

ಕಳೆದ ವರ್ಷ ನೆರೆಪ್ರವಾಹದ ವೇಳೆ ಬಿಜೆಪಿಯಲ್ಲಿ ಅಧಿಕಾರಕ್ಕಾಗಿ ಕಲಹ ಆರಂಭವಾಗಿ ಶಾಸಕ, ಸಚಿವರು ಹೈದರಾಬಾದ್ ರೆಸಾರ್ಟ್ ಪಾಲಾಗಿ ಮಜಾ ಅನುಭವಿಸಿದ್ದನ್ನು ಆರ್‌ಎಸ್‌ಎಸ್ ಖಂಡಿಸಲಿಲ್ಲ. ಇತ್ತೀಚೆಗೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಗ ಜಗ್ಗ ನೂರಾರು ಕೋಟಿಗಳ ಭೂಲೂಟಿ ಮಾಡಿ, ಲಂಚ ನೀಡಲು ಹೋಗಿ ರೆಡ್‌ಹ್ಯಾಂಡ್ ಆಗಿ ಸಿಕ್ಕರೂ ಜಯದೇವ್ ಗಪ್‌ಚುಪ್! ಹೋಗಲಿ, ಅವರದೇ ಎಬಿವಿಪಿಯಿಂದ ಬಂದ ಲಿಂಬಾವಳಿ ಭೂಲೂಟಿ ಮಾಡಿದಾಗಲೂ ಆರ್‌ಎಸ್‌ಎಸ್ ತೆಪ್ಪಗೆ ಇತ್ತು....

ಒಟ್ಟಿನಲ್ಲಿ ಹೇಸಿಗೆ ತಿಂದಾದರೂ ಬಿಜೆಪಿ ಸರ್ಕಾರ ಬದುಕಲಿ. ಆ ಮೂಲಕ ತನ್ನ ಕೋಮುವಿಷ ಹರಡಲು ಸಹಾಯ ಮಾಡಲಿ ಎಂಬ ನೀಚಬುದ್ಧಿಯನ್ನು ಪ್ರದರ್ಶಿಸುತ್ತಿರುವ ಮೈ.ಚ. ಜಯದೇವ್‌ರ ನೇತೃತ್ವದ ಆರ್‌ಎಸ್‌ಎಸ್ ಅದ್ಯಾವ ಶಿಸ್ತಿನ ಸಂಘಟನೆ ಅಂತೀರಿ?

ಇದನ್ನು 'ಚರಂಡಿಯಲ್ಲಿ ನಿಂತು ರಾಮಧ್ಯಾನ' ಎಂದು ವರ್ಣಿಸಬಹುದಲ್ಲವೆ?

...ಪಾರಿ ...ಟ್ಟಿದ್ದು ...ಡ್ಡಿಯೆ?



...ರ್ಕಾರದ ವಿರುದ್ಧ ಬಂಡಾಯ ...ಡೆದರೆ ಥಟ್ಟನೆ ಜನರ ತಲೆಗೆ ...ಬರುವುದು ಜನಾರ್ದನ ರೆಡ್ಡಿಯ ...ಯಾಕೆಂದರೆ ಯಡ್ಡಿ ವಿರುದ್ಧದ ...ಬೆಳವಣಿಗೆಗಳ ಹಿಂದೆಯೂ ರೆಡ್ಡಿಯ ಚಿತಾವಣೆಯೇ ...ವಾಗಿತ್ತು. ಆದರೀಸಲದ ಬಂಡಾಯ ಪ್ರಹಸನದಲ್ಲಿ ... ಬದಲಾವಣೆಯಿದೆ; ರೆಡ್ಡಿ ಮುಖ್ಯ ಭೂಮಿಯಲ್ಲಿ ...ಂಡಿಲ್ಲ, ಬದಲಾಗಿ ಯಡ್ಡಿ ಪರ ಸಂಧಾನಕಾರನಾಗಿ ಬದಲಿಸಿದ್ದಾನೆ!

... ಬಾರಿಯ ಬಂಡಾಯದಲ್ಲಿ ರೆಡ್ಡಿಯ ಸೂತ್ರದಾರಿಕೆ ...ಲು ದಾಖಲೆಗಳಿಗಾಗಿ ಹುಡುಕಬೇಕಾಗಿಲ್ಲ, ಇಡೀ ...ಮುಂದೆಯೇ ಕದಲುತ್ತಿದೆ. ಚೆನ್ನೈ, ಶಿರಡಿ, ದೆಹಲಿ ...ಡಾಯದ ಬಾವುಟ ಹಿಡಿದು ಸುತ್ತಾಡುತ್ತಿರುವವ ... ಗಮನಿಸಿ. ಅವರ ಹಿನ್ನೆಲೆಗಳನ್ನು ನೆನಪಿಸಿಕೊಳ್ಳಿ. ... ಒಂದಿಷಿಂದಲೂ ರೆಡ್ಡಿ ಪಾಳೆಯದಲ್ಲಿ ಗುರುತಿಸಿಕೊಂಡು ಆತ ಹೇಳಿದಂತೆ ಕುಣಿಯುವ ಜಾಯಮಾನದವರೇ ಎಂಬುದು ಸ್ಪಷ್ಟವಾಗುತ್ತದೆ.

ಅಷ್ಟಕ್ಕೂ ಈಗ ಬಂಡಾಯಗಾರರಾಗಿರುವ ಅನೇಕರನ್ನು ಆಪರೇಷನ್ ಕಮಲದ ಮೂಲಕ ಬಿಜೆಪಿಗೆ ಸೆಳೆದುಕೊಂಡವನು ಇದೇ ರೆಡ್ಡಿ. ನಾಯಕ ಯಡಿಯೂರಪ್ಪರಾದರೂ 'ಹಾರಿ' ಬಂದವರೆಲ್ಲಾ ನಿಕಟ ಸಂಪರ್ಕದಲ್ಲಿದ್ದದ್ದು ರೆಡ್ಡಿಯೊಂದಿಗೇ. ಇದುವರೆಗೆ ಸರ್ಕಾರದ ವಿರುದ್ಧ ರೆಡ್ಡಿ ಐದು ಬಾರಿ ಬಂಡಾಯ ಸಾರಿದ್ದಾನೆ. ಅದಕ್ಕೆಲ್ಲಾ ಇವರನ್ನೇ ಬಳಸಿಕೊಂಡಿದ್ದಾನೆ.

ಅಂಥಾ ರೆಡ್ಡಿ ನಿಷ್ಠುರು ಇದ್ದಕ್ಕಿದ್ದಂತೆ ಆತನ ಅಣತಿಯಿಲ್ಲದೆ ಬಂಡಾಯದ ನಿರ್ಧಾರ ತೆಗೆದುಕೊಂಡರೆಂದರೆ ನಂಬಲು ಸಾಧ್ಯವೆ? ಈ ಕುರಿತು ಕೆದಕಿದರೆ ಈ ಬಾರಿಯ ಬಂಡಾಯ ಪ್ರಹಸನಕ್ಕೂ ರೆಡ್ಡಿಯೇ ಬಾಸ್ ಎಂಬ ವಿಚಾರ ಅನಾಯಾಸವಾಗಿ ಸಾಬೀತಾಗುತ್ತದೆ. ಹೇಗೂ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ರೆಡ್ಡಿಯನ್ನು ಮೂಲೆಗುಂಪು ಮಾಡಲಾಗಿತ್ತು. ಇದನ್ನೇ ನೆಪವಾಗಿಟ್ಟುಕೊಂಡು ರೆಡ್ಡಿ ಬಂಡಾಯದ ನೇತೃತ್ವ ವಹಿಸಬಹುದಿತ್ತಲ್ಲಾ. ಅಂತೊಂದು ಪ್ರಶ್ನೆ ಸಹಜವೆ. ಆದರೆ ರೆಡ್ಡಿಗೆ ಸದ್ಯ ಅಪಾಯಗಳಿಂದ ತಕ್ಷಣದಲ್ಲಿ ಪಾರಾದರೆ ಸಾಕಾಗಿದೆ. ವಿಲನ್ ಪಟ್ಟ ಬೇಕಾಗಿಲ್ಲ!

ಹಣವೊಂದಿದ್ದರೆ ಎಲ್ಲವನ್ನೂ ಖರೀದಿಸಬಹುದೆಂಬ ಉಮೇದಿನಲ್ಲಿದ್ದ ರೆಡ್ಡಿ ಇದೀಗ ಹತಾಶ ಸ್ಥಿತಿ ತಲುಪಿ ನಿಶ್ಶಸ್ತ್ರನಾಗಿದ್ದಾನೆ. ಕೈಯಲ್ಲೊಂದು ಖಾತೆಯಿದೆಯಾದರೂ ಅದು ಅಖಂಡ ಅಂದಾದುಂದಿಯನ್ನು ಮುಚ್ಚಿ ಹಾಕುವುದಕ್ಕಾಗಲಿ, ತನ್ನ ಬೃಹತ್ ಉದ್ಯಮ ದಂಧೆಗಳನ್ನು ಅಡೆತಡೆಯಿಲ್ಲದೆ ಮುನ್ನಡೆಸುವುದಕ್ಕಾಗಲೀ ಸಹಾಯ ಮಾಡುತ್ತಿಲ್ಲ. ಪಕ್ಕದ ಆಂಧ್ರದೊಳಗಿನ ಆತನ ದರ್ಬಾರಿಗೂ ಬ್ರೇಕ್ ಬಿದ್ದಿದೆ. ರಾಜಶೇಖರ ರೆಡ್ಡಿ ಅವಧಿಯಲ್ಲಿ ಮನಬಂದಂತೆ ಉದ್ಯಮಗಳಿಗೆ ಹಣ ಸುರಿದ ರೆಡ್ಡಿಯ ಹೂಂಕಾರಗಳೆಲ್ಲ ವೈಎಸ್ಸಾರ್‌ರೊಂದಿಗೇ ಉಡುಗಿಹೋಗಿವೆ. ವೈಎಸ್ಸಾರ್ ಮಗ ಜಗನ್‌ನನ್ನೇ ಮುಖ್ಯಮಂತ್ರಿ ಮಾಡಿ ಹಿಡಿತ ಸಾಧಿಸ ಹೊರಟನಾದರೂ ಅದರಲ್ಲೂ ಸೋಲೇ ಎದುರಾಯಿತು.

ಬರಬರುತ್ತಾ ರೆಡ್ಡಿಯ ನಸೀಬು ಅದ್ಯಾವ ಪರಿ ಗೋತಾ ಹೊಡೆದಿದೆಯೆಂದರೆ, ಇತ್ತ ಯಡಿಯೂರಪ್ಪನವರೂ ಉಲ್ಟಾ ಹೊಡೆಯಲು ಶುರುವಿಟ್ಟಿದ್ದಾರೆ. ಅತ್ತ ಕಾಂಗ್ರೆಸ್ ಕೂಡಾ ಗಣಿ ನಿಯಂತ್ರಣ ಪ್ರಾಧಿಕಾರ ಅಂತೊಂದು ಕಾನೂನಿನ ಮೂಲಕ ರೆಡ್ಡಿಗೆ ಖೆಡ್ಡಾ ತೋಡ ಹೊರಟಿದೆ.

ಆದರೆ ಇದೆಲ್ಲದರಿಂದ ತಪ್ಪಿಸಿಕೊಂಡು ತನ್ನ ದಂಧೆಯನ್ನು ಸುಸೂತ್ರವಾಗಿ ಮುಂದುವರೆಸಲು ರೆಡ್ಡಿಗೆ ಕೇಂದ್ರ ಸರ್ಕಾರದ ಕೃಪಾಕಟಾಕ್ಷ ಬೇಕೇಬೇಕು. ರಾಜ್ಯದ ವಿಚಾರಕ್ಕೆ ಬಂದರೆ, ಇಲ್ಲಿ ನಿರಾಳವಾಗಿ ಉಸಿರಾಡಬೇಕಾದರೆ ಯಡಿಯೂರಪ್ಪನನ್ನು ಕೆಡವಲೇ ಬೇಕು.

ಒಂದು ಮೂಲದ ಪ್ರಕಾರ ರೆಡ್ಡಿಯ ಇಂಥ ಸಂಕಟಗಳೇ ಈ ಬಂಡಾಯಕ್ಕೆ ಮೂಲ ಕಾರಣ. ಕಾಂಗ್ರೆಸ್ ಪಕ್ಷಕ್ಕೆ ಯಡ್ಡಿ ಇಳಿಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಯಡ್ಡಿಯನ್ನಿಳಿಸಿ ಕಾಂಗ್ರೆಸ್ ಅನ್ನು ಸಂತೃಪ್ತಿಪಡಿಸಿ ತನ್ನ ತಕ್ಷಣದ ಕಷ್ಟಗಳಿಂದ ಪಾರಾಗುವುದು ರೆಡ್ಡಿ ತಂತ್ರ.

ಗಮನಿಸಿ ನೋಡಿ. ಬಂಡಾಯದ ಸಂದರ್ಭದಲ್ಲಿ ಶ್ರೀರಾಮುಲು ಸಂಧಾನಕ್ಕೆ ಹೋಗಿ ವಿಫಲನಾಗಿ ವಾಪಾಸಾದ. ಅಶೋಕ್ ಕೂಡಾ ಹೋಗಿ ವಾಪಾಸಾಗಿ ಕೈಚೆಲ್ಲಿದರು. ಆ ಸಂದರ್ಭದಲ್ಲಿ ಕಾಡಿ ಬೇಡಿದರೂ ಅತೃಪ್ತರು ತಮ್ಮ ಬೇಡಿಕೆಗಳೇನೆಂಬುದನ್ನು ಬಾಯ್ಬಿಟ್ಟು ಹೇಳಿರಲಿಲ್ಲ. ನಂತರ ಎಂಟ್ರಿ ಕೊಟ್ಟವನು ರೆಡ್ಡಿ. ಪಕ್ಕಾ ಸಂಧಾನಕಾರನಂತೆ ತೆರಳಿದ ಆತ 'ನಾಯಕತ್ವ ಬದಲಾವಣೆಯೊಂದೇ ಅತೃಪ್ತರ ಬೇಡಿಕೆ' ಅಂತ ಬಿಂಬಿಸಿದ. ವಾಸ್ತವವೆಂದರೆ ಇದು ಜನಾರ್ದನ ರೆಡ್ಡಿಯ ಅಸಲೀ ಬೇಡಿಕೆ!

ಇವತ್ತಿನ ಪರಿಸ್ಥಿತಿಯಲ್ಲಿ ರೆಡ್ಡಿಯ ಉದ್ಯಮ, ದಂಧೆಗಳ ದೃಷ್ಟಿಯಿಂದ ನೋಡಿದರೆ ಯಡ್ಡಿಯೊಂದಿಗಿನ ಗೆಳೆತನ, ವೈರತ್ವದಿಂದ ರೆಡ್ಡಿಗೇನೂ ಲಾಭ-ನಷ್ಟದ ಲೆಕ್ಕಾಚಾರ ಇದ್ದಂತಿಲ್ಲ. ಆದರೆ ಕೇಂದ್ರ ಕಾಂಗ್ರೆಸ್ ಅನ್ನು ಎದುರು ಹಾಕಿಕೊಂಡು ಸಂಭಾಳಿಸಲಾಗುವುದಿಲ್ಲವೆಂಬ ಸತ್ಯ ಆತನಿಗೆ ಗೊತ್ತಾಗಿದೆ. ಆದ್ದರಿಂದಲೇ ಸುಪಾರಿ ಪಡೆದು ನಾಟಕವಾಡುತ್ತಿದ್ದಾನೆ ಎಂಬ ವಿಚಾರ ಬಿಜೆಪಿ ಪಾಳೆಯದಲ್ಲೇ ಹರಿದಾಡುತ್ತಿರುವುದು ಸತ್ಯ. ●

ಯಾದಗಿರಿಯ ನೀಲಕಂಠರಾಯನ ಗಡ್ಡಿ 60 ವರ್ಷಗಳ ಸ್ವಾತಂತ್ರ್ಯದ ನಂತರವೂ ನಡುಗಡ್ಡೆಯೇ!!




ಪಾತ್ರೆ ಹಿಡಿದು ರೇಷನ್ ತರಲು ಈಜುತ್ತಿರುವ ಗಡ್ಡಿಯ ಜನ

ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಇಲ್ಲಿ ತನ್ನ ಮಂತ್ರಿ ಮಂಡಲದ ಸಭೆ ನಡೆಸುವ ಮೂಲಕ ಅಭಿವೃದ್ಧಿ ಪಡಿಸುತ್ತೇನೆ ಎಂಬ ಭ್ರಮೆ ಹುಟ್ಟುಹಾಕಿ ಕೋಟ್ಯಂತರ ರೂಪಾಯಿಗಳನ್ನು ಈ ಭಾಗದ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ್ದಾಗಿ ಹೇಳಿ ಹೋಗಿದ್ದಾರೆ. ಆದರೆ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ (ನಗರದಿಂದ ಕೇವಲ 40 ಕಿ.ಮೀ. ದೂರದಲ್ಲಿರುವ) ನೀಲಕಂಠರಾಯನ ಗಡ್ಡಿ ಎಂಬ ನಡುಗಡ್ಡೆಯನ್ನು ನೋಡಿದರೆ ಎಂಥವರ ಎದೆಯೂ ನಡುಗಿ ಹೋಗುತ್ತದೆ. ಸುತ್ತಮುತ್ತ ಎತ್ತ ನೋಡಿದರೂ ನೀರಿನಿಂದ ಆವೃತವಾದ, ಅಲ್ಲಿಗೆ ಹೋಗಲು ಯಾವುದೇ ನಾಗರಿಕ ಸೌಲಭ್ಯಗಳಿಲ್ಲದ, ಸರಕಾರಗಳಿಂದ ಏನೊಂದೂ ಅನುಕೂಲ ಪಡೆಯದ ಗ್ರಾಮವೊಂದು ಈಗಲೂ ಇದೆ ಎಂದರೆ ಯಾರಾದರೂ ನಂಬಲು ಸಾಧ್ಯವೆ?

ಆದರೆ ವಾಸ್ತವ ನಮ್ಮೆಲ್ಲರ ನಂಬಿಕೆಗಳನ್ನು ಮೀರಿ ಮುಖಕ್ಕೆ ರಾಚುತ್ತದೆ. ಸುರಪುರದ ಕಕ್ಕೇರಿ, ಹೈದೊಡ್ಡಿ ಎಂಬ ಕುಗ್ರಾಮವನ್ನು ದಾಟಿ ಮುಂದೆ ಹೋದರೆ ದೂರದಲ್ಲಿ ಗುಡ್ಡಗಳ ಮಧ್ಯೆ ಕಾಣಿಸುವುದೇ ನೀಲಕಂಠರಾಯನಗಡ್ಡಿ. ಈ ನಡುಗಡ್ಡೆಯಲ್ಲಿ ಸರಿಸುಮಾರು 200 ರಿಂದ 300 ಜನ ಇಂದಿಗೂ ವಾಸ ಮಾಡುತ್ತಾರೆ. ಅವರ ಅಡುಗೆಗೆ ಬೇಕಾಗುವ ನಿತ್ಯ ಬಳಕೆಯ ಉಪ್ಪು, ಕಾರ, ಕಿರಾಣಿ, ಹಿಟ್ಟು ಮುಂತಾದವು ಆ ಊರಲ್ಲಿ ಎಲ್ಲಿಯೂ ಸಿಗುವುದಿಲ್ಲ. ಇಲ್ಲಿರುವ ಯಾರಿಗೇ ಆದರೂ ಅಚಾನಕ್ ಆಗಿ ಜ್ವರ ಬಂದರೆ, ವಾಂತಿ ಹೆಚ್ಚಾದರೆ ಅಥವಾ ಆರೋಗ್ಯದಲ್ಲಿ ಏರುಪೇರಾದರೆ ಶಿವನೇ ಗತಿ!

ಜ್ವರ ಬಂದು ಬಳಲುತ್ತಿರಲಿ, ಬಾಣಂತಿತನವನ್ನು ಅನುಭವಿಸುತ್ತ ನರಳುತ್ತಿರಲಿ ಅವರೆಲ್ಲ ತಮ್ಮ ಗಡ್ಡಿಯಿಂದ ಹೊರಗಡೆ ಹೋಗಬೇಕೆಂದರೆ ಅನಿವಾರ್ಯವಾಗಿ ನೀರನ್ನು ದಾಟಲೇಬೇಕು. ಈ ನೀರಾದರೂ ಸದಾ ತುಂಬಿ ಹರಿಯುತ್ತಿರುವ ಹೊಳೆ. ಈ ಹೊಳೆ ಖಾಲಿಯಾಗಿ, ಕಾಲ್ನಡಿಗೆಯಲ್ಲಿ ನಡೆದುಹೋಗಬಹುದು ಎಂಬ ಪರಿಸ್ಥಿತಿ ಇಂದಿಗೂ ಬಂದಿಲ್ಲ. ಬಸವ ಜಲಾಶಯ (ನಾರಾಯಣಪುರ ಅಣೆಕಟ್ಟು) ಕಟ್ಟಿದ ಲಾಗಾಯ್ತಿನಿಂದಲಂತೂ ನೀರಿನ ಹರವು ಇನ್ನೂ ಹೆಚ್ಚಾಗಿ ಹೋಗಿದೆ.



ಕೆಲವು ವರ್ಷಗಳ ಹಿಂದೆ ಈ ನೀರನ್ನು ದಾಟಲು ಗುಂಡಗಿನ ಬುಟ್ಟಿ ಆಕಾರದ ತೆಪ್ಪವೊಂದು ಇತ್ತಂತೆ. ಅದು ನೀರಿನ ಹರವಿಗೆ ಸಿಕ್ಕು ನಾಲ್ಕು ಜನರ ಪ್ರಾಣವನ್ನು ತನ್ನ ಒಡಲೊಳಗಿಟ್ಟುಕೊಂಡು ದಾಟಿ ಹೋಯ್ತಂತೆ! ಅಂದಿನಿಂದ ಇಂದಿನವರೆಗೂ ಜನ ನಂಬಿರುವುದು ದೊಡ್ಡ ಸೋರೆಕಾಯಿಯ ಬುರುಡೆಗಳನ್ನು. ಮೂರು ಸೋರೆಕಾಯಿ (ಒಣಗಿದ-ರಂಧ್ರಗಳಿಲ್ಲದ) ಬುರುಡೆಯನ್ನು ತೆಗೆದುಕೊಂಡು, ಹಗ್ಗದಿಂದ ಮೂರನ್ನು ಒಂದು ಕಡೆ ಜಾಳುಜಾಳಾಗಿ ಪೋಣಿಸಿಕೊಳ್ಳಬೇಕು. ಹೀಗೆ ಕೃತಕವಾಗಿ ತಯಾರಿಸಿದ ಸೋರೆಕಾಯಿ ಬುರುಡೆಯೇ ಇಲ್ಲಿನ ಜನರಿಗೆ ವಾಹನ!

ಈ ಸೋರೆಕಾಯಿಯ ಜಾಳಿಗೆಯ ನಡುವೆ ಎರಡು ಕಾಲುಗಳನ್ನು ಇಳಿ ಬಿಟ್ಟು ಅಂತರಪಿಶಾಚಿಯಂತೆ ಯಾವೊಂದೂ ಆಸರೆ ಇಲ್ಲದೆ ನೀಲಕಂಠರಾಯನಗಡ್ಡಿಯನ್ನು ಸೇರಬೇಕು. ಹೀಗೆ ಹೋಗುವಾಗ ಎಷ್ಟೋ ಜನ ನೀರುಪಾಲಾಗಿ ಹೋಗಿದ್ದಾರೆ. ಕೆಲವೊಬ್ಬರು ದಾರಿಯಲ್ಲಿ ಎದುರಾಗುವ ಕಲ್ಲು ಬಂಡೆಗಳಿಗೆ ತಾಗಿ ಸೋರೆಕಾಯಿಗೆ ತೂತು ಬಿದ್ದು ನೀರು ತುಂಬಿಕೊಂಡು ನೀರಲ್ಲಿ ಮುಳುಗಿಹೋಗಿದ್ದಾರೆ. ಒಂದು ಕೈಯ್ಯಲ್ಲಿ ದೊಡ್ಡ ತಪೆಲಿಯಲ್ಲಿ ಹಿಟ್ಟು, ಕಿರಾಣಿ ಇಟ್ಟುಕೊಂಡು ಸೋರೆಕಾಯಿಯ ಮೇಲೆ ಕುಳಿತು ನೀರಿನಲ್ಲಿ ನಾಟ್ಯ ಮಾಡುತ್ತ ಹೋಗುತ್ತಿರುವುದು ನೋಡುತ್ತಿದ್ದರೆ ಎಂಥವರ ಎದೆಯಲ್ಲೂ ನಡುಕ ಹುಟ್ಟುತ್ತದೆ. ದಿನನಿತ್ಯವೂ ಇಂಥ ಅವಘಡಗಳನ್ನು ಎದುರಿಸಿ ನೀಲಕಂಠರಾಯನಗಡ್ಡಿಯಲ್ಲಿಯೇ ಈ ಜನ ಏಕೆ ಇರಬೇಕು?

ಎಂದು ನೀವೆಲ್ಲ ಪ್ರಶ್ನಿಸಬಹುದು. ಆದರೆ ಇಲ್ಲಿನ ಜನಾಂಗಕ್ಕೆ ಇಲ್ಲಿ ಅವರ ತಾತ ಮುತ್ತಾತರಿಂದ ಬಳುವಳಿಯಾಗಿ ಬಂದಿರುವ ಹೊಲಗಳಿವೆ. ಆ ಹೊಲಗಳೆಲ್ಲ ಉತ್ತು ಬಿತ್ತು ಚೆನ್ನಾಗಿವೆ. ಒಂದೊಂದು ಕುಟುಂಬಕ್ಕೆ ಸರಾಸರಿ ನಾಲ್ಕೆಂಟು ಎಕರೆ ಜಮೀನು ಇದೆ. ಈ ಜಮೀನಾದರೂ ಅತ್ಯಂತ ಫಲವತ್ತಾದ ಜಮೀನೇ ಆಗಿದೆ. ಜಮೀನು ಇಲ್ಲದ ಜನ ಅಲ್ಲಿಯ ಜಮೀನಿನಲ್ಲೆ ಕೂಲಿಗೆ ಹೋಗುತ್ತಾರೆ.

ನೀಲಕಂಠರಾಯನಗಡ್ಡಿ ಜನಗಳ ದಿನನಿತ್ಯದ ಈ ಗೋಳನ್ನು ಸರಕಾರ ಕಿವಿಯ ಮೇಲೆ ಹಾಕಿಕೊಳ್ಳುವುದಿರಲಿ, ಕುಂಡಿಯಿಂದಲೂ ಕೂಡ ಕೇಳಿಸಿಕೊಂಡಿಲ್ಲ. ಬೇಸಿಗೆಯ ದಿನಗಳಲ್ಲಿ (ಕೇವಲ ಮೂರು ತಿಂಗಳು) ಮಾತ್ರ ಇಲ್ಲಿಯ ಜನಗಳು ತಾವು ಬೆಳೆದ ಮಾಲನ್ನು ಸುರಪುರದ ಮಾರ್ಕೆಟಿಗೆ ತರುತ್ತಾರೆ. ನೀಲಕಂಠರಾಯನ ಗಡ್ಡಿಯಿಂದ ಹೈದೊಡ್ಡಿಗೆ ಬರಬೇಕಾದರೆ ಅದೊಂದು ರೀತಿಯ ಸರ್ಕಸ್! ಸಹಜವಾಗಿ ಬರಬೇಕೆಂದರೆ ಅದೇನು ರಾಜಮಾರ್ಗವೆ? ಸದಾ ನೀರು ಹರಿಯುವ, ಕೊರಕುಳಿ ಬಿದ್ದಿರುವ, ಕಲ್ಲುಗಳಿಂದ ಆವೃತವಾದ ದಾರಿಯಾಗಿದ್ದರಿಂದ ಬಹು ಕಷ್ಟದಿಂದ ಇದನ್ನು ದಾಟಿ ಬರುತ್ತಾರೆ. ಅನೇಕ ವೇಳೆ ವರ್ಷಾನುಗಟ್ಟಲೆ ಬೆಳೆದದ್ದು ಎತ್ತಿನ ಬಂಡಿ ವಗ್ಗಾಲೆಯಾಗಿ ನಡು ನೀರಿನಲ್ಲಿಯೇ ಹರಿದು ನೀರಿನ ಒಡಲು ಸೇರಿದ ಘಟನೆಗಳೂ ಜರುಗಿ ಹೋಗಿವೆಯಂತೆ!

ಸರಕಾರದ ಸೌಲಭ್ಯಗಳು ಕಾಣದ, ಬೆಳಕಿ(ವಿದ್ಯುತ್)ನ ಮುಖವನ್ನೂ ನೋಡದ ಇಲ್ಲಿಯ ಜನಗಳ ಗೋಳು ಕೇಳುತ್ತಿದ್ದರೆ ಎಂಥವರ ಮನಸ್ಸು ಕ್ಷಣ ಹೊಯ್ದಾಡುತ್ತದೆ. ಆದರೆ ಈ ಕ್ಷೇತ್ರವನ್ನು ಅರವತ್ತು ವರ್ಷಗಳಿಂದ ಪ್ರತಿನಿಧಿಸುತ್ತ ಬಂದ ಜನಪ್ರತಿನಿಧಿಗಳಿಗೆ ಮಾತ್ರ ಇದೆಲ್ಲ ಕಾಣದೇ ಹೋಗಿರುವುದು ದುರಂತವೇ ಸರಿ. ರಾಜುಗೌಡ ಶಾಸಕನಾಗಿ ಆಯ್ಕೆಯಾಗಿ ಬಂದಾಗ ಮಾತ್ರ ಈ ಊರಿನ ಜನಗಳ ಮುಖವನ್ನು ನೋಡಿದ್ದಾನಂತೆ. ಕಳೆದ ವರ್ಷ ಅತಿವೃಷ್ಟಿಯಿಂದ ಇಲ್ಲಿನ ಜನ ತತ್ತರಿಸತೊಡಗಿದ್ದಾಗ ಮುದ್ದಾಂ ರಾಜುಗೌಡನೇ ಅವರಿಗಾಗಿ ಸಾಕಷ್ಟು ಆಹಾರ ಧಾನ್ಯಗಳನ್ನು ತೆಗೆದುಕೊಂಡು ನೀರಿಗೆ ಇಳಿಯುತ್ತಿರುವಂತೆ ಒತ್ತರಿಸಿ ಬಂದ ಹೊಳೆಯಿಂದ ಹೌಹಾರಿ ಬಂದು ದಡಸೇರಿದ್ದಾಗಿ ತಿಳಿದುಬರುತ್ತದೆ.





ಜಿಲ್ಲಾಧಿಕಾರಿ ಕೆ.ಜಗದೀಶ ಗಮನ


ಯಾದಗಿರಿ ಹೊಸ ಜಿಲ್ಲೆಗೆ ಜಿಲ್ಲಾಧಿಕಾರಿ
ರುವ ಕೆ. ಜಗದೀಶ ಒಬ್ಬ ಉತ್ತಮ ಆಡಳಿ
ಎಂದು ಈಗಾಗಲೇ ಜಿಲ್ಲೆಯಾದ್ಯಂತ ಹೆಸರು ಪ
ಕೊಂಡಿದ್ದಾರೆ. ರಾಜಕಾರಣಿಗಳನ್ನು ಮಾರು
ನಿಲ್ಲಿಸಿಯೇ ಮಾತಾಡುವ ಜಗದೀಶ ಜನಪರ
ಆಡಳಿತವನ್ನು ನಡೆಸಿದ್ದಾರೆ. ಸರಕಾರಿ ಜಾಗಗಳನ್ನು
ನೊಣೆಯುತ್ತಿದ್ದ ಖೂಳರನ್ನು ಕಾನೂನಿನ ಮೂಲಕ
ಬಡಿದಿದ್ದಾರೆ. ಹೊಸ ಜಿಲ್ಲೆಯಾದ ಯಾದಗಿರಿ
ಎಲ್ಲ ರೀತಿಯಿಂದ ಸಮರ್ಥವಾಗಿ ಕಾರ್ಯನಿರ್ವ
ವಂತೆ ಅಣಿಗೊಳಿಸುತ್ತಿದ್ದಾರೆ.

ರಾಜ್ಯದ ಐ.ಎ.ಎಸ್. ಅಧಿಕಾರಿಗಳಲ್ಲಿ ಪ್ರಮುಖ
ಕಂಡುಬರುವ ಹಾಗೂ ಜನಪರ ಕಾಳಜಿಯುಳ್ಳ
ಮದನಗೋಪಾಲ ಹಾಗೂ ಮೈಸೂರು ಜಿಲ್ಲಾಧಿ
ಯಾಗಿರುವ ಹರ್ಷಗುಪ್ತ ತನಗೆ ರೋಲ್ ಮಾ
ಎಂದು ಹೇಳಿರುವ ಜಗದೀಶ ಅವರು ಇನ್ನೂ ಮ
ಯಬೇಕಿದೆ. ಆದ್ದರಿಂದ ಜನಪರ ಕಾಳಜಿಯುಳ್ಳ ಜಗದ
ದೃಷ್ಟಿ ಸುರಪುರ ತಾಲೂಕಿನ ನೀಲಕಂಠರಾಯನ ಗ
ಜನಗಳತ್ತ ಹೋಗಬೇಕು. ಅಲ್ಲಿಯ ಜನಗಳಿಗೆ ಸಂ
ಕಲ್ಪಿಸುವ ವ್ಯವಸ್ಥೆ ಮಾಡಿಕೊಡಬೇಕು. ಇಲ್ಲವೇ
ಜನಗಳನ್ನು ಬೇರೆ ಕಡೆ ಸ್ಥಳಾಂತರ ಮಾಡಿ, ಅ
ಅಲ್ಲಿರುವಷ್ಟೇ ಭೂಮಿ, ಮನೆಗಳನ್ನು ಒದಗಿಸಿಕೊಡ
ಜೊತೆಗೆ ಪ್ರಕೃತಿ ಶ್ರೀಮಂತಿಕೆಯಿಂದ ಬೀಗುತ್ತಿ
ಈ ನಡುಗಡ್ಡೆ ಯನ್ನು ಸರಕಾರವೇ ತನ್ನ
ತೆಗೆದುಕೊಂಡು ಉತ್ತಮ ವಾದ ಸೌಲಭ್ಯಗಳನ್ನು
ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕು. ಇದೆಲ್ಲ
ಜಗದೀಶ ಅವರಿಂದ ಮಾತ್ರ ಸಾಧ್ಯವಾಗುವ ಮಾ

ಜನಸಂಪರ್ಕಕ್ಕೆ ಸಾಧ್ಯವಾಗದೇ ನಡುಗಡ್ಡೆಯ ಮ
ಬದುಕಿರುವ ಜನಗಳ ಗೋಳನ್ನು ಕಣ್ಣಾರೆ ಕಂಡ ರಾಜ
ಮಾತ್ರ ಅವರಿಗಾಗಿ ಬೇರೆ ಕಡೆ ಪುನರ್‌ವಸತಿ ಕ
ಇರಾದೆ ಹೊಂದಿದ್ದಾನೆ. ಶ್ರೀಮತಿ ಕವಿತಾ ಮ
ಎಂಬ ಅಸಿಸ್ಟೆಂಟ್ ಕಮೀಷನರ್ ಕೂಡ ಈ ಬಗ್ಗೆ
ವಹಿಸಿದ್ದರು. ಆದರೆ ಅದೇನು ಕಾರಣವೋ
ಇವತ್ತಿಗೂ ಜಾರಿಗೆ ಬಂದಿಲ್ಲ! ಅವ್ಯಾವೂ
ಲಕ್ಷಣಗಳೂ ಕಾಣುತ್ತಿಲ್ಲ. ದೇಶಕ್ಕೆ ಸ್ವಾತಂತ್ರ್ಯ ದೊರಕಿ
ವರ್ಷಗಳು ಗತಿಸಿಹೋದರೂ ಹಳ್ಳಿಯಿಂದ ಹಳ್ಳಿಗೆ ಸ
ಕಲ್ಪಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿಲ್ಲ ಎಂ
ನಮ್ಮ ಸರಕಾರಗಳ ಕಾರ್ಯವೈಖರಿಗೊಂದು ಸಾಕ್ಷಿಯ

• ವಿಶ್ವಾರಾಧ್ಯ ಸತ್ಯಂಪ
satyampet1969@rediffmail

ಅಯೋಗ್ಯ ಕಾಗೇರಿಯಿಂದ ಎಕ್ಕುಟ್ಟಿಹೋಗುತ್ತಿರುವ ಶಿಕ್ಷಣ



ತಾನು ಸಚಿವನಾಗಲು ನಾಲಾಯಕ್ ಎಂದು ದಿನೇದಿನೇ ಸಾಬೀತು ಮಾಡುತ್ತಲೇ ಬಂದಿರುವ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯ ವಿರುದ್ಧ ಶಿಕ್ಷಕರೇ ತಿರುಗಿಬಿದ್ದಿದ್ದಾರೆ. ನವೆಂಬರ್ 3ರಿಂದ ಮೂರು ಹಂತದ ಪ್ರತಿಭಟನೆಗಳನ್ನು ಹಮ್ಮಿಕೊಂಡಿರುವ ಶಿಕ್ಷಕರು ತಮ್ಮ ಬೇಡಿಕೆಗಳು ಈಡೇರದಿದ್ದರೆ ಬೀದಿಗಿಳಿದು ಹೋರಾಡಲು ನಿರ್ಧರಿಸಿದ್ದಾರೆ.

ಆರೆಸ್ಸೆಸ್‌ನ ಶಿಸ್ತಿನ ಸಿಪಾಯಿ ಎಂಬ ಸ್ವಘೋಷಿತ ಸಚಿವ ಕಾಗೇರಿಯ ಶಿಕ್ಷಣ ದರ್ಬಾರಿನಲ್ಲಿ ರಾಜ್ಯದ ಮಕ್ಕಳು ಮತ್ತು ಶಿಕ್ಷಕರು ಅನುಭವಿಸುತ್ತಿರುವ ಹಿಂಸೆ ಮಿತಿಮೀರುತ್ತಿದೆ. ಅರ್ಧವರ್ಷ ಮುಗಿದು ದಸರಾ ರಜಾ ಬಂದರೂ ಬಹುತೇಕ ಶಾಲೆಗಳಿಗೆ ಸಮರ್ಪಕವಾಗಿ ಪಠ್ಯಪುಸ್ತಕಗಳೇ ತಲುಪಿಲ್ಲ. ಕಳೆದ ಅಕಾಡೆಮಿಕ್ ವರ್ಷ ಮುಗಿಯುವ ಮೊದಲೇ ಪಠ್ಯಪುಸ್ತಕ ಪೂರೈಕೆಯ ಬಗ್ಗೆ ಮಾತಾಡತೊಡಗಿದ್ದ ಕಾಗೇರಿ ಅರ್ಧವರ್ಷ ಮುಗಿದರೂ ಅದೇ ಮಾತುಗಳನ್ನಾಡುತ್ತಿದ್ದಾನೆ.

ಖಾಸಗಿ ಶಾಲೆಗಳವರು ಪಠ್ಯಪುಸ್ತಕಗಳಿಗಾಗಿ ಮಾರ್ಚ್ 31ರ ಮೊದಲೇ ಡಿಡಿ ಸಂದಾಯ ಮಾಡಬೇಕೆಂದು ಫರ್ಮಾನು ಹೊರಡಿಸಿದ ಕಾಗೇರಿ ಡಿಡಿ ಕಳಿಸಿದ ಖಾಸಗಿ ಶಾಲೆಗಳವರಿಗೆ ಇಂದಿಗೂ ಪಠ್ಯಪುಸ್ತಕಗಳನ್ನು ತಲುಪಿಸಿಲ್ಲ, ಆ ಕುರಿತು ಆತ ತಲೆಯನ್ನೇ ಕೆಡಿಸಿಕೊಂಡಿಲ್ಲ, ಇನ್ನು ಸರ್ಕಾರಿ ಶಾಲೆಗಳ ಮಕ್ಕಳನ್ನು ಕೇಳುವವರಾರು?

ಒಂದು ಕಡೆ ಮಕ್ಕಳನ್ನು ಗೋಳು ಹೊಯ್ದುಕೊಳ್ಳುವ ಕಾಗೇರಿ ಇನ್ನೊಂದು ಕಡೆ ಶಿಕ್ಷಕರಿಗೂ ಕಂಟಕನಾಗಿ ಪರಿಣಮಿಸಿದ್ದಾನೆ. ಒಂದನೇ ತಾರೀಕಿಗೆ ಸಂಬಳ ಸಿಗುವುದಿಲ್ಲ, ಕೆಲವು ಜಿಲ್ಲೆಗಳಲ್ಲಿ ಶಿಕ್ಷಕರಿಗೆ ಮೂರ್‍ನಾಲ್ಕು ತಿಂಗಳ ಸಂಬಳ ನೀಡುವುದು ಬಾಕಿ ಇದೆ. ಇದರ ಜೊತೆಗೆ, ಜಿಲ್ಲೆಯಿಂದ ಜಿಲ್ಲೆಗೆ, ಸಂಸ್ಥೆಯಿಂದ ಸಂಸ್ಥೆಗೆ ವರ್ಗಾವಣೆಗೊಂಡಿರುವ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣದ ಸಹಶಿಕ್ಷಕರುಗಳಿಗೆ 10, 15, 20 ವರ್ಷದ ಕಾಲಮಿತಿ ಬಡ್ತಿಯನ್ನು ತಡೆಹಿಡಿಯುವ ಮೂಲಕವೂ ಶಿಕ್ಷಕರನ್ನು ಕಾಗೇರಿ ಶೋಷಿಸುತ್ತಿದ್ದಾನೆ. ಈ ಬಗ್ಗೆ ಪರಿಹಾರ ಸೂಚಿಸಲು ಸರ್ಕಾರ ತಾತ್ವಿಕವಾಗಿ ಎರಡು ವರ್ಷಗಳ ಹಿಂದೆ ಒಪ್ಪಿದ್ದರೂ ಕಾಗೇರಿ ಆದೇಶ ನೀಡಲು ರೆಡಿ ಇಲ್ಲ. ಇದು ಆತನ ವಿಕೃತ ಬುದ್ಧಿ ಅಷ್ಟೇ.

1986-87ರಿಂದ 1994-95ರ ಅವಧಿಯಲ್ಲಿ ಪ್ರಾರಂಭವಾಗಿ ಈಗಲೂ ನಡೆದುಕೊಂಡು ಬರುತ್ತಿರುವ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಾಲಾ ಕಾಲೇಜುಗಳಿಗೆ ನೀಡುತ್ತಿದ್ದ ಅನುದಾನವನ್ನು ಕಾಗೇರಿ ಏಕಾ
ಸ್ಥಗಿತಗೊಳಿಸಿದ್ದಾನೆ. ಈ ಪ್ರಕರಣದಲ್ಲಿ ಈತ ಒಂದಿಷ್ಟು 'Some'ಪಾ
ಮಾಡುವ ಗುರಿ ಹೊಂದಿದ್ದಾನಂತೆ.

ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಆಶಾಕಿರಣ ಎನಿಸಿರುವ JO
ಕೋರ್ಸ್‌ಗಳನ್ನೇ ರದ್ದು ಮಾಡುವ ಧಾರ್ಷ್ಟ್ಯತನಕ್ಕೆ ಕೈ ಹಾಕಿದ ಕಾಗೇ
ಅವುಗಳ ಬದಲು ಸಾವಿರಾರು ಖಾಸಗಿ ಐಟಿಐಗಳಿಗೆ ಅನುಮತಿ ನ
ದುಡ್ಡು ಪೀಕುವ ಯೋಜನೆಯಲ್ಲೂ ಮುಳುಗಿದ್ದಾನೆ.

ಹಾಗೆಯೇ ಈ ಅಕಾಡೆಮಿಕ್ ವರ್ಷದಿಂದ 'ಮಾಹಿತಿಸಿ
ಶಿಕ್ಷಕರನ್ನು ಮರುನೇಮಕ ಮಾಡಿಲ್ಲ. ಮೊದಲಿನಿಂದಲೂ ಇವ
ಸಂಬಳದ ವಿಷಯದಲ್ಲೂ ಅನ್ಯಾಯ ಮಾಡುತ್ತಾ ಬರಲಾಗಿದ್ದು,
ಏಕಾಏಕಿ ನಡುನೀರಿನಲ್ಲಿ ಬಿಟ್ಟಿದ್ದಾನೆ ಕಾಗೇರಿ. ಶಾಲೆಗಳಲ್ಲಿ ಕಂಪ್ಯೂ
ಗಳೀಗ ಧೂಳು ತಿನ್ನುತ್ತಾ ಬಿದ್ದಿವೆ...

ಶಿಕ್ಷಣ ಇಲಾಖೆಯ ಮೇಲೆ ಹಿಡಿತವಿಲ್ಲದ ಕಾಗೇರಿ ದೈಹಿಕ ಪಠ
ಯೋಗಾಭ್ಯಾಸ ಸೇರಿಸಿದ. ಆದರೆ ಬಹುತೇಕ ಕಡೆ ಯೋಗ ಕಲಿಸುವ
ಇಲ್ಲ. ಕನ್ನಡ ಮಾಧ್ಯಮದ ಶಾಲೆಗಳನ್ನು ಅಭಿವೃದ್ಧಿಪಡಿಸುವುದನ್ನು ಬ
ಸಂಸ್ಕೃತ ವಿವಿಯ ಬಗ್ಗೆ ತಲೆಕೆಡಿಸಿಕೊಂಡು ತನ್ನ ಚಿಡ್ಡಿ ಬುದ್ಧಿಯ ಪ್ರದ
ಮಾಡಿದ. ಮಕ್ಕಳಿಗೆ ನೀಡುವ ಸೈಕಲ್‌ಗಳ ಖರೀದಿಯ ಗೋಲ್‌ಮಾಲ್
ಅದೆಷ್ಟು ಪಾಲು ಸಿಕ್ಕಿತೋ ಗೊತ್ತಿಲ್ಲ, ಕಾಗೇರಿಯಂತೂ ಈ ವಿವಾ
ಕುರಿತು ತುಟಿ ಬಿಚ್ಚಲೇ ಇಲ್ಲ.

ಹೀಗೆ ಶಿಕ್ಷಣ ಕ್ಷೇತ್ರಕ್ಕೆ ಕಂಟಕವಾಗಿರುವ ಪುರೋಹಿತಶಾಹಿ ಬು
ಕಾಗೇರಿ ತಾನು ಸಚಿವನಾಗಲೇ ನಾಲಾಯಕ್ಕು ಎಂಬುದನ್ನು ಸಾಕ್ಷಿ ಸಹ
ಸಾಬೀತುಪಡಿಸಿದ್ದಾನೆ.

• ಮಲ್ಲನಗೌಡ

...ರವಾಡ ವಿವಿ

...ಾ. ಸೈದಾಪುರ-ಡಾ. ಹಿಂಚಿಗೇರಿ ...ೂಮಿ ನುಂಗಾಕೊಂಟಾರ್ರಿ!

...ರವಾಡದ ಕರ್ನಾಟಕ ...ವಿದ್ಯಾಲಯವೀಗ ...ವರ ದಗಲ್ಬಾಜಿಗಳ ...ವಾಗಿದೆ. ಹಿಂದಿದ್ದ ಒಳ್ಳೆ ...ಉದ್ದೇಶಗಳ ಕುರುಹು ...ಡಿದರೂ ಸಿಗಲಾರದಂತೆ ...ಾಗಿಬಿಟ್ಟದೆ. ಇಂಥಾ ... ನಡುವೆ ಶಿಕ್ಷಣದ ...ತ್ವ, ಮಹತ್ವಗಳ ಬಗ್ಗೆ ...ುವುದು ...ತನವಾದೀತು. ಇಷ್ಟೆಲ್ಲ ...ಗೆ ಕುಲಪತಿ ಡಾ. ... ಹಾಗೂ ಕುಲ ಸಚಿವ ...ಚಿಗೇರಿಗಳೇ ...ರಾಗಿರುವುದು ದುರಂತ ಸತ್ಯ.



ಸೈದಾಪುರ

...ಬ್ಬರ ಅಂದಾದುಂದಿಗಳ ಸಾಲಿಗೆ ವಿವಿಯ ...ಾಟದ ಹುನ್ನಾರ ಹೊಸದಾಗಿ ...ಿದೆ. ಇದೂ ಕೂಡಾ ಸೈದಾಪುರ ಹಾಗೂ ...ಗಳ ಹಿಕಮತ್ತೆಂಬುದು ಸ್ಪಷ್ಟವಾದರೂ ಇದ್ದೇ ... ಇವರಿಬ್ಬರ ಕಚ್ಚಾಟ ಆರಂಭವಾಗಿರುವುದು ...ವಿಚಾರ. ಕುಲಪತಿ ಸೈದಾಪುರ ಕೆಲ ...ಗಳಲ್ಲೇ ನಿವೃತ್ತಿ ಹೊಂದಲಿದ್ದಾನಾದ್ದರಿಂದ ...ಗಾಗಿ ವಿವಿಯ ಜಮೀನು ಮಾರಿ ನುಂಗುವ ತರಾತುರಿಯಲ್ಲಿದ್ದರೆ, ಕುಲಸಚಿವ ಹಿಂಚಿಗೇರಿ ಅದಕ್ಕೆ ತಡೆ ಹಾಕುವ ಕೆಲಸದಲ್ಲಿ ಬ್ಯುಸಿಯಾಗಿದ್ದಾನೆ. ಆದರೆ ಇದರ ಹಿಂದೆ ವಿವಿಯ ಭೂಮಿ ಉಳಿಸುವ ದೊಡ್ಡತನ ಹಿಂಚಿಗೇರಿಗಿದೆ ಅಂದುಕೊಂಡರದು ಮೂರ್ಖತನ. ಯಾಕೆಂದರೆ ಸೈದಾಪುರ ಮನೆಗೆ ಹೋಗುತ್ತಲೇ ಆ ಸ್ಥಾನಕ್ಕೇರಿ ಆನಂತರ ಭೂಮಿ ಮಾರುವುದು, ತಾನೊಬ್ಬನೇ ಲಾಭ ಪಡೆದುಕೊಳ್ಳುವುದು ಆತನ ದುಷ್ಟ ಹುನ್ನಾರ!

ಇನ್ನು ಈ ದುಷ್ಟದ್ವಯರ ಕಾಕದೃಷ್ಟಿಗೆ ಬಿದ್ದಿರುವ ಭೂಮಿಯ ವಿಚಾರಕ್ಕೆ ಬಂದರೆ, ಅದು ಎರಡು ಎಕರೆಯಷ್ಟಿದೆ. ಸೈದಾಪುರ ಕುಲಪತಿಯಾಗಿ ಬಂದ ಒಂದು ವರ್ಷದ ಬಳಿಕ ಅಂದರೆ, ಈಗ್ಗೆ ಎರಡು ವರ್ಷದ ಹಿಂದೆಯೇ ಕುಲಸಚಿವ ಹಿಂಚಿಗೇರಿಯೊಂದಿಗೆ ಸೇರಿ ಈ ಭೂಮಿ ಮಾರಾಟ ಮಾಡಲು ಸ್ಕೆಚ್ಚು ಹಾಕಿದ್ದ. ಮಹಾನ್ ಜಾತಿವಾದಿಯಾದ ಲಿಂಗವಂತ ಹಿಂಚಿಗೇರಿ ತನ್ನ ಕುಲಬಾಂಧವನಿಗೇ ಅದು ಸಿಗುವಂತೆ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದ. ಈ ಸಂಬಂಧ ಇಬ್ಬರೂ ಸೇರಿ ಧಾರವಾಡ ತಹಶೀಲ್ದಾರರಿಗೆ ಒಪ್ಪಿಗೆ ಕೋರಿ ಪತ್ರ ಬರೆದಿದ್ದರು. ಅದೃಷ್ಟವೆಂಬಂತೆ ತಹಶೀಲ್ದಾರ್ ಯಾವ ಕಾರಣಕ್ಕೂ ವಿವಿಯ ಜಾಗವನ್ನು ಮಾರಾಟ ಮಾಡಬಾರದೆಂದು ಆದೇಶಿಸಿದ್ದರು.



ಆದರೆ ನಾಚಿಕೆಗೆಟ್ಟ ಸೈದಾಪುರ ಹಾಗೂ ಹಿಂಚಿಗೇರಿ ತಹಶೀಲ್ದಾರರ ಆದೇಶವನ್ನು ಧಿಕ್ಕರಿಸಿ ಭೂಮಿ ಮಾರಿ ಹಣ ಹೊಡೆದುಕೊಳ್ಳಲು ಹವಣಿಸತೊಡಗಿದರು. ವಿವಿಯ ಸಿಂಡಿಕೇಟ್ ಸಭೆಯಲ್ಲೂ ಭೂಮಿ ಮಾರಾಟಕ್ಕೆ ಅವಕಾಶ ಕೋರಿದರು; ಸದಸ್ಯರು ಮಂಗಳಾರತಿ ಎತ್ತಿದರು. ಇದರಿಂದ ಹತಾಶರಾಗಿದ್ದ ಈ ದುಷ್ಟದ್ವಯರು ಹಲವಾರು ಮಂಗ್ಯಾಟ ನಡೆಸಿದರಾದರೂ ನಿರ್ವಾಹವಿಲ್ಲದೆ ವಿವಿಯ ಭೂಮಿ ಬಚಾವಾಗಿತ್ತು.

ಆದರೀಗ ಇನ್ನೊಂದೆರಡು ತಿಂಗಳಲ್ಲೇ ಸೈದಾಪುರ ಸಾಹೇಬರು ಮನೆ ಕಡೆ ಹೊರಲಿದ್ದಾರಲ್ಲಾ? ಇಂಥಾ ಸಂದರ್ಭದಲ್ಲಿ ಎರಡೆಕರೆ ಭೂಮಿ ಮಾರಿ ಒಂದಷ್ಟು ಹಣ ಗೆಬರುವ ತುಮುಲ ಒತ್ತರಿಸಿಕೊಂಡಂತಿದೆ. ಆದುದರಿಂದಲೇ ಭೂಮಿ ಮಾರಾಟ ಪ್ರಕ್ರಿಯೆಗೆ ಮತ್ತೊಮ್ಮೆ ಚಾಲನೆ ನೀಡಿದ್ದಾರೆ. ಆದರೆ ವಿನಾಕಾರಣ ಪಾಲು ಕೊಡುವ ಬದಲು ಇನ್ನೊಂದಿಷ್ಟು ದಿನ ಕಳೆದರೆ ತಾನೊಬ್ಬನೇ ತಿನ್ನಬಹುದಲ್ಲಾ ಎಂಬ ದುರಾಸೆ ಹಿಂಚಿಗೇರಿಯದ್ದು. ಇದೇ ಈಗ ಇವರಿಬ್ಬರ ನಡುವೆ ಅಂತಃಕಲಹಕ್ಕೆ ಚಾಲನೆ ನೀಡಿದೆ.

ಈ ಭೂಮಿಯೂ ಸೇರಿದಂತೆ ಇನ್ನುಳಿದ ಅನೇಕ ಲಾಭ ಗಿಟ್ಟಿಸಿಕೊಳ್ಳಲು ಹಿಂಚಿಗೇರಿಗಿರುವುದು ಒಂದೇ ಮಾರ್ಗ; ಅದು ಕುಲಪತಿ ಸ್ಥಾನದಲ್ಲಿ ಕುಕ್ಕರಿಸುವುದು. ಇದಕ್ಕಾಗಿ ಆತನೀಗ ತಿಪ್ಪರಲಾಗ ಶುರುವಿಟ್ಟಿದ್ದಾನೆ. ಈ ಸಂಬಂಧ ಬಸವರಾಜ ಬೊಮ್ಮಾಯಿ ಹಾಗೂ ಸಿ.ಎಂ. ಉದಾಸಿಗಳಿಗೆ ದುಂಬಾಲು ಬಿದ್ದದ್ದೂ ಆಗಿದೆ.

ಕುಲಸಚಿವ ಸೈದಾಪುರ ಹೇಗಿದ್ದರೂ ನಿವೃತ್ತಿ ಹೊಂದಲಿದ್ದಾನೆ. ಇದರಿಂದ ಧಾರವಾಡ ವಿವಿಗಂಟಿದ ಒಂದು ಕಂಟಕ ಕಳೆದಂತಾಗುತ್ತದೆ. ಆದರೆ ಈ ಜಾಗಕ್ಕೆ ಅಂಟಿಕೊಳ್ಳಲು ಹವಣಿಸುತ್ತಿದೆಯಲ್ಲಾ ಹಿಂಚಿಗೇರಿಯೆಂಬ ಅಸಹ್ಯ? ಸಂಬಂಧಿಸಿದವರು ಈ ಅನಾಹುತವನ್ನು ತಪ್ಪಿಸಬೇಕಿದೆ. ಕುಲಸಚಿವನಾಗಿದ್ದುಕೊಂಡೇ ಇಡೀ ವಿವಿಯನ್ನು ಕುಲಗೆಡಿಸಿದ ಈ ಆಸಾಮಿ ಕುಲಪತಿಯಾದರೆ ಎಂತೆಂಥ ಅನಾಹುತ ಸಂಭವಿಸುತ್ತದೋ ಹೇಳಲು ಬರುವುದಿಲ್ಲ.

ಅದನ್ನ ತಪ್ಪಿಸಿ ವಿವಿಯೊಳಗೆ ಶೈಕ್ಷಣಿಕ ವಾತಾವರಣ ಉಸಿರಾಡುವಂತೆ ಮಾಡುವವರ್ಯಾರು?

● ಹುಬ್ಬಳ್ಳಿಯಾಂವ



ಹಿಂಚಿಗೇರಿಯ ಹಿಕಮತ್ತುಗಳು

ಕುಲಪತಿಯಾಗಲು ಹುದಿಗಾಲಲ್ಲಿ ನಿಂತಿರುವ ಹಿಂಚಿಗೇರಿಯ ಹಿಕಮತ್ತುಗಳು ದಂಡಿಯಾಗಿವೆ.

ಕುಲಪತಿಯಾಗುವವರು ಪ್ರೊಫೆಸರ್ ಹುದ್ದೆಯಲ್ಲಿ ಹತ್ತು ವರ್ಷ ಸೇವೆ ಸಲ್ಲಿಸಿರಬೇಕು ಅಂತೊಂದು ನಿಯಮವಿದೆ. ಹಿಂಚಿಗೇರಿಯೂ ತನ್ನ ಅರ್ಹತಾ ಪಟ್ಟಿಯನ್ನು ಅದಕ್ಕನಾಗುಣವಾಗಿ ರೂಪಿಸಿದ್ದಾನೆ. ಅದರಲ್ಲಿ ಹತ್ತು ಮಂದಿ ಸಂಶೋಧನಾ ವಿದ್ಯಾರ್ಥಿಗಳಿಗೆ ಗೈಡ್ ಆಗಿದ್ದುದಾಗಿಯೂ ಇಪ್ಪತ್ತೆರಡು ರಸಾಯನ ಶಾಸ್ತ್ರದ ಅಧ್ಯಯನ ಉಪನ್ಯಾಸ ನೀಡಿರುವುದಾಗಿಯೂ ಹೇಳಿಕೊಂಡಿದ್ದಾನೆ. ವಾಸ್ತವವೆಂದರೆ ಈತ ಗೈಡ್ ಆಗಿದ್ದುದು ಮೂವರು ವಿದ್ಯಾರ್ಥಿಗಳಿಗೆ ಮಾತ್ರ. ಇನ್ನುಳಿದಂತೆ ಏಳು ವಿದ್ಯಾರ್ಥಿಗಳಿಗೆ ಸಹಾಯಕ ಗೈಡ್ ಆಗಿ ಕೆಲಸ ಮಾಡಿದ್ದಾನೆ. ಈ ಸಂಬಂಧ ಖುದ್ದು ರಾಜ್ಯಪಾಲರೇ ಈತನ ಅಧಿಕಾರ ದುರುಪಯೋಗ ಕುರಿತು ತನಿಖೆಗೆ ಆದೇಶ ನೀಡಿದ್ದೂ ಆಗಿದೆ. ಮೇಲಿನದ್ದು ಹಿಂಚಿಗೇರಿಯ ಅಧಿಕಾರ ದುರುಪಯೋಗಗಾಥೆಯಾದರೆ, ದಲಿತ ವಿರೋಧಿ ಧೋರಣೆ ಆತನ ವ್ಯಕ್ತಿತ್ವದ ಇನ್ನೊಂದು ಮಜಲು. ಇದರ ಫಲವೆಂಬಂತೆ ಈತನ ಕೈಕೆಳಗೆ ಕೆಲಸ ಮಾಡುವ ಉಪನ್ಯಾಸಕರು, ಸಿಬ್ಬಂದಿಗಳು ಕಿರುಕುಳ ಅನುಭವಿಸಿದ ಉದಾಹರಣೆಗಳು ಸಾಕಷ್ಟಿವೆ.

ಈತನ ವ್ಯಕ್ತಿತ್ವದ ಮುಖ್ಯ ಮಜಲು ವಿಕ್ಷಿಪ್ತತೆ ಮತ್ತು ಅಖಂಡ ಮೌಢ್ಯದ್ದು. ಈ ಮೊದಲು ಕರ್ನಾಟಕ ವಿವಿಯಲ್ಲಿ ಜೀವ ರಸಾಯನ ಶಾಸ್ತ್ರ ವಿಭಾಗಕ್ಕೆ ಒಂದು ವರ್ಷ ಡೀನ್ ಆಗಿ ಕೆಲಸ ಮಾಡಿದ್ದ ಈತ, ಅದಕ್ಕೂ ಮುಂಚೆ ಹತ್ತು ವರ್ಷ ಪ್ರಾಧ್ಯಾಪಕನಾಗಿ ದುಡಿದಿದ್ದ. ಅಷ್ಟೂ ವರ್ಷ ಈತ ಭೋದಿಸಿದ್ದು ರಸಾಯನ ಶಾಸ್ತ್ರ ಎಂಬ ವಿಜ್ಞಾನದ ಭಾಗವನ್ನು. ತಮಾಷೆಯೆಂದರೆ ಮನೆಯಿಂದ ಹೊರಡುವುದರಿಂದ ಹಿಡಿದು ವಾಪಾಸಾಗುವವರೆಗೂ ಗಳಿಗೆ, ಕಾಲ ಅಂತೆಲ್ಲ ಅಪ್ಪಟ ಮೌಢ್ಯ ಪ್ರದರ್ಶಿಸುತ್ತಾನೆ. ದಾರೀಲಿ ಬೆಕ್ಕು ಅಡ್ಡ ಬಂದರೆ ತಲ್ಲಣಿಸುವ, ಬಾವಿ ಕಂಡರೆ ದಿಕ್ಕೇ ಬದಲಿಸುವ, ಪ್ರತೀ ಅಮಾವಾಸ್ಯೆಯಂದು ತಾನು ಕೂರುವ ಕುರ್ಚಿ ಮೇಲೆ ನಿಂತು ಗಿರ್ರನೆ ತಿರುಗಿ ನಮಸ್ಕರಿಸುವ ಈತ ಅದೇನು ವಿಜ್ಞಾನ ಪಾಠ ಭೋದಿಸುತ್ತಿದ್ದನೋ ದೇವರೇ ಬಲ್ಲ!

ಈತ ಅದೆಷ್ಟು ವಿಕ್ಷಿಪ್ತನೆಂದರೆ, ಕಚೇರಿ ಸಮಯದಲ್ಲೇ ತನ್ನ ಕೊಠಡಿಯ ಬಾಗಿಲಿಗೆ ಬೀಗ ಹಾಕಿಸಿಕೊಂಡು ಒಳಗೆ ಕೂತಿರುತ್ತಿದ್ದ. ಯಾರೋ ಹೇಳಿದರೆಂದು ಕಚೇರಿಯ ಹಿಂಬಾಗಿಲಿಂದ ಪ್ರವೇಶಿಸಿ ಹುಚ್ಚಾಟ ತೋರಿದ್ದ.

ಇದು ಬಿಟ್ಟರೆ ತನ್ನ ಜಾತಿ ಮುಂದಿಟ್ಟುಕೊಂಡು ಬೆಂಗಳೂರಲ್ಲಿ ತಳವೂರಿ ಅವರಿವರನ್ನು ಓಲೈಸಿಕೊಳ್ಳುವ ಕೆಲಸದಲ್ಲೇ ಸಾಹೇಬರು ಬ್ಯುಸಿಯಾಗಿರುತ್ತಾರೆ.

ಇಂಥವನು ಕುಲಪತಿಯಾದರೆ ಧಾರವಾಡ ವಿವಿ ಉದ್ಧಾರವಾದೀತಾದರೂ ಹೇಗೆ?

●


...ೈಸೂರು: ಅವ್ವಾ ಮಾದೇಶನ ಬಂಟ ಕರಿಯಪ್ಪನ ಹತ್ಯೆ

...ಸೂರಿನ ಭೂಗತಲೋಕ ಮತ್ತೊಮ್ಮೆ ನೆತ್ತರು ... ಪರಮ ಪಾಪಿ ಅವ್ವಾ ಮಾದೇಶನ ಬಂಟ ...ನನ್ನು ಮಾದೇಶನ ವೈರಿ ದೇವು ಕತ್ತರಿಸಿ ...ನೆ.

ಅವ್ವಾ ಮಾದೇಶನ ಫಲ!


...ಚ. ದೇವೇಗೌಡನ ಶಿಷ್ಯ ಹಾಗೂ ಮಾಜಿ ...ಮಂತ್ರಿ ಕುಮಾರಸ್ವಾಮಿ ಆಶೀರ್ವಾದವಿರುವ ...ಜೆಡಿಎಸ್‌ನ ನಗರಪಾಲಿಕೆ ಸದಸ್ಯ ಅವ್ವಾ ಮಾದೇಶ ...ರಲ್ಲಿ ಹುಣಸೂರಿನ ಬಳಿಯ ಬಿಳಿಕೆರೆ ಬಳಿಯ ...ವೊಂದರಲ್ಲಿ ನಡೆದ ಜೋಡಿ ಕೊಲೆ ಸಂಬಂಧ ...ಕೊಳಗಾಗಿ ಜೈಲು ಸೇರಿದ್ದ.

...ಯನಗರದ ನಿವೇಶನವೊಂದರ ವಿಷಯವಾಗಿ ... ರಾಜೇಶ್ ಹಾಗೂ ಅವ್ವಾ ...ಶ್ ನಡುವೆ ದ್ವೇಷ ಉಂಟಾಗಿ ... ತಂಡ ಹುಣಸೂರಿನ ತೋಟ ...ಲ್ಲಿ ಅಡಗಿ ಕುಳಿತಿತ್ತು. ಇದರ ...ಳಿದು ಅವ್ವಾ ಮಾದೇಶನ ಗುಂಪು ... ಸುಗ್ಗಿ ರಾಮು ಮತ್ತು ರಾಜೇಶ್ ...ಚ್ಚಿ ಕೊಂದಿತ್ತು. ದೇವು, ಅಶೋಕ, ...ನ, ಸುನೀಲ ತೋಟದ ಮನೆಯ ...ಸೆಗೆದು ಪರಾರಿಯಾಗಿದ್ದರು. ಅವ್ವಾ ...ಶ ಪೊಲೀಸರಿಗೆ ಶರಣಾಗಿ ...ಾಗಿ ಕಳೆದ ವರ್ಷ ಜಾಮೀನು ... ಹೊರಬಂದಿದ್ದ. ಮೈಸೂರಿನ ಕುಖ್ಯಾತ ಭೂಮಾಫಿಯಾವನ್ನು ಪೋಷಿಸುತ್ತಿರುವ ಅವ್ವಾ ಮಾದೇಶನ ಆಸ್ತಿ 100 ಕೋಟಿಗೂ ಹೆಚ್ಚು.



ಅವ್ವಾ ಮಾದೇಶನಿಗೆ ಬೆಂಗಳೂರಿನ ಹಲವು ಮಾಫಿಯಾ ತಂಡಗಳೊಂದಿಗೆ ಸಂಪರ್ಕವಿದ್ದು, ಸೈಲೆಂಟ್ ಸುನೀಲ, ಒಂಟೆ ಇವನ ಪರಮಾಪ್ತರು. ರಾಮನಗರ ಜೈಲಿನಲ್ಲಿದ್ದಾಗ ಇವನ ಗೆಳೆಯ ಸುನೀಲನ ಬಂಧನಕ್ಕೆ ಕಾರಣವಾದ ಎಂಬ ಕಾರಣಕ್ಕೆ ಹೇಮಂತ್ ಎಂಬುವವನನ್ನು ಜೈಲಿನಲ್ಲಿಯೇ ಅಟ್ಟಾಡಿಸಿಕೊಂಡು ಹೊಡೆದಿದ್ದ.

ಇದೆಲ್ಲದರ ನಡುವೆ ಕೊಲೆಗೊಳಗಾದವರ ಗುಂಪು ಮತ್ತು ಅವ್ವಾ ಮಾದೇಶನ ಗುಂಪಿನ ನಡುವೆ ಶೀತಲ ಸಮರ ನಡೆಯುತ್ತಲೇ ಇತ್ತು. ಕೂತಲ್ಲಿ ನಿಂತಲ್ಲೆಲ್ಲ ಅನುಮಾನಗಳು, ಸ್ಕೆಚ್‌ಗಳು, ಗ್ಯಾಂಗು ಕಟ್ಟುವುದು ನಡೆದೇ ಇತ್ತು. ಇದರ ಪರಿಣಾಮವೇ ಅವ್ವಾ ಮಾದೇಶನ ಬಂಟ ಕರಿಯಪ್ಪನ ಕೊಲೆ.



ಅವ್ವಾ ಮಾದೇಶ

ಕರಿಯಪ್ಪ ತೊಣಚಿಕೊಪ್ಪಲಿನಿಂದ ಜೆ.ಸಿ. ಇಂಜಿನಿಯರಿಂಗ್ ಕಡೆ ಸಾಗುವ ರಸ್ತೆಯಲ್ಲಿ ಸೆಂಟ್ರಿಂಗ್ ಸಾಮಾನು ಮತ್ತು ಕಾಂಕ್ರೀಟು ಕಲಸುವ ಯಂತ್ರಗಳನ್ನಿಟ್ಟುಕೊಂಡು, ಜೀವನ ನಡೆಸುತ್ತಿದ್ದ. ಜೋಡಿ ಕೊಲೆಯಲ್ಲಿ ಭಾಗವಹಿಸಿದ ಅವ್ವಾ ಮಾದೇಶ A1 ಆದರೆ ಅವನ ತಮ್ಮ A2, ಕರಿಯಪ್ಪ A3 ಆರೋಪಿಯಾಗಿದ್ದ.

ಗಣಪತಿ ಹಬ್ಬದ ಸಮಯದಲ್ಲಿ ಗಣಪತಿಯನ್ನು ವಿಸರ್ಜಿಸುವ ಮೊದಲು ಹೊರಟ ಮೆರವಣಿಗೆ ಕರಿಯಪ್ಪನ ಮನೆ ಮುಂದೆ ಬಂದಾಗ ಚಕಮಕಿ ನಡೆದಿದೆ. ಕರಿಯಪ್ಪ ವಿರೋಧಿಪಡೆಯ ದೇವು ಅಲಿಯಾಸ್ ದೇವೇಂದ್ರನ ಕಡೆಯ ಹುಡುಗರಿಗೆ ಹೊಡೆದಿದ್ದಾನೆ. ನಂತರ ಊರ ದೇವಸ್ಥಾನದ ಯಜಮಾನಿಕೆ ವಿಚಾರದಲ್ಲಿ ದೇವು ಕಡೆಯ ಲಾಯರ್ ರಾಮಕೃಷ್ಣನ ಗುಂಪಿಗೂ, ಕರಿಯಪ್ಪನ ಗುಂಪಿಗೂ ನಡುವೆ ಮನಸ್ತಾಪ ಉಂಟಾಯಿತು. ಈ ವಿಚಾರದಲ್ಲಿ ದೇವು ಗ್ಯಾಂಗನ್ನ ಕರಿಯಪ್ಪನ ಗ್ಯಾಂಗು ರೌಂಡಪ್ ಮಾಡಿಸುತ್ತಿತ್ತು. ಕರಿಯಪ್ಪನನ್ನು ಹೀಗೇ ಬಿಟ್ಟರೆ ಅಪಾಯ ಕಾದಿದೆ ಎಂದು ಭಾವಿಸಿದ ವಿರೋಧಿ ಪಡೆ ಸ್ಕೆಚ್ ರೆಡಿ ಮಾಡಿತು.



ಪ್ರಕಾಶ್

ಕರಿಯಪ್ಪ ಕೊಲೆಯಾಗುವ ದಿನ ಸರಸ್ವತಿಪುರಂನ ಲೋಬೋಸ್ ಬಾರ್‌ನಲ್ಲಿ ದೇವು ಗ್ಯಾಂಗು ಬೆಳಿಗ್ಗೆಯಿಂದಲೂ ಕಂಠಪೂರ್ತಿ ಕುಡಿದು ಹೊಂಚು ಹಾಕಿದೆ. ಹೇಮಂತ, ಪಲ್ಲಿ ಅಲಿಯಾಸ್ ರಮೇಶ, ಅಶೋಕ, ಮಂಜೇಶ, ಚಂದ್ರ ಅಲಿಯಾಸ್ ಕರಿಯ, ಮಹೇಶ, ಪಡುವಾರಹಳ್ಳಿ ಲಾಯರ್ ರಾಮಕೃಷ್ಣ, ಸುನೀಲ, ಸ್ವಾಮಿ ಅಲಿಯಾಸ್ ಆಮಿ ಮುಂತಾದವರಿದ್ದ ಗ್ಯಾಂಗು ಸಮಯಕ್ಕಾಗಿ ಕಾದಿದೆ. ರಾತ್ರಿ ಸುಮಾರು 8.20 ಹೊತ್ತಿಗೆ ಕರಿಯಪ್ಪನ ಆಫೀಸಿಗೆ ಎಡತಾಕಿದ ಗ್ಯಾಂಗು ಕಾರಿನಿಂದ ಹೊರಗಿಳಿದು ಸಡನ್ ಎಂಟ್ರಿ ಕೊಟ್ಟಿದೆ. ಮಾರಕಾಸ್ತ್ರಗಳನ್ನು ಇಟ್ಟುಕೊಂಡ ಗ್ಯಾಂಗನ್ನು ನೋಡಿ ವಿಚಲಿತನಾದ ಕರಿಯಪ್ಪ ಮತ್ತು ಶ್ರೀಧರ ಮಿಂಚಿನ ವೇಗದಲ್ಲಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅಂಗಳದಿಂದ ಆಫೀಸಿಗೆ ನುಗ್ಗಿ ಒಳಗೆ ಚಿಲಕ ಹಾಕಿಕೊಂಡ ಕರಿಯಪ್ಪ ಮತ್ತು ಶ್ರೀಧರ ತಾವು ಸೇಫ್ ಅಂದುಕೊಳ್ಳುವಷ್ಟರಲ್ಲಿ ಕಛೇರಿಯ ಗಾಜುಗಳನ್ನು ಒಡೆದ ಗ್ಯಾಂಗು ಒಳಗೆ ನುಗ್ಗಿದೆ. ಅಡ್ಡಾದಿಡ್ಡಿ ಹೊಡೆತಕ್ಕೆ ಸಿಕ್ಕು ಜರ್ಝರಿತನಾದ ಕರಿಯಪ್ಪ ನೆಲಕ್ಕೆ ಕುಸಿಯುತ್ತಿದ್ದಂತೆಯೇ, ಇಡೀ ಗ್ಯಾಂಗ್ ಮನಸೋ ಇಚ್ಛೆ ಕೊಚ್ಚಿ ಪರಾರಿಯಾಗಿದೆ. ಈ ನಡುವೆ ಕರಿಯಪ್ಪನನ್ನು ಅಟ್ಯಾಕ್ ಮಾಡುವ ಆತುರದಲ್ಲಿ ಬೀಸಿದ ಲಾಂಗ್‌ನ ಹೊಡೆತಕ್ಕೆ ದೇವುವಿನ ಮುಂಗೈ ಕತ್ತರಿಸಿ ಹೋಗಿ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾನೆ. ಮತ್ತೊಬ್ಬನಿಗೆ ಕಾಲಿಗೆ ಏಟು ಬಿದ್ದಿದೆ.

ಗ್ಯಾಂಗಿನ ಲೀಡರ್ ದೇವು ಪೊಲೀಸರ ಅತಿಥಿಯಾಗಿದ್ದು, ಗ್ಯಾಂಗಿನ ಮಿಕ್ಕೆಲ್ಲರೂ ಮಂಗಳೂರಿನ ಕಡೆ ಪರಾರಿಯಾಗಿದ್ದಾರೆ. ಸರಸ್ವತಿಪುರಂ ಠಾಣೆಯ ಇನ್ಸ್‌ಪೆಕ್ಟರ್ ಸಿದ್ದರಾಜು ಹಾಗೂ ಪಿಎಸ್‌ಐ ಪ್ರಕಾಶ್ ಅವರ ತಂಡ ಅಪರಾಧಿಗಳ ಬೆನ್ನತ್ತಿದೆ.

● ಮಹಿಂಪ


ಮಸೀದಿ ಕೆಡವಿದ ನ್ಯಾಯ ಮಂದಿರ

2

ಕೋರ್ಟು ನಿರಾಕರಿಸಿತು. (ಅಂದರೆ ದಾವೆಯನ್ನು ರದ್ದುಪಡಿಸಿದರೂ ಬಾಬ್ರಿ ಮಸೀದಿಯ ಕೆಳಗೆ ಮಂದಿರವಿರಬಹುದೆಂಬ ಊಹಾಪೋಹಕ್ಕೆ ಕೋರ್ಟೇ ಪರೋಕ್ಷ ಮಾನ್ಯತೆಯನ್ನು ನೀಡಿತು.) ನಂತರ 1934ರಲ್ಲಿ ಸಂಭವಿಸಿದ ಕೋಮು ಗಲಭೆಯಲ್ಲಿ ಕೆಲವು ಹಿಂದೂ ಮತೋನ್ಮಾದಿ ಶಕ್ತಿಗಳು ಬಾಬ್ರಿ ಮಸೀದಿಯ ಗೋಡೆಗಳನ್ನು ಕೆಡವಿ ಮಸೀದಿಗೆ ಹಾನಿ ಮಾಡಿದರು. ಆಗ ಬ್ರಿಟಿಷ್ ಸರ್ಕಾರ ಅದನ್ನು ರಿಪೇರಿ ಮಾಡಿಸಿಕೊಟ್ಟು ಯಥಾಸ್ಥಿತಿ ಕಾದಿತು. 1949ರ ಡಿಸೆಂಬರ್ 22ರ ಮಧ್ಯರಾತ್ರಿ ಹಿಂದೂಗಳ ಗುಂಪೊಂದು ಬಾಬ್ರಿ ಮಸೀದಿಯ ಒಳಾವರಣಕ್ಕೆ ಗುಟ್ಟಾಗಿ ಪ್ರವೇಶಿಸಿ ಅಲ್ಲಿ ಬಾಲರಾಮನ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಆಗ ನೆಹರೂ, ಸರ್ದಾರ್ ಪಟೇಲ್‌ರ ಸರ್ಕಾರ ಮೂರ್ತಿಗಳನ್ನು ಕೂಡಲೇ ತೆಗಿಸಿ ಯಥಾಸ್ಥಿತಿ ಕಾಯ್ದುಕೊಂಡು ಬರಬೇಕೆಂದು ಅಂದಿನ ಮುಖ್ಯಮಂತ್ರಿ ಗೋಪಿವಲ್ಲಭ ಪಂತ್‌ಗೆ ಆದೇಶ ನೀಡಿದರು. ಆದರೆ ಆಗಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೆ.ಕೆ. ನಯ್ಯರ್ ಮೂರ್ತಿಗಳನ್ನು ತೆಗೆದುಹಾಕಿದರೆ ಕೋಮು ಗಲಭೆಗಳಾಗುವ ಸಾಧ್ಯತೆಯ ನೆಪವೊಡ್ಡಿ ಮೂರ್ತಿಗಳನ್ನು ತೆಗೆಯಲಿಲ್ಲ, ಬದಲಿಗೆ ಬಾಬ್ರಿ ಮಸೀದಿಯ ಪ್ರವೇಶವನ್ನು ಮುಸ್ಲಿಮ್ ಮತ್ತು ಹಿಂದೂಗಳಿಬ್ಬರಿಗೂ ನಿರ್ಬಂಧಿಸಲಾಯಿತು. (ನಂತರ ಕೆ.ಕೆ.ನಯ್ಯರ್ ಅವರು ಭಾರತೀಯ ಜನತಾ ಪಕ್ಷದ ಅಂದಿನ ಹೆಸರಾಗಿದ್ದ ಭಾರತೀಯ ಜನಸಂಘದ ಹೆಸರಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದರು!).

1950ರ ಜನವರಿಯಲ್ಲಿ "ಆಸ್ಥಾನ್ ಜನ್ಮ ಸ್ಥಾನ" ಸಮಿತಿಯ ಗೋಪಾಲ್ ವಿಶಾರದ್ ಎಂಬುವರು ಪ್ರತಿಮೆಗಳ ಪೂಜೆಗೆ ಅವಕಾಶ ಕೊಡಬೇಕೆಂದು ದಾವೆ ಹೂಡಿದರು. 1950ರ ಡಿಸೆಂಬರ್‌ನಲ್ಲಿ ಮತ್ತೊಬ್ಬ ಹಿಂದೂ ಮಹಂತರೂ ಬಾಬ್ರಿ ಮಸೀದಿಯ ಒಳಾವರಣದಲ್ಲಿ ಪೂಜೆಗೆ ಅವಕಾಶ ಕೊಡಬೇಕೆಂದು ದಾವೆ ಹೂಡಿದರು. 1955ರಲ್ಲಿ ಫೈಜಾಬಾದ್ ಹೈಕೋರ್ಟು ಪ್ರತಿಮೆಯನ್ನು ತೆಗೆಯುವ ಅಗತ್ಯವಿಲ್ಲವೆಂದು ಆದೇಶ ನೀಡಿತು. ಆ ನಂತರ ಆ ತೀರ್ಪನ್ನು ಉತ್ತರ ಪ್ರದೇಶ ಹೈಕೋರ್ಟು ಸಹ ಎತ್ತಿ ಹಿಡಿಯಿತು. ಈ ಮಧ್ಯೆ ಬಾಬ್ರಿ ಮಸೀದಿಯ ಹೊರಾವರಣದಲ್ಲಿ ಚಬೂತರ್ ಮತ್ತು ಸೀತಾ ರಸೋಯಿ ಎಂಬಲ್ಲಿ ಹಿಂದೂಗಳು ಪ್ರಾರ್ಥನೆ ಸಲ್ಲಿಸುವುದು ಮುಂದುವರೆದಿತ್ತು. ಆದರೆ ಒಳಾವರಣದಲ್ಲಿ ಹಿಂದೂ ಸಂಘಟನೆಗಳು ರಾಮ ಪ್ರತಿಮೆಗಳನ್ನು ಸ್ಥಾಪಿಸಿದ್ದರಿಂದ ಹಾಗೂ ಒಳಾವರಣಕ್ಕೆ ಬೀಗ ಹಾಕಿದ್ದರಿಂದ ಮುಸ್ಲಿಮರು ಬಾಬ್ರಿ ಮಸೀದಿಯಲ್ಲಿ ನಮಾಜ್ ಮಾಡುವುದು ನಿಂತಿತು. 1959ರಲ್ಲಿ ನಿರ್ಮೋಹಿ ಅಖಾಡಾ ಎಂಬ ವೈಷ್ಣವ ಪಂಥಕ್ಕೆ ಸೇರಿದ ಸಂಘಟನೆಯೊಂದು ಬಾಬ್ರಿ ಮಸೀದಿಯ ಹೊರಾವರಣದಲ್ಲಿರುವ ಸೀತಾ ರಸೋಯಿ ಮತ್ತು ಚಬೂತರ್ ಪ್ರದೇಶದ ಒಡೆತನ ತಮಗೇ ಸೇರಿದ್ದೆಂದೂ, ಅದನ್ನು ತಮ್ಮ ವಶಕ್ಕೆ ಕೊಡಬೇಕೆಂದೂ ಒಡೆತನ ದಾವೆ ಸಲ್ಲಿಸಿತು. 1961ರ ಡಿಸೆಂಬರ್ 18ರಂದು ಸುನ್ನಿ ವಕ್ಫ್ ಬೋರ್ಡ್ ಸಮಿತಿಯವರು ಬಾಬ್ರಿ ಮಸೀದಿ ಪ್ರದೇಶದ ಇಡೀ ಒಡೆತನ ತಮಗೆ ಸೇರಬೇಕೆಂದು ಒಡೆತನದ ದಾವೆ ಸಲ್ಲಿಸಿದರು.

1984ರಲ್ಲಿ ಹಿಂದೂಪರ ಸಂಘಟನೆಯೊಂದು ರಾಮ ವಿಗ್ರಹಗಳಿರುವ ಸ್ಥಳಕ್ಕೆ ಹಾಕಿರುವ ಬೀಗವನ್ನು ತೆಗೆದು ಹಿಂದೂಗಳು ಪೂಜೆ ಸಲ್ಲಿಸಲು ಅವಕಾಶ ಕೊಡಬೇಕೆಂದು ದಾವೆ ಸಲ್ಲಿಸಿತು. ಅದನ್ನು ಪುರಸ್ಕರಿಸಿದ ಫೈಜಾಬಾದ್ ಜಿಲ್ಲಾ ಕೋರ್ಟು ಬೀಗವನ್ನು ತೆಗೆಯಬೇಕೆಂದು ಆದೇಶಿಸಿತು. ಅದನ್ನು ಉನ್ನತ ಕೋರ್ಟಿನಲ್ಲಿ ಪ್ರಶ್ನಿಸಿದ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ಬೀಗವನ್ನು ತೆಗೆದು ಹಿಂದೂಗಳ ಪೂಜೆಗೆ ಏಕಪಕ್ಷೀಯವಾಗಿ ಅವಕಾಶ ಮಾಡಿಕೊಟ್ಟಿತು. ಇದರಿಂದ ಉತ್ತೇಜಿತಗೊಂಡ ಸಂಘಪರಿವಾರ ಮತ್ತು ಬಿಜೆಪಿ ಪಕ್ಷ ದೇಶಾದ್ಯಂತ ರಾಮಜನ್ಮ ಭೂಮಿ ವಿಮೋಚನಾ "ಚಳವಳಿ"ಯನ್ನು ಪ್ರಾರಂಭಿಸಿತು. ಬಾಬ್ರಿ ಮಸೀದಿ ಇರುವ ಜಾಗದಲ್ಲಿ ರಾಮಜನ್ಮ ತಾಳಿದ್ದಾನೆಂದು ಹಿಂದೂಗಳು ನಂಬುತ್ತಾರಾದ್ದರಿಂದ ಮುಸ್ಲಿಮರು ಅದನ್ನು ಬಿಟ್ಟುಕೊಡಬೇಕೆಂದೂ, ಆ ಮೂಲಕ ಬಾಬರ್ ಮಂದಿರ ಕೆಡವಿ ಮಸೀದಿ ಕಟ್ಟಿದ್ದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದೂ ಅಸತ್ಯ-ಅರ್ಧಸತ್ಯಗಳ ಪ್ರಚಾರ ಪ್ರಾರಂಭಿಸಿ ಇಡೀ ದೇಶದಲ್ಲಿ ಕೋಮುಗಲಭೆಗಳ ದಾವಾನಿಲವನ್ನು ಹಬ್ಬಿಸಿತು. ಮುಸ್ಲಿಮರ ಸಾಲುಸಾಲು ಕಗ್ಗೊಲೆಗಳನ್ನು ನಡೆಸಿದರು.



ಸರ್ವಶಕ್ತ ಭಗವಂತನಿಗೆ ಮಾನವನೇ ಗಾರ್ಡಿಯನ್!

ಇದೇ ಸಮಯದಲ್ಲಿ 1989ರಲ್ಲಿ ಸಂಘಪರಿವಾರದ ರಾಮ ಶಿಲಾನ್ಯಾಸ್ ಸಮಿತಿಯು ಸಾಕ್ಷಾತ್ ಭಗವಾನ್ ಶ್ರೀರಾಮಚಂದ್ರನ ಹೆಸರಲ್ಲಿ ಮತ್ತೊಂದು ಕೇಸು ದಾಖಲು ಮಾಡಿತು. ಈ ಕೇಸಿನಲ್ಲಿ ಅರ್ಜಿದಾರರು ಯಾರು ಗೊತ್ತೆ? ಅರ್ಜಿದಾರ ನಂಬರ್ 1, ಸಾಕ್ಷಾತ್ ಭಗವಾನ್ ಶ್ರೀರಾಮಚಂದ್ರ ವಿರಾಜ್‌ಮಾನ್. ಅರ್ಜಿದಾರ ನಂಬರ್ 2. ರಾಮಜನ್ಮಭೂಮಿ ಎಂಬ ಜಾಗ! ಬಾಲರಾಮ ದೇವರಾಗಿದ್ದು ಎಷ್ಟೇ ವರ್ಷಗಳಾದರೂ ಅವನು ಬಾಲಕನೇ ಆಗಿರುವುದರಿಂದ ಆತನ ಆತ್ಮ ಸಖನಾದ 63 ವರ್ಷದ ತ್ರಿಪಾಠಿ ಎಂಬುವರು ತಾನು ಬಾಲರಾಮನ ಗಾರ್ಡಿಯನ್ ಎಂದೂ ಬಾಲರಾಮನ ಪರವಾಗಿ ವಾದಿಸುವುದಾಗಿಯೂ ಅರ್ಜಿ ಸಲ್ಲಿಸಿದರು. ಇದರಲ್ಲಿ ಭಗವಾನ್ ಬಾಲರಾಮರು ಇಡೀ ಪ್ರದೇಶ ತನಗೆ ಸೇರಬೇಕಾದ್ದರಿಂದ ನಿರ್ಮೋಹಿ ಅಖಾಡಾ ಮತ್ತು ಸುನ್ನಿ ವಕ್ಫ್ ಬೋರ್ಡ್‌ಗಳಿಬ್ಬರನ್ನೂ ಪ್ರತಿದಾವೆಗಳನ್ನಾಗಿಸಿ ಇಡೀ ಪ್ರದೇಶವನ್ನು ಕೇವಲ ತನಗೇ ಬಿಟ್ಟುಕೊಡಬೇಕೆಂದು ವಾದಿಸಿದರು! ಇಂಥಾ ಹಾಸ್ಯಾಸ್ಪದ ಅರ್ಜಿಯನ್ನು ಕೋರ್ಟು ಪರಿಗಣಿಸಿದ್ದು ಮಾತ್ರವಲ್ಲ ಸೆಪ್ಟೆಂಬರ್ 30ರ ತೀರ್ಪಿನಲ್ಲಿ ಬಾಲರಾಮನ ಹಕ್ಕನ್ನು ಸಂಪೂರ್ಣವಾಗಿ ಎತ್ತಿಹಿಡಿದಿದೆ!!

ನಾಲ್ಕು ಕೇಸುಗಳೂ... ಇಪ್ಪತ್ತು ವರ್ಷಗಳೂ...


1989ರಲ್ಲಿ ಸರ್ಕಾರದ ವಿಶೇಷ ಮನವಿಯ ಮೇರೆಗೆ ಅಯೋಧ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಫೈಜಾಬಾದ್ ಕೋರ್ಟಿನಲ್ಲಿ ಇದ್ದ ಎಲ್ಲಾ ಪ್ರಕರಣಗಳನ್ನು ಅಲಹಾಬಾದ್ ಹೈಕೋರ್ಟಿಗೆ ವರ್ಗಾಯಿಸಲಾಯಿತು. ಹೀಗಾಗಿ 1950ರಲ್ಲಿ ಬಾಬ್ರಿ ಮಸೀದಿಯ ಒಳಾವರಣದಲ್ಲಿರುವ ಪ್ರತಿಮೆಗಳ ಪೂಜೆಗೆ ಸರ್ಕಾರ ಅಂದು ವಿಧಿಸಿದ್ದ ನಿರ್ಬಂಧವನ್ನು ಪ್ರಶ್ನಿಸಿ ವಿಶಾರದ್ ಎಂಬುವರು ಹಾಕಿದ್ದ ದಾವೆಯು ಅಲಹಾಬಾದ್ ಹೈಕೋರ್ಟಿನಲ್ಲಿ- ಮೂಲದಾವೆ (Original Suit- OS-1) 1 ಎಂದು ದಾಖಲಾಯಿತು. ಸಂತ ಮಹಂತರು ಇದೇ ವಿಷಯದಲ್ಲಿ 1951ರಲ್ಲಿ [illegible] ದಾವೆ ಮೂಲದಾವೆ 2, OS-2, ಎಂದು ದಾಖಲಾಯಿತು. 19[illegible] ಮ ಹೊರಾವರಣದಲ್ಲಿರುವ ಸೀತಾ ರಸೋಯಿ ಮತ್ತು ಚಬೂತರ್ ಪ್ರದೇಶದ ಒಡೆತನವನ್ನು ತಮಗೇ ನೀಡಬೇಕೆಂದು ನಿರ್ಮೋಹಿ ಅಖಾಡಾದವರು ಸಲ್ಲಿಸಿದ್ದ ದಾವೆಯನ್ನು OS-3 ಎಂದೂ ದಾಖಲಿಸಿಕೊಳ್ಳಲಾಯಿತು. 1961ರಲ್ಲಿ ಸುನ್ನಿ ವಕ್ಫ್ ಬೋರ್ಡಿನವರು ಇಡೀ ಬಾಬ್ರಿ ಮಸೀದಿ ಪ್ರದೇಶದ ಒಡೆತನವನ್ನು ಕೇಳಿ ಸಲ್ಲಿಸಿದ್ದ ದಾವೆಯನ್ನು OS-4 ಎಂದೂ ಪರಿಗಣಿಸಿ, 1909ರಲ್ಲಿ ಇಡೀ ಪ್ರದೇಶ ತನ್ನದು ಎಂದು ಭಗವಾನ್ ರಾಮ ಹಾಕಿದ್ದ ಅರ್ಜಿಯನ್ನು OS-5 ಎಂದೂ ಪರಿಗಣಿಸಲಾಯಿತು. 1990ರಲ್ಲಿ OS-2ರ ಅರ್ಜಿದಾರ ಭಗವಂತನ ಹೆಸರಲ್ಲಿ ಬಿಜೆಪಿ ನಡೆಸುತ್ತಿದ್ದ ರಾಜಕಾರಣವನ್ನು ಕಂಡು ಬೇಸತ್ತು ತಮ್ಮ ಅರ್ಜಿಯನ್ನು ಹಿಂತೆಗೆದುಕೊಂಡರು. ಹೀಗಾಗಿ ಅಲಹಾಬಾದ್ ಹೈಕೋರ್ಟಿನ ಮುಂದೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕು ದಾವೆಗಳು ಉಳಿದುಕೊಂಡವು.

ಈ ಮಧ್ಯೆ ರಾಮಜನ್ಮಭೂಮಿ ವಿವಾದವನ್ನು ರಾಷ್ಟ್ರಮಟ್ಟದ ಕೋಮುವಾದಿ ರಾಜಕಾರಣಕ್ಕೆ ಬಳಸಿಕೊಂಡ ಸಂಘಪರಿವಾರ ಮತ್ತು ಬಿಜೆಪಿ ರಾಷ್ಟ್ರಾದ್ಯಂತ ರಾಮನ ಹೆಸರಲ್ಲಿ ಉನ್ಮಾದ ಸೃಷ್ಟಿಸಿ ಕೋಮು ಕಗ್ಗೊಲೆಗಳನ್ನು ನಡೆಸಿದ್ದಲ್ಲದೆ 1992ರ ಡಿಸೆಂಬರ್ 6ರಂದು ಬಾಬ್ರಿ ಮಸೀದಿಯನ್ನು ಕೆಡವಿ ಹಾಕಿತು. ಅಂದೇ ಅಲ್ಲಿ ಒಂದು ತಾತ್ಕಾಲಿಕ ರಾಮಮಂದಿರವನ್ನು ಕಟ್ಟಿಬಿಟ್ಟಿತು. 1993ರಲ್ಲಿ ಕೇಂದ್ರ ಸರ್ಕಾರ ಬಾಬ್ರಿ ಮಸೀದಿಯಿದ್ದ ಇಡೀ 2.7 ಎಕರೆಯನ್ನು ಒಳಗೊಂಡಂತೆ 64 ಎಕರೆ ಪ್ರದೇಶವನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತು. ವಿವಾದಿತ ಸ್ಥಳದಲ್ಲಿ ರಾಮಮಂದಿರವಿತ್ತೋ ಇಲ್ಲವೋ ಎಂಬ ವಿಷಯ ಕುರಿತಂತೆ ಕೇಂದ್ರ ಸರ್ಕಾರದ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ಸುಪ್ರೀಂಕೋರ್ಟಿನ ಅಭಿಪ್ರಾಯ ಕೇಳಿದರು. ಆದರೆ ಸುಪ್ರೀಂಕೋರ್ಟಿನ ಐವರು ನ್ಯಾಯಾಧೀಶರ ಪೀಠ ಇಂಥಾ ಇತಿಹಾಸ, ನಂಬಿಕೆ ಮತ್ತು ಶ್ರದ್ಧೆಗಳ ವಿಷಯದ ಬಗ್ಗೆ ಕೋರ್ಟುಗಳ ತಮ್ಮ ಅಭಿಪ್ರಾಯ ಕೊಡಲು ಅಶಕ್ತ ಮತ್ತು ಸಲ್ಲದು ಎಂದು ತಿಳಿಸಿತು. 1994ರ ಇಸ್ಮಾಯಿಲ್ ಫರೂಖಿ ಪ್ರಕರಣದಲ್ಲಿ ಸುಪ್ರೀಂಕೋರ್ಟು ಇಡೀ ಪ್ರಕರಣವನ್ನು ಅಲಹಾಬಾದ್ ಹೈಕೋರ್ಟು ಒಂದೇ ಪ್ರಕರಣವೆಂದು ಭಾವಿಸಿ ತೀರ್ಪು ನೀಡಲು ಆದೇಶಿಸಿತು. ಅಲಹಾಬಾದ್‌ನ ಲಖನೌ ವಿಭಾಗದ ತ್ರಿಸದಸ್ಯ ಪೀಠ ಈ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡಿತು. 2000ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಕೇಂದ್ರ ಸರ್ಕಾರದ ಸುಪರ್ದಿಯಲ್ಲಿದ್ದ ಬಾಬ್ರಿ ಮಸೀದಿಯಿದ್ದ 2.7 ಎಕರೆ ಜಾಗದಲ್ಲಿ ಬಾಬ್ರಿ ಮಸೀದಿ ನಿರ್ಮಾಣಕ್ಕೂ ಮುಂಚೆ ಮಂದಿರವಿತ್ತೇ ಎಂದು ಅಧ್ಯಯನ ಮಾಡಲು ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾಗೆ ಆದೇಶಿಸಲಾಯಿತು. 2002ರಲ್ಲಿ ಅವರು ಆ ಜಾಗದಲ್ಲಿ ಉತ್ಖನನ ಪ್ರಾರಂಭಿಸಿ 2003ರಲ್ಲಿ ವರದಿ ಕೊಟ್ಟರು. ಆದರೆ ಉತ್ಖನನಕ್ಕೆ ಮತ್ತು ಅಧ್ಯಯನಕ್ಕೆ ಅವರು ಅನುಸರಿಸಿದ ಪದ್ಧತಿ ಮತ್ತು ತಲುಪಿದ ತೀರ್ಮಾನಗಳ ಬಗ್ಗೆ ದೇಶದ ಎಲ್ಲಾ ಪ್ರಮುಖ ಇತಿಹಾಸಕಾರರು ಮತ್ತು ಪರಿಣಿತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಆದರೂ ಕೋರ್ಟು ಆ ವರದಿಯನ್ನು ತನ್ನ ಪ್ರಮುಖ ಸಾಕ್ಷ್ಯವೆಂದು ಪರಿಗಣಿಸಿತು.

ಇದು ಇಲ್ಲಿಯವರೆಗಿದ್ದ ಅಯೋಧ್ಯಾ ಪ್ರಕರಣದ ಇತಿಹಾಸ. ಈ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಗೊಂಡ ತ್ರಿಸದಸ್ಯ ಪೀಠದ ನ್ಯಾಯಾಧೀಶರೆಂದರೆ ನ್ಯಾಯಮೂರ್ತಿ ಶರ್ಮಾ, ನ್ಯಾಯಮೂರ್ತಿ ಆಗರ್‌ವಾಲ್ ಮತ್ತು ನ್ಯಾಯಮೂರ್ತಿ ಎಸ್.ಯು. ಖಾನ್. ಈ ನ್ಯಾಯಪೀಠವು ಮೊದಲು ಪ್ರತಿ ಪ್ರಕರಣದಲ್ಲಿ ಯಾವ್ಯಾವ ವಿಷಯಗಳ ಬಗ್ಗೆ ತೀರ್ಮಾನ ಕೊಡಬೇಕಿದೆ ಎಂಬುದನ್ನು ಪಟ್ಟಿ ಮಾಡಿತು. ಅದರಂತೆ ವಿಶಾರದರ OS-1 ಪ್ರಕರಣದಲ್ಲಿ 17 ವಿಷಯಗಳನ್ನೂ, ನಿರ್ಮೋಹಿ ಅಖಾಡಾದ OS-3 ವಿಷಯದಲ್ಲಿ 17 ವಿಷಯಗಳನ್ನೂ, ಸುನ್ನಿ ವಕ್ಫ್ ಬೋರ್ಡಿನ OS-4 ಪ್ರಕರಣದಲ್ಲಿ 28 ಹಾಗೂ ಕೆಲವು ಉಪವಿಷಯಗಳನ್ನೂ, ಮತ್ತು ಭಗವಾನ್ ಶ್ರೀರಾಮ ವಿರಾಜಮಾನ್‌ರ OS-5 ಪ್ರಕರಣದಲ್ಲಿ 30 ವಿಷಯಗಳನ್ನು ಇತ್ಯರ್ಥ ಮಾಡಬೇಕಾಗಿದೆಯೆಂದೂ ನ್ಯಾಯಾಲಯ ಪಟ್ಟಿ ಮಾಡಿತು.

ಪಂಚಪ್ರಶ್ನೆಗಳೂ ಮತ್ತು ಪ್ರಶ್ನಾರ್ಹ ತೀರ್ಪುಗಳೂ

ಆದರೂ ಈ ಎಲ್ಲಾ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಐದಾರು ವಿಷಯಗಳು ಮಾತ್ರ ಪ್ರಮುಖವಾದದ್ದು. ಆದ್ದರಿಂದಲೇ ಕೋರ್ಟೂ ಸಹ ತನ್ನ ಬೃಹತ್ ತೀರ್ಪನ್ನು ಮಾಧ್ಯಮಗಳಿಗೆ ಹೇಳುವಾಗ ಈ ಐದಾರು ಪ್ರಮುಖ ವಿಷಯಗಳ ಬಗೆಗೇ ಒತ್ತುಕೊಟ್ಟಿದೆ. ಮಿಕ್ಕ ಎಲ್ಲಾ ತೀರ್ಮಾನಗಳನ್ನು ಈ ನೆಲೆಯಿಂದಲೇ ಮಾಡಲಾಗಿದೆ. ಹೀಗಾಗಿ ನ್ಯಾಯಾಲಯ ಇತ್ಯರ್ಥ ಮಾಡಿದ ಆ ಪ್ರಮುಖ ವಿಷಯಗಳು ಮತ್ತು ಆ ತೀರ್ಮಾನಕ್ಕೆ ಬರಲು ಅದು ಅನುಸರಿಸಿದ ಮಾನದಂಡಗಳನ್ನು ಗಮನಿಸುವುದು ಅತ್ಯಂತ ಮುಖ್ಯ. ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಮೂರೂ ಜನ ಬೇರೆಬೇರೆ ತೀರ್ಪು ಕೊಟ್ಟಿದ್ದರೂ ಸಾರಾಂಶದಲ್ಲಿ ಅವರು ನಡುವೆ ಸಾಮ್ಯತೆಗಳೂ ಇವೆ.



1. ವಿವಾದಿತ ಪ್ರದೇಶದ ಒಡೆತನ ಯಾರಿಗೆ ಸೇರಬೇಕು?

ತೀರ್ಪು: ಯಾವುದೇ ಸ್ಥಳದ ಒಡೆತನವು ವಿವಾದದಲ್ಲಿದ್ದು ಅಲ್ಲಿ ಮತ್ತೊಬ್ಬರು ಹಕ್ಕು ಸ್ಥಾಪಿಸಲು ಬಯಸಿದಲ್ಲಿ ಪ್ರಕರಣ ಬಯಲುಗೊಂಡ 12 ವರ್ಷಗಳ ಒಳಗೆ ದಾವೆಯನ್ನು ಹೂಡಬೇಕು. ಇಲ್ಲಿ ನಿರ್ಮೋಹಿ ಅಖ[illegible] ಹತ್ತಾರು ವರ್ಷದ ಕೆಳಗೇ ಪ್ರಾರಂಭವಾದರೂ ಪ್ರಕರಣ ದಾಖಲಿ[illegible] 1959ರಲ್ಲಿ, ಅದೇರೀತಿ ಪ್ರತಿಮೆಗಳನ್ನು 1949ರಲ್ಲೇ ಸ್ಥಾ[illegible] ಮುಸ್ಲಿಮರ ನಮಾಜಿಗೆ ಪ್ರತಿಬಂಧ ಹೂಡಿದ್ದರೂ ಅವರು [illegible] ಸಲ್ಲಿಸಿದ್ದು 1961ರಲ್ಲಿ. ಹೀಗಾಗಿ ಇಬ್ಬರ ದಾವೆಗಳು ಸಮಯಬಾ[illegible] ವಾದ್ದರಿಂದ ನಿರ್ಮೋಹಿ ಅಖಾಡಾ ಮತ್ತು ಸುನ್ನಿ ವಕ್ಫ್ ಬೋರ್ಡಿ[illegible] ದಾವೆಯನ್ನು ವಜಾ ಮಾಡಲಾಗಿದೆಯೆಂದು ಮೂರೂ [illegible] ನ್ಯಾಯಾಧೀಶರು ಆದೇಶ ನೀಡಿದ್ದಾರೆ. ಆದರೆ ಸುನ್ನಿ ವಕ್ಫ್ ಬೋ[illegible] ತನ್ನ ದಾವೆ ಸಲ್ಲಿಸಿದ್ದು 1961ರ ಡಿಸೆಂಬರ್ 18ರಂದು. ಪ್ರತಿಮೆ[illegible] ಸ್ಥಾಪನೆಯಾಗಿದ್ದು 1949ರ ಡಿಸೆಂಬರ್ 22ರಂದು. ಹೀಗೆ ಕೇ[illegible] ದಿನಗಳ ಲೆಕ್ಕಾಚಾರ ತೆಗೆದುಕೊಂಡರೂ ಸುನ್ನಿ ವಕ್ಫ್ ಬೋ[illegible] ದಾವೆ ಕಾಲಬಾಹಿರವಾಗುವುದಿಲ್ಲ!!

ಆದರೂ ನ್ಯಾಯಾಧೀಶರಾದ ಖಾನ್ ಮತ್ತು ಅಗರ್‌ವಾ[illegible] ರವರು ವಿವಾದಿತ ಜಾಗವನ್ನು ಮೂರು ಭಾಗ ಮಾಡಿ ರಾಮಲ[illegible] ನಿರ್ಮೋಹಿ ಅಖಾಡಾ ಮತ್ತು ಸುನ್ನಿ ಬೋರ್ಡಿಗೆ ತಲಾ ಮೂ[illegible] ಒಂದು ಭಾಗವನ್ನು ಹಂಚಬೇಕೆಂದು ಆದೇಶಿಸಿದ್ದಾರೆ. [illegible] ನ್ಯಾ. ಶರ್ಮ ಇಡೀ ಪ್ರದೇಶ ರಾಮಲಲ್ಲಾನಿಗೆ ಸೇರಬೇಕಿದ್ದರಿ[illegible] ಉಳಿದೆರಡು ಫಿರ್ಯಾದುದಾರರಿಗೆ ಜಾಗವನ್ನು ಹಂಚ[illegible] ನಿರಾಕರಿಸುತ್ತಾರೆ. ಆದರೆ ಮೂರು ಸದಸ್ಯರ ಪೀಠದಲ್ಲಿ ಇ[illegible] ಅಭಿಪ್ರಾಯವೇ ಬಹುಮತದ ಅಭಿಪ್ರಾಯವಾಗುತ್ತದಾದ್ದರಿ[illegible] ಅನುಷ್ಠಾನಕ್ಕೆ ತರಬೇಕಿರುವುದು ಬಹುಮತದ ತೀರ್ಮಾನವ[illegible]

2. ವಿವಾದಿತ ಜಾಗದಲ್ಲಿ 1528ರ[illegible] ಮಸೀದಿ ಕಟ್ಟುವ ಮುನ್ನ ರಾಮಮಂ[illegible]ವಿತ್ತೇ?

ತೀರ್ಪು: ಈ ವಿಷಯದ ಬಗ್ಗೆ ಮೇಲ್ನೋಟಕ್ಕೆ ಒಬ್ಬೊ[illegible] ನ್ಯಾಯಾಧೀಶರು ಒಂದೊಂದು ಬಗೆಯ ತೀರ್ಮಾನ ಕೊಟ್ಟಿ[illegible] ಎಂದು ಅನಿಸಿದರೂ ಸಾರಾಂಶ ಒಂದೇ ರೀತಿ ಇದೆ.

ನ್ಯಾ. ಖನ್ನಾರವರು ಇಲ್ಲಿ ಮಸೀದಿ ಕಟ್ಟುವ ಮ[illegible] ರಾಮಮಂದಿರವಿತ್ತು ಎಂದು ಹೇಳಲಾಗುವುದಿಲ್ಲ ಎಂ[illegible] ಅಭಿಪ್ರಾಯ ಪಡುತ್ತಾರೆ. ಆದರೆ ಆರ್ಕಿಯಾಲಾಜಿಕಲ್ ಸ[illegible] ಆಫ್ ಇಂಡಿಯಾ (ASI) ಕೊಟ್ಟ ವಿವಾದಾತ್ಮಕ ವರದಿ ವ[illegible] ತೀರ್ಮಾನಗಳನ್ನು ಪ್ರಶ್ನಿಸದೇ ಒಪ್ಪಿಕೊಳ್ಳುವ ನ್ಯಾ. ಖಾನ್‌ರ[illegible] ಮಸೀದಿಯ ಕೆಳಗೆ ಒಂದು ಬೃಹತ್ ಹಿಂದೂ ಧಾರ್ಮಿ[illegible] ಸ್ವರೂಪದ ಕಟ್ಟಡವಿತ್ತೆಂದು ಸರಿಯಾದ ಪುರಾವೆಯಿಲ್ಲದೇ ಒಪ್ಪಿಕೊಳ್ಳು[illegible] ಆದರೆ ಅದೇ ಸಮಯದಲ್ಲಿ ಅದು ರಾಮಮಂದಿರವೇ ಆಗಿತ್ತೆಂದೂ ಅ[illegible] ಅದನ್ನು ಕೆಡವಿಯೇ ಕಟ್ಟಲಾಗಿದೆಯೆಂದೂ ತೀರ್ಮಾನಕ್ಕೆ ಬರಲು ಆಗುವು[illegible]ವೆಂದು ಹೇಳುತ್ತಾರಾದರೂ ಅದು ಅಂತಿಮವಾಗಿ ತೀರ್ಪಿನ ಮೇಲೆ ಯಾವ[illegible] ಪರಿಣಾಮ ಬೀರುವುದಿಲ್ಲ. ನ್ಯಾ. ಅಗರ್‌ವಾಲ್‌ರವರೂ ಸಹ ASI ವರದಿಯ[illegible] ಯಥಾವತ್ ಒಪ್ಪಿಕೊಳ್ಳುತ್ತಾರೆ. ಹಾಗೂ ಮಸೀದಿಯನ್ನು ಅಸ್ತಿತ್ವದಲ್ಲಿದ್ದ ಬೃ[illegible] ಹಿಂದೂ ಧಾರ್ಮಿಕ ರಚನೆಯ ಮೇಲೆಯೇ ಕಟ್ಟಲಾಗಿದೆಯೆಂ[illegible] ಅಭಿಪ್ರಾಯಪಡುತ್ತಾರೆ. ನ್ಯಾ.ಶರ್ಮಾರಂತೂ ಬಿಡಿ. ವಿಶ್ವಹಿಂದೂ ಪರಿಷ[illegible] ಲಾಯರ್ ಹಾಗೂ ಬಿಜೆಪಿ ಮುಖಂಡ ರವಿಶಂಕರ್ ಪ್ರಸಾದ್ ಮುಂ[illegible] ವಾದವನ್ನು ಯಾವುದೇ ತಿದ್ದುಪಡಿಯಿಲ್ಲದೆ ಒಪ್ಪಿಕೊಳ್ಳುತ್ತಾರೆ. ಅವರ ಪ್ರ[illegible] ಅಲ್ಲಿ ಮಸೀದಿ ಕಟ್ಟುವ ಮುಂಚೆ ಸಾಕ್ಷಾತ್ ಶ್ರೀರಾಮ ಮಂದಿರವೇ ಅಸ್ತಿತ್ವದ[illegible] ಅದನ್ನು ಕೆಡವಿಯೇ ಬಾಬ್ರಿ ಮಸೀದಿಯನ್ನು ಕೆಡವಲಾಗಿದೆ. ಹೀಗೆ [illegible] ಶರ್ಮಾರ ಅತಿರೇಕದ ಅಭಿಪ್ರಾಯಗಳನ್ನು ಹೊರತುಪಡಿಸಿದರೂ ಉಳಿದ[illegible] ತೀರ್ಮಾನವೂ ಸಹ ಯಾವುದೇ ಸರಿಯಾದ ಪುರಾವೆಗಳ ಮೇಲೆ ನಿಂ[illegible]

ಮೊದಲನೆಯದಾಗಿ 1994ರಲ್ಲಿ ರಾಷ್ಟ್ರಪತಿಯವರು ಮಸೀದಿಯ [illegible] ರಾಮಮಂದಿರವಿತ್ತೇ ಎಂದು ಅಭಿಪ್ರಾಯ ತಿಳಿಸಲು ಕೋರಿದ[illegible] ಸುಪ್ರೀಂಕೋರ್ಟಿನ ಐದು ಜನರ ಪೀಠ ಕೋರ್ಟುಗಳು ಇಂಥಾ ವಿಷಯಗ[illegible] ಮಧ್ಯಪ್ರವೇಶ ಮಾಡಬಾರದೆಂದು ಅಷ್ಟು ಖಚಿತವಾಗಿ ಹೇಳಿದ್ದರೂ ಅದ[illegible] ನ್ಯಾಯಾಂಗದ ಶ್ರೇಣೀಕರಣದಲ್ಲಿ ಕೆಳಗಿರುವ ಮೂರು ಸದಸ್ಯರ ಹೈಕೋ[illegible] ಇದನ್ನು ಪರಿಗಣನೆಗೆ ತೆಗೆದುಕೊಂಡಿದ್ದೇ ಮೊದಲನೆ ತಪ್ಪು. ಅದರ [illegible] ತಮಗೆ ಯಾವುದೇ ಪರಿಣಿತಿ ಇಲ್ಲದಿದ್ದರೂ ಅದರ ಬಗ್ಗೆ ವ್ಯಾಖ್ಯಾನ [illegible] ತೀರ್ಪು ನೀಡಿದ್ದು ಎರಡನೇ ಮಹಾಪರಾಧ!

ಮೂರನೆಯದಾಗಿ ASI ನೀಡಿದ ವರದಿ ಮತ್ತು ಉತ್ಖನನ ವ[illegible] ಸಂಶೋಧನೆಗೆ ಅದು ಅನುಸರಿಸಿದ ಮಾರ್ಗದ ಬಗ್ಗೆ ಇತಿಹಾಸಕಾರರು ವ[illegible] ಸಂಶೋಧಕರು ಹಲವಾರು ಆಕ್ಷೇಪಣೆಗಳನ್ನು ಸಲ್ಲಿಸಿದ್ದರು. ASI ಅ[illegible] ಹೊರ ಆವರಣದಲ್ಲಿ ಪಾಳು ಬಿದ್ದಿದ್ದ ಇಟ್ಟಿಗೆಗಳನ್ನೆಲ್ಲಾ ಒಟ್ಟು ಸೇರಿಸಿ ಪಿ[illegible] ಸ್ವರೂಪದ ರಚನೆ ಇತ್ತೆಂದು ಸಾಬೀತುಮಾಡಲು ನ[illegible] ಪ್ರಯತ್ನ ಮತ್ತು ಅದರ ಹಿಂದಿನ ಉದ್ದೇಶಗಳ [illegible] ಕೆಲವು ಇತಿಹಾಸಕಾರರು ಸುಪ್ರೀಂ ಕೋರ್ಟಿ[illegible]ದೂರು ಸಲ್ಲಿಸಿದ್ದರು. ಅಲ್ಲದೆ ಉತ್ಖನನದಲ್ಲಿ [illegible] ಅವಶೇಷಗಳ ಕಾಲಾವಧಿಯನ್ನು ನಿರ್ಧಾರ ಮಾ[illegible] ASI ಅನುಸರಿಸಿದ ಮಾದರಿ ಅತ[illegible] ಕಳಪೆಯಾಗಿದೆಯೆಂದು ನ್ಯಾಯಾಲಯಗಳ ಗಮನ[illegible] ತರಲಾಗಿತ್ತು.

ಆದರೂ ಈ ಉತ್ಖನನವನ್ನು ಆಧರಿಸಿ [illegible] ಅವರು ನೀಡಿದ ವರದಿ ಇನ್ನೂ ಹಾಸ್ಯಾಸ್ಪದವಾ[illegible] ವಾಸ್ತವವಾಗಿ ಇದನ್ನು ಕಂಡು ರೋಸಿಹೋಗಿದ್ದ[illegible] ದೇಶದ ಗಣ್ಯಾತಿಗಣ್ಯ ಇತಿಹಾಸಕಾರರಾದ ಸೂ[illegible] ಭಾನ್, ಡಿ.ಎಮ್.ಝಾಮ್, ಆರ್.ಎಸ್. ಶ[illegible] ಮತ್ತು ಅಲಿ ಯವರು ಆ ಉತ್ಖನನದ ವರ[illegible] ಬಗ್ಗೆ ತಮ್ಮ ಅಭಿಪ್ರಾಯ ನೀಡಲು ಅವಕಾಶ ಕೊಡಬೇಕೆಂದು ಕೋರಿ[illegible] ಅದಕ್ಕೆ ಪ್ರತಿವಾದಿಗಳಾಗಿದ್ದ ಮುಸ್ಲಿಂ ಸಂಘಟನೆಗಳೂ ಒಪ್ಪಿಕೊಂಡಿದ್ದವು. [illegible] ಸರ್ಕಾರ ಅದರ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ತೋರಿತು. ಆದರೂ [illegible] ಇತಿಹಾಸಕಾರರು ದೇಶದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು "ದೇಶಕೊ[illegible] ಇತಿಹಾಸಕಾರರ ವರದಿ"ಯನ್ನು ನೀಡಿದರು. ಅದರಲ್ಲಿ ಅವರು ಆ ಆವರ[illegible] ದೊರೆತ ಅವಶೇಷಗಳಲ್ಲಿ ಬಳಸಿರುವ ಸುರ್ಕಿ, ಪಿಲ್ಲರ್ ತರಹ ಕಾ[illegible]

> 1994ರಲ್ಲಿ ರಾಷ್ಟ್ರಪತಿಯವರು ಮಸೀದಿಯ ಕೆಳಗೆ ರಾಮಮಂದಿರವಿತ್ತೇ ಎಂದು ಅಭಿಪ್ರಾಯ ತಿಳಿಸಲು ಕೋರಿದಾಗ ಸುಪ್ರೀಂಕೋರ್ಟಿನ ಐದು ಜನರ ಪೀಠ ಕೋರ್ಟುಗಳು ಇಂಥಾ ವಿಷಯಗಳಲ್ಲಿ ಮಧ್ಯಪ್ರವೇಶ ಮಾಡಬಾರದೆಂದು ಅಷ್ಟು ಖಚಿತವಾಗಿ ಹೇಳಿದ್ದರೂ ಅದಕ್ಕಿಂತ ನ್ಯಾಯಾಂಗದ ಶ್ರೇಣೀಕರಣದಲ್ಲಿ ಕೆಳಗಿರುವ ಮೂರು ಸದಸ್ಯರ ಹೈಕೋರ್ಟು ಇದನ್ನು ಪರಿಗಣನೆಗೆ ತೆಗೆದುಕೊಂಡಿದ್ದೇ ಮೊದಲನೆ ತಪ್ಪು?

ು ವಾಸ್ತವವಾಗಿ ಪಿಲ್ಲರ್‌ಗಳಲ್ಲ ಎಂಬುದನ್ನು ಮತ್ತು ಇನ್ನಿತರ ಹಲವಾರು ಗಳನ್ನು ತೋರಿಸಿ ಅದು ಇಸ್ಲಾಮಿಕ್ ಕಟ್ಟಡವೇ ವಿನಃ ಮಂದಿರವಾಗಿರ ಎಂದು ಸಾಬೀತು ಪಡಿಸಿದ್ದರು. ಅದನ್ನು ಕೋರ್ಟಿಗೂ ಸಲ್ಲಿಸಿದ್ದರು. ಲೀನ ಭಾರತದ ಬಗ್ಗೆ ಅಧಿಕೃತ ಆಕರವೆಂದೇ ಪ್ರಸಿದ್ಧರಾಗಿರುವ ಖ್ಯಾತ ತಜ್ಞ ಇರ್ಫಾನ್ ಹಬೀಬರ ಪ್ರಕಾರವಂತೂ ಬಾಬ್ರಿ ಮಸೀದಿಯನ್ನು ಪತನಗೊಂಡಿದ್ದ ದರ್ಗಾ ಅಥವಾ ಮಸೀದಿಯ ಅವಶೇಷಗಳ ಕಟ್ಟಲಾಗಿದೆ. ಆದರೂ ಕೋರ್ಟು ವಿವಾದಾಸ್ಪದವಾದ ASI ವರದಿಯನ್ನು ಯಥಾವತ್ ಒಪ್ಪಿಕೊಂಡಿತು? ಅದರ ಆಧಾರದಲ್ಲಿ ಹೇಗೆ ಮಸೀದಿಯ ಂದೂ ಧಾರ್ಮಿಕ ರಚನೆಯೋ ಅಥವಾ ನ್ಯಾ.ಶರ್ಮಾ ಹೇಳುವಂತೆ ಮಂದಿರವೋ ಇತ್ತು ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಾಯಿತು? ಒಂದೇ ಕಾರಣವೆಂದರೆ ಮೊದಲಿಂದಲೂ ಈ ನ್ಯಾಯಾಧೀಶರುಗಳು ಜನರ ನಂಬಿಕೆ ಮತ್ತು ಶ್ರದ್ಧೆಗಳಿಗೆ ಸಾಕ್ಷಿಪುರಾವೆಗಳಿಗಿಂತ ಹೆಚ್ಚಿನ ನ್ನು ಕೊಡುತ್ತಾ ಬಂದಿದ್ದೇ ನ್ಯಾಯಕ್ಕೆ ಈ ರೀತಿ ಘೋರ ಅಪಚಾರವಾಗಲು ಾಯಿತು.

ವಿವಾದಿತ ಸ್ಥಳದಲ್ಲಿ ಮುಸ್ಲಿಮರು ಬಹಳ ಹಿಂದಿನಿಂದಲೂ ಪ್ರಾರ್ಥನೆ ಸಲ್ಲಿಸುತ್ತಾ ಬಂದಿದ್ದಾರೆಯೆ? ಅಲ್ಲಿದ್ದ ಕಟ್ಟಡವನ್ನು ಮಸೀದಿಯೆಂದು ಪರಿಗಣಿಸಬಹುದೇ?

ರ್ಪು: ಇದರ ಬಗ್ಗೆ ನ್ಯಾ.ಶರ್ಮಾರಂತೂ ಒಂದೇ ಉಸಿರಿನಲ್ಲಿ ಬಲ್‌ಕುಲ್ ಮಸೀದಿಯಾಗಿರಲಿಲ್ಲವೆಂದೂ ತೀರ್ಪಿತ್ತಿದ್ದಾರೆ. ಅವರ ಪ್ರಕಾರ ಮಂದಿರವನ್ನು ಮಸೀದಿಯನ್ನು ಕಟ್ಟಲಾಗಿದೆಯಾದ್ದರಿಂದ ಅದು ಇಸ್ಲಾಮಿಕ್ ಪದ್ಧತಿಯ ಮಸೀದಿ ಎನಿಸಿಕೊಳ್ಳುವುದಿಲ್ಲ. ಆದರೆ ನ್ಯಾ.ಖಾನ್ ಮತ್ತು ನ್ಯಾ. ಾಲ್ ಅವರು ಅದು ಮಸೀದಿಯೇ ಎಂದೂ, ಅಲ್ಲಿ 1949ರ ತನಕ ರು ನಮಾಜು ಮಾಡುತ್ತಿದ್ದರೆಂದು ಒಪ್ಪಿಕೊಳ್ಳುತ್ತಾರೆ. ಆದರೆ 1949ರಿಂದ ಮರನ್ನು ನಮಾಜು ಮಾಡದಂತೆ ತಡೆದದ್ದು ಸರ್ಕಾರ ಮತ್ತು ಲಯವೇ ಎನ್ನುವುದನ್ನು ನ್ಯಾಯಾಲಯ ಪರಿಗಣನೆಗೇ ತೆಗೆದುಕೊಂಡಿಲ್ಲ. ಹೇಗಿದ್ದರೂ ಈಗ ಅಲ್ಲಿ ಮುಸ್ಲಿಮರು ಹಲವು ದಶಕಗಳಿಂದ ಸಲ್ಲಿಸುತ್ತಿಲ್ಲವಾದ್ದರಿಂದ ಅದನ್ನು ಈಗ ಮಸೀದಿಯೆಂದು ಪರಿಗಣಿಸಲು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

1949ರ ಡಿಸೆಂಬರ್ 22-23ರ ಮಧ್ಯರಾತ್ರಿ ರಾಮ ಪ್ರತಿಮೆಗಳನ್ನು ವಿವಾದಿತ ಸ್ಥಳದಲ್ಲಿ ಸ್ಥಾಪಿಸಲಾಯಿತೋ? ಅಥವಾ ಅದು ಅನೂಚಾನ ಕಾಲದಿಂದಲೂ ಅಲ್ಲೇ ಇದೆಯೋ?

ರ್ಪು: ಈ ಪ್ರಶ್ನೆಗೆ ಮಾತ್ರ ಮೂರೂ ಜನ ನ್ಯಾಯಾಧೀಶರು ಡಿಸೆಂಬರ್ ತ್ರಿಯೇ ಅಲ್ಲಿ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆಯೆಂದು ಒಪ್ಪಿಕೊಳ್ಳುತ್ತಾರೆ. ರೆ ಅಲ್ಲಿ ಪ್ರತಿಮೆಗಳನ್ನು ತಂದಿಟ್ಟವರು ಯಾರು? ಅವರ ಮೇಲೆ ೇನು? ಪ್ರತಿಮೆ ತಂದಿಟ್ಟಿದ್ದ ಕಾರಣಕ್ಕಾಗಿ ಅಲ್ಲಿ ನಮಾಜು ಮಾಡುವ ಕಳೆದುಕೊಂಡ ಮುಸ್ಲಿಮರಿಗೆ ಪರಿಹಾರವೇನು? ಈಗಲಾದರೂ ಆ ಯನ್ನು ಅಲ್ಲಿಯೇ ಇರಗೊಡಬೇಕೆ? ತೆಗೆಯಬೇಕೆ? ಈ ಯಾವ ಗೂ ನ್ಯಾಯಾಲಯ ನ್ಯಾಯಬದ್ಧ ತೀರ್ಮಾನ ನೀಡುವುದಿಲ್ಲ. ಬದಲಿಗೆ ರಣವನ್ನು ಸಹ ಈ ಜಾಗವು ರಾಮಜನ್ಮಸ್ಥಾನವೇ ಎಂಬ ವಾದವನ್ನು ಳ್ಳಲು ಕಾರಣವೆಂಬಂತೆ ಬಳಸಿಕೊಳ್ಳುತ್ತವೆ.

ಈ ಪ್ರದೇಶವು ರಾಮನ ಜನ್ಮಸ್ಥಾನವೇ? ಈ ಜಾಗವನ್ನು ಹಿಂದೂಗಳು ರಾಮ ಜನ್ಮಭೂಮಿ ಎಂದು ಪರಿಭಾವಿಸಿ ಅನೂಚಾನ ಕಾಲದಿಂದಲೂ ಪ್ರಾರ್ಥನೆ ಮಾಡುತ್ತಾ ಬಂದಿದ್ದಾರೆಯೇ?

ರ್ಪು: ಪ್ರಾಯಶಃ ಈ ಪ್ರಶ್ನೆಗೆ ಕೋರ್ಟು ನೀಡಿರುವ ತೀರ್ಪು ಮತ್ತು ರ್ಮಾನಕ್ಕೆ ಬರಲು ಅದು ಅನುಸರಿಸಿರುವ ಮಾನದಂಡಗಳು ಈ ಜನತೆ ನ್ಯಾಯಾಂಗದ ಬಗ್ಗೆ ಇಟ್ಟಿರುವ ವಿಶ್ವಾಸವನ್ನೇ ಕಳೆದುಕೊಳ್ಳುವಂತೆ ಸೆ.

ಶರ್ಮಾ ಅವರ ಪ್ರಕಾರ ಅಲ್ಲಿ ರಾಮ ಜನ್ಮ ತಾಳಿದ್ದು ನೂರಕ್ಕೆ ನಿಜ. ಏಕೆಂದರೆ ಹಲವಾರು ಪುರಾಣಗಳಲ್ಲಿ ಅಯೋಧ್ಯೆಯಲ್ಲಿ ರಾಮ ಳೆದ ಎಂಬ ಉಲ್ಲೇಖವಿದೆ. ಅಂದರೆ ಪ್ರಪ್ರಥಮ ಬಾರಿಗೆ ಒಂದು ಜಾಗದ ಧಾರ್ಮಿಕತೆಯನ್ನು ನಿರ್ಧರಿಸಲು ನ್ಯಾಯಾಲಯ ಾವೆಗಳನ್ನು ಬಿಟ್ಟು ಪುರಾಣಗಳನ್ನು ಸಾಕ್ಷ್ಯವಾಗಿಯೇ ಪರಿಗಣಿಸಿದೆ. ಮಾತ್ರವಲ್ಲ, ನ್ಯಾ. ಶರ್ಮಾರವರ ಪ್ರಕಾರ ಹಿಂದೂ ಧರ್ಮದ ಪ್ರಕಾರ ಒಂದು ಸ್ಥಳದಲ್ಲಿದ್ದಾನೆ ಎಂದು ಭಾವಿಸಿದರೆ ಸಾಕು ದೇವರು ಅಲ್ಲಿರುತ್ತಾನೆ. ರಾಮನು ಬಾಬ್ರಿ ಮಸೀದಿಯಿದ್ದ ಜಾಗದಲ್ಲೇ ಜನ್ಮ ತಳೆದದ್ದು ಎಂಬ ನಕ್ಕೆ ಬರಲು ಯಾವ ಪುರಾವೆಯೂ ಬೇಕಿಲ್ಲ. ಅಷ್ಟು ಮಾತ್ರವಲ್ಲ ಡಿಸೆಂಬರ್ ಮಧ್ಯರಾತ್ರಿಯವರೆಗೆ ಅಲ್ಲಿ ರಾಮನ ಪ್ರತಿಮೆ ಇರಲಿಲ್ಲ ಮ ಸಾಬೀತಾಗಿರುವಾಗ ಹಿಂದಿನಿಂದಲೂ ರಾಮಮಂದಿರವಾಗಿತ್ತು ಎಂಬ ನಕ್ಕೆ ಹೇಗೆ ಬರಲು ಸಾಧ್ಯ ಎಂಬ ಪ್ರಶ್ನೆಗೆ ನ್ಯಾ. ಶರ್ಮಾ ಅವರು ಧರ್ಮದ ಪ್ರಕಾರ ದೇವನನ್ನು ಹೇಗೆ ಬೇಕಾದರೂ ಉಪಾಸನೆ ಹುದು, ಪ್ರತಿಮೆಯ ಅಗತ್ಯವೇ ಇಲ್ಲ ಎಂಬ ಉತ್ತರ ಕೊಡುತ್ತಾರೆ. ಒಂದು ವಿತಂಡ ವಾದದಂತೆ ಕಾಣುವ ಈ ತೀರ್ಪನ್ನು ನೀಡಿರುವುದು ಅಂಚಿನಲ್ಲಿದ್ದ ಹೈಕೋರ್ಟಿನ ಹಿರಿಯ ನ್ಯಾಯಾಧೀಶರೇ!

ಅಗರವಾಲ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಾರೆ. ಾಮ ಹುಟ್ಟಿದ್ದನೋ ಇಲ್ಲವೋ ಎಂಬ ಬಗ್ಗೆ ಮತ್ತು ಹಿಂದೂಗಳು ಧ್ಯೆಯನ್ನು ರಾಮ ಜನ್ಮಭೂಮಿ ಎಂದು ಭಾವಿಸುತ್ತಾರೋ ಇಲ್ಲವೋ ಬಗ್ಗೆ ಅವರು 700ಕ್ಕೂ ಹೆಚ್ಚು ವೇದ ಗ್ರಂಥಗಳನ್ನು ಅಧ್ಯಯನ ಾರಂತೆ. ಅದಕ್ಕಾಗಿ ತಮ್ಮ ತೀರ್ಪಿನಲ್ಲಿ 5000ಕ್ಕೂ ಹೆಚ್ಚು ಪುಟಗಳನ್ನೂ ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿ ಅವರು ಬಂದು ತಲುಪುವ ಸವೇನು?

ಂದೂ ಧಾರ್ಮಿಕ ಪದ್ಧತಿಯ ಪ್ರಕಾರ ಒಂದು ಜಾಗದಲ್ಲಿ ರಾಮನಿದ್ದಾನೋ ಎಂಬ ನಿರ್ಣಯಕ್ಕೆ ಬರಲು ಪ್ರಧಾನವಾಗಿ ಪರಿಗಣಿಸಬೇಕಾದ್ದು ನಂಬಿಕೆಯನ್ನಂತೆ. ಆ ನಂಬಿಕೆಯೇ ಅವರ ಧರ್ಮದ ಅಂತರ್ಗತ ಭಾಗವೂ ಆಗಿಬಿಡುತ್ತದಂತೆ. 'ಆಗ ಅದು ಸಂವಿಧಾನದ ಆರ್ಟಿಕಲ್ 25 ಕೊಡುವ ಧಾರ್ಮಿಕ ಆಚರಣೆಯ ಹಕ್ಕಿನ ಪ್ರಶ್ನೆಯೂ ಆಗಿಬಿಡುತ್ತದಂತೆ. ಅಂದರೆ ರಾಮನು ಬಾಬ್ರಿ ಮಸೀದಿಯಲ್ಲಿ ಇರುವ ಜಾಗದಲ್ಲಿ ಜನ್ಮ ತಳೆದಿದ್ದ ಎಂಬ ನಂಬಿಕೆ ಹಿಂದೂ ಧರ್ಮದ ಅಂತರ್ಭಾಗವಾಗಿ ಬಿಡುತ್ತದೆ. ಆಗ ಬಾಬ್ರಿ ಮಸೀದಿಯಲ್ಲಿ ರಾಮ ಪೂಜೆ ಮಾಡುವುದು ಹಿಂದೂಗಳ ಧಾರ್ಮಿಕ ಹಕ್ಕಿನ ಭಾಗವೇ ಆಗಿಬಿಡುತ್ತದೆ ಎಂಬುದು ಅಗರ್‌ವಾಲ್ ಅವರ ವಾದ. ಅವರ ಪ್ರಕಾರ ಇಂಥಾ ನಂಬಿಕೆಯನ್ನು ಪ್ರಶ್ನಿಸಲಾಗುವುದಿಲ್ಲ. ಅಂಥಾ ಪ್ರಶ್ನೆ ಕೇಳುವುದರ ಬಗ್ಗೆಯೇ ನ್ಯಾ. ಅಗರ್‌ವಾಲರು ಕಿಡಿಕಾರುತ್ತಾರೆ. ಅದೇ ಪ್ರಶ್ನೆಯನ್ನು ಪೈಗಂಬರರ ಬಗ್ಗೆ ಮತ್ತು ಕ್ರಿಸ್ತನ ಬಗ್ಗೆ ಏಕೆ ಕೇಳುವುದಿಲ್ಲ ಎಂದು ವಕೀಲರಂತೆ ಪಾಟಿ ಸವಾಲು ಹಾಕುತ್ತಾರೆ. ಹೀಗಾಗಿ ವಿವಾದಾಸ್ಪದವಾದ ಜಾಗವೊಂದು ಹಿಂದೂಗಳಿಗೆ ಸೇರಬೇಕೋ ಅಥವಾ ಮುಸ್ಲಿಮರಿಗೆ ಸೇರಬೇಕೋ ಎಂಬ ಬಗ್ಗೆ ನ್ಯಾಯಾಲಯ ಪ್ರಕಾರ ಸಾಕ್ಷಿ ಪುರಾವೆಗಳಿಗಿಂತ ಪ್ರಮುಖವಾಗುವುದು ಬಹುಸಂಖ್ಯಾತರ ಶ್ರದ್ಧೆ ಮತ್ತು ನಂಬಿಕೆ. ಇದರ ಪರಿಣಾಮವೇನೆಂದು ನಂತರ ಚರ್ಚಿಸೋಣ. ಈಗ ಈ ತರ್ಕವಾದರೂ ಸರಿಯಿದೆಯೇ ಎಂದು ಪರಿಶೀಲಿಸೋಣ.

ನ್ಯಾ. ಅಗರ್‌ವಾಲರು ಉದ್ಧರಿಸಿರುವ ಗ್ರಂಥಗಳೆಲ್ಲಾ ಹಿಂದೂ ಜನರ ನಂಬಿಕೆಯನ್ನು ಪ್ರತಿಪಾದಿಸುವ ಹೇಳಿಕೆಗಳೇ ಹೊರತು ಅವು ಐತಿಹಾಸಿಕ ಸಾಕ್ಷ್ಯಾಧಾರಗಳಲ್ಲ. ಅವು ಒಂದು ರೂಲ್ ಆಫ್ ಲಾ- ಎಲ್ಲರಿಗೂ ಒಂದೇ ಕಾನೂನು- ಎಂಬ ನಿಯಮಾನುಸಾರ ನಡೆಯುವ ಆಧುನಿಕ ಪ್ರಜಾಪ್ರಭುತ್ವದಲ್ಲಿ ಸಾಕ್ಷ್ಯಗಳಾಗುವುದಿಲ್ಲ. ಎರಡನೆಯದಾಗಿ ರಾಮನು ಹಿಂದೂ ಧರ್ಮದ ಅಂತರ್ಗತ ಭಾಗವೆಂಬುದಕ್ಕೆ ಯಾವ ಧಾರ್ಮಿಕ ಪುರಾವೆಗಳನ್ನು ನ್ಯಾಯಾಧೀಶರು ಪರಿಗಣಿಸಿದ್ದಾರೆ? ಅದೂ ಸಹ ಒಂದು ನಂಬಿಕೆಯಷ್ಟೆ. ಏಕೆಂದರೆ ಹಿಂದೂ ಧರ್ಮದವರೆಂದು ಪರಿಗಣಿಸಲಾಗುವ ಬಹುಸಂಖ್ಯಾತ ಜನರಿಗೆ ರಾಮ ದೇವರಲ್ಲ. ದಲಿತರಂತೂ ತಮ್ಮನ್ನು ಹಿಂದುಗಳೇ ಅಲ್ಲವೆಂದು ಪರಿಗಣಿಸಿಕೊಳ್ಳುತ್ತಾರೆ. ಹಾಗಿದ್ದ ಮೇಲೆ ರಾಮನ ಕಲ್ಪನೆ ಬಹುಸಂಖ್ಯಾತ ಹಿಂದೂಗಳ ಧಾರ್ಮಿಕ ನಂಬಿಕೆಯ ಅಂತರ್ಗತ ಭಾಗ ಎಂಬ ತೀರ್ಮಾನಕ್ಕೆ ಬರಲು ಹೇಗೆ ಸಾಧ್ಯ? ಅದು ಒಂದು ಸ್ಥಳದ ಧಾರ್ಮಿಕ ಸ್ವರೂಪದ ಬಗ್ಗೆ ವಿವಾದವಿದ್ದಾಗ ಯಾವ ತಳಹದಿಯೂ ಇಲ್ಲದೆ ಇಂಥ ವಿವಾದಾತ್ಮಕ ತೀರ್ಮಾನಕ್ಕೆ ಹೇಗೆ ಬರಲು ಸಾಧ್ಯ? ಅತಿ ಮುಖ್ಯವಾಗಿ ಉಲ್ಲೇಖಗೊಂಡಿರುವ ಪುರಾಣಗಳು ರಾಮನ ಜನ್ಮಸ್ಥಾನ ಅಯೋಧ್ಯೆಯೇ ಎಂದು ಹೇಳುತ್ತವೆಯೇ ವಿನಃ, ಬಾಬ್ರಿ ಮಸೀದಿ ಇದ್ದ 115x95 ಅಡಿ ವಿಸ್ತೀರ್ಣದಲ್ಲಿ ರಾಮ ಜನ್ಮ ತಳೆದ ಎಂದೇನೂ ಹೇಳುವುದಿಲ್ಲ. ಇತಿಹಾಸಕಾರರು ಹೇಳುವಂತೆ ಬಾಬ್ರಿ ಮಸಿದಿಯೇ ರಾಮ ಜನ್ಮಭೂಮಿ ಎಂಬ ನಂಬಿಕೆ ಬ್ರಿಟಿಷರ ನಂತರದ್ದು.

ಹೀಗಿರುವಾಗ ಯಾವ ಕಾನೂನು, ಸಾಕ್ಷ್ಯ, ಪುರಾವೆ, ಸಂವಿಧಾನಿಕ ಮೌಲ್ಯಗಳ ಆಧಾರದಲ್ಲಿ ಬಾಬ್ರಿ ಮಸೀದಿಯಲ್ಲೇ ರಾಮಜನ್ಮಭೂಮಿ ಇದೆಯೆಂಬ ನಿರ್ಣಯಕ್ಕೆ ಬರಲು ಸಾಧ್ಯ?

ಪ್ರಾಯಶಃ ಸ್ವತಂತ್ರ ಭಾರತದಲ್ಲಿರಲಿ ಬ್ರಿಟಿಷ್ ಭಾರತವೂ ಸಹ ಈ ರೀತಿ ಒಂದು ಸಿವಿಲ್ ವಿವಾದವನ್ನು ಬಗೆಹರಿಸಲು ಬಹುಸಂಖ್ಯಾತರ ನಂಬಿಕೆ ಮತ್ತು ಶ್ರದ್ಧೆಯನ್ನು ಏಕೈಕ ಮಾನದಂಡವಾಗಿ ಪರಿಗಣಿಸಿರಲಿಲ್ಲ. ಉದಾಹರಣೆಗೆ 1886ರಲ್ಲಿ ಇದೇ ವಿವಾದವನ್ನು ಬಗೆಹರಿಸುತ್ತಾ ಬ್ರಿಟಿಷ್ ನ್ಯಾಯಾಧೀಶ ಯಂಗ್ ಹೇಳಿದ್ದು "ಹಿಂದೂಗಳ ನಂಬಿಕೆಯ ಪ್ರಕಾರ ಇಲ್ಲಿ ಮಂದಿರವನ್ನು ಕೆಡವಿ ಮಸೀದಿಯನ್ನು ಕಟ್ಟಿರುವುದು ನಿಜವೇ ಎಂದಿಟ್ಟುಕೊಂಡರೂ 350 ವರ್ಷಗಳ ಕೆಳಗೆ ಆಗಿಹೋಗಿರುವ ವಿಷಯಕ್ಕೆ ಈಗ ನ್ಯಾಯ ಒದಗಿಸಲು ಸಾಧ್ಯವಿಲ್ಲ". ಅದೇರೀತಿ ಲಾಹೋರಿನಲ್ಲಿ 18ನೇ ಶತಮಾನದಲ್ಲಿ ಇದ್ದ ಮಸೀದಿಯನ್ನು ಸಿಖ್ ಆಡಳಿತದಲ್ಲಿ ಗುರುದ್ವಾರವಾಗಿ ಪರಿವರ್ತನೆಗೊಂಡಿತ್ತು. ಅದನ್ನು ತಮಗೆ ಮರಳಿಸಬೇಕೆಂಬ ದೂರನ್ನು ಮುಸ್ಲಿಮರು ಪ್ರಿವೀ ಕೌನ್ಸಿಲ್‌ಗೆ ಒಯ್ದಾಗಲೂ ಇತಿಹಾಸದಲ್ಲಿ ಆದ ಸಂಗತಿಗಳಿಗೆ ಈಗ ಪರಿಹಾರ ಒದಗಿಸಲು ಸಾಧ್ಯವಿಲ್ಲವೆಂದು ತೀರ್ಮಾನವಾಗಿತ್ತು. ಆ ಗುರುದ್ವಾರ ಈಗಲೂ ಪಾಕಿಸ್ತಾನದಲ್ಲಿ ನಾಶಗೊಳ್ಳದೆ ಅಸ್ತಿತ್ವದಲ್ಲಿದೆ.

ಆದರೆ ಒಂದು ಆಧುನಿಕ ಪ್ರಜಾಪ್ರಭುತ್ವದ ಸೆಕ್ಯುಲಾರ್ ಸಂವಿಧಾನದ ಆಧಾರದಲ್ಲಿ ನಡೆಯುವ ದೇಶವೊಂದರ ನ್ಯಾಯಾಲಯ 60 ವರ್ಷಗಳ ನಂತರ ನೀಡುವ ತೀರ್ಪಿಗೆ ಪ್ರಧಾನವಾಗಿ ಆಧರಿಸುವುದು ಬಹುಸಂಖ್ಯಾತರೆಂದು ಹೇಳಿಕೊಳ್ಳುವ ಕೂಗುಮಾರಿಗಳ ನಂಬಿಕೆ ಮತ್ತು ಶ್ರದ್ಧೆಗಳನ್ನು!

ಹೀಗೆ ಸಾಕ್ಷಿ, ಪುರಾವೆ ಮತ್ತು ಕಾನೂನುಗಳನ್ನೆಲ್ಲಾ ಪರಿಗಣಿಸದೆ ಕೇವಲ ಬಹುಸಂಖ್ಯಾತರೆಂದು ಹೇಳಿಕೊಳ್ಳುವವರ ಶ್ರದ್ಧೆ ಮತ್ತು ನಂಬಿಕೆಗಳೇ ನ್ಯಾಯ ತೀರ್ಮಾನದ ಮಾನದಂಡವಾಗಿಬಿಟ್ಟರೆ ಬಹುಸಂಸ್ಕೃತಿ ಮತ್ತು ಬಹು ಧರ್ಮೀಯರ ದೇಶವಾದ ಈ ಭಾರತ ಒಂದು ದೇಶವಾಗಿ ಉಳಿಯಲು ಸಾಧ್ಯವೇ?


ಇತಿಹಾಸದ ಭೂತ ಭವಿಷ್ಯದ ಬೆನ್ನು ಬಿಡದ ಹೊರತು!

1947ಕ್ಕೂ ಹಿಂದೆ ಈ ದೇಶದಲ್ಲಿ ಧರ್ಮಗಳ ನಡುವೆ, ಶ್ರದ್ಧೆಗಳ ನಡುವೆ ಸಾಕಷ್ಟು ಕಲಹಗಳು ನಡೆದುಹೋಗಿವೆ. 47ರ ಆಗಸ್ಟ್ 15ರ ನಂತರ ಈ ದೇಶದ ನಾಗರಿಕರೂ ಸಮಾನತೆ ಮತ್ತು ಭ್ರಾತೃತ್ವದಿಂದ ಬಾಳಲು ಸಂಕಲ್ಪ ತೊಟ್ಟಿದ್ದೇವೆ. ಆದುದರಿಂದ ಇತಿಹಾಸಗಳ ಸಂಗತಿಗಳನ್ನು ಇತಿಹಾಸಕ್ಕೆ ಬಿಟ್ಟು ಹೊಸದಾಗಿ ಬದುಕು ಕಟ್ಟುವ ಭವಿಷ್ಯ ಮುಖಿ ರಾಜಕೀಯ ಮತ್ತು ನ್ಯಾಯಸಂಹಿತೆ ಇಂದಿನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ 1991ರಲ್ಲಿ ಸಂಸತ್ತಿನಲ್ಲಿ place of worship (special provisions) act-1991 ಎಂಬ ಕಾಯಿದೆ ಜಾರಿಗೆ ಬಂದಿದೆ. ಇದರ ಪ್ರಕಾರ ಈ ದೇಶದಲ್ಲಿ ಯಾವುದೇ ಶ್ರದ್ಧಾ ಕೇಂದ್ರಗಳ ಬಗ್ಗೆ ವಿವಾದವಿದ್ದರೂ ಆ ಶ್ರದ್ಧಾ ಕೇಂದ್ರಗಳನ್ನು 1947ರ ಆಗಸ್ಟ್ 15ರಂದು ಯಾವ ಸ್ಥಿತಿಯಲ್ಲಿತ್ತೋ, ಯಾವ ಧಾರ್ಮಿಕ ಸ್ವರೂಪದಲ್ಲಿತ್ತೋ ಅದೇ ಯಥಾಸ್ಥಿತಿಯನ್ನು ಕಾಯ್ದುಕೊಂಡು ಬರಬೇಕೆಂದು ನಿರ್ದೇಶಿಸಲಾಗಿದೆ. ದುರದೃಷ್ಟವಶಾತ್ ಬಾಬರಿ ಮಸೀದಿ ವಿವಾದವೊಂದನ್ನು ಈ ಕಾಯಿದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

1947ರ ಹಿಂದಿನ ಇತಿಹಾಸವನ್ನು ಇತಿಹಾಸಕ್ಕೆ ಬಿಟ್ಟು ಭ್ರಾತೃತ್ವ ಮತ್ತು ಸಮಾನತೆಯನ್ನು ಕಾಪಾಡಿಕೊಂಡು ಬರಲು ಆಯಾ ಸ್ಥಳಗಳ ಯಥಾಸ್ಥಿತಿಯನ್ನು ಕಾಪಾಡಿಕೊಂಡ ಬರಬೇಕು ಎಂಬ ಈ ಕಾಯಿದೆಯ ತರ್ಕ, ಅತ್ಯಂತ ನ್ಯಾಯೋಚಿತವಾದುದು ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಂಥದ್ದು. ಬಾಬರಿ ಮಸೀದಿ ವಿವಾದಕ್ಕೂ ಇದೇ ಮಾನದಂಡ ಅನ್ವಯವಾದರೆ ಮಾತ್ರ ಈ ವಿವಾದ ನ್ಯಾಯೋಚಿತವಾಗಿ ಬಗೆಹರಿಯುತ್ತದೆ.

ಶಾಂತಿ ಅತ್ಯಂತ ಮುಖ್ಯವಾದುದು. ಆದರೆ ಅದು ಅನ್ಯಾಯದ ನೆಲೆಗಟ್ಟಿನಿಂದ ಮೂಡಿದ ಶಾಂತಿಯಾದರೆ ಅದರ ಬಾಳು ಅತ್ಯಂತ ಅಲ್ಪಾವಧಿಯಾಗಿರುತ್ತದೆ. ನ್ಯಾಯದ ನೆಲೆಗಟ್ಟಿನಿಂದ ಅರಳುವ ಶಾಂತಿಯೇ ಶಾಶ್ವತವಾದದು ಮತ್ತು ಸೌಹಾರ್ದಯುತವಾದುದು.


77ನೇ ಸಾಹಿತ್ಯ ಸಮ್ಮೇಳನ ಸಡಗರ-ಗೊಂದಲಗಳ ನಡುವೆ....



ಅಖಂಡ ನಲ್ವತ್ತು ವರ್ಷಗಳ ನಂತರ ಬೆಂಗಳೂರು ಕನ್ನಡ ಹಬ್ಬದ ಸಂಭ್ರಮವನ್ನು ಎದುರುಗೊಳ್ಳುತ್ತಿದೆ. ಇದೇ ಡಿಸೆಂಬರ್ 7ರಿಂದ 9ರತನಕ 77ನೇ ಸಾಹಿತ್ಯ ಸಮ್ಮೇಳನ ನಡೆಯುವುದಾಗಿ ಘೋಷಣೆಯಾಗಿದೆ. ಆದರೀಗ ಒಂದು ಕಡೆಯಿಂದ ಸರ್ಕಾರ ಅದುರತೊಡಗಿದ್ದರೆ, ಮತ್ತೊಂದೆಡೆಯಲ್ಲಿ ಸಮ್ಮೇಳನ ನಡೆಯಲಿರುವ ಸ್ಥಳ, ಜರುಗಬೇಕಿರುವ ನಡಾವಳಿಗಳೆಲ್ಲ ತೀವ್ರತರವಾದ ಗೊಂದಲ ಸೃಷ್ಟಿಸಿಬಿಟ್ಟಿವೆ.

ಸಾಹಿತ್ಯ ಪರಿಷತ್ತು ಘೋಷಿಸಿದಂತೆ ಈ ಸಮ್ಮೇಳನ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಯಲಿದೆ. ಒಂದು ಲಕ್ಷದಷ್ಟು ಜನ ಸೇರುವ ನಿರೀಕ್ಷೆಗಳಿರುವುದರಿಂದ ಕಾಲೇಜು ಮೈದಾನದಲ್ಲಿ ಸ್ಥಳಾವಕಾಶ ಸಾಲದೆ ನೂಕುನುಗ್ಗಲು ನಡೆದು ಗೋಷ್ಠಿಗಳ ಮೇಲೆ, ಇತರೆ ಕಾರ್ಯಕ್ರಮಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿ ಸಮ್ಮೇಳನ ಮಂಕಾಗಬಹುದೆಂಬುದು ಸಾಹಿತ್ಯಾಸಕ್ತರ ಆತಂಕ.


ಇನ್ನೂ ಗೊಂದಲದ ಸಂಗತಿಯೆಂದರೆ ಸಮ್ಮೇಳನದ ಊಟೋಪಚಾರ ವ್ಯವಸ್ಥೆಯನ್ನು ಕೋಟೆ ಹೈಸ್ಕೂಲ್ ಮೈದಾನದಲ್ಲಿ ಮಾಡಲಾಗಿದೆ. ಸಮ್ಮೇಳನ ನಡೆಯುವ ಸ್ಥಳಕ್ಕೂ ಕೋಟೆ ಹೈಸ್ಕೂಲು ಮೈದಾನಕ್ಕೂ ನಡುವೆ ಒಂದೂವರೆ ಕಿ.ಮೀ.ಗಳಷ್ಟು ಅಂತರ ಇದೆ.



ಇದಲ್ಲದೆ ಹೈಸ್ಕೂಲ್ ಮೈದಾನದ ಪಕ್ಕದಲ್ಲೇ ಸದಾ ಜನರಿಂದ ಗಿಜಿಗುಡುವ ಕೆ.ಆರ್.ಮಾರುಕಟ್ಟೆ ಪ್ರದೇಶವಿದೆ. ಸಂಘಟಕರು, ಸ್ವಯಂಸೇವಕರು ಕೊಂಚ ಎಚ್ಚರ ತಪ್ಪಿದರೂ ನೂಕುನುಗ್ಗಲು ನಿಭಾಯಿಸುವುದು ದೊಡ್ಡ ತಲೆನೋವಾಗಲಿದೆ.

ಇಷ್ಟೆಲ್ಲದರ ನಡುವೆಯೇ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಗೃಹಸಚಿವ ಆರ್.ಅಶೋಕ್ ನೇಮಕಗೊಂಡಿದ್ದಾರೆ. ಇವರ ನೆರಳಲ್ಲೇ ಸಮ್ಮೇಳನ ಸುಸೂತ್ರವಾಗಿ ನೆರವೇರಲು ಅನುಕೂಲವಾಗುವಂಥ ಕಮಿಟಿಗಳು ರಚನೆಯಾಗಬೇಕಿದೆ. ಒಂದು ವೇಳೆ ಸರ್ಕಾರ ಸ್ಥಿರವಾಗಿದ್ದರೆ ಆ ಕಮಿಟಿಗಳಲ್ಲೆಲ್ಲಾ ಚೆಡ್ಡಿವೀರ ಪಟುಗಳೇ ಕಾರುಬಾರು ನಡೆಸುವ ಸಂಭವವೂ ಢಾಳಾಗಿದೆ.

ಸಮ್ಮೇಳನ ಅಂದಮೇಲೆ ಅದರ ಅಧ್ಯಕ್ಷರ ಆಯ್ಕೆ ಪ್ರಮುಖವಾದದ್ದು. ಆ ಪ್ರಕ್ರಿಯೆಗೆ ಬಹು ಹಿಂದೆಯೇ ಚಾಲನೆ ದೊರೆತು ಈ ಕ್ಷಣಕ್ಕೂ ಮುಂದುವರೆದಿದೆ. ಇದೀಗಲೇ ಭಾಷಾ ತಜ್ಞ ವೆಂಕಟಸುಬ್ಬಯ್ಯ, ಎಂ.ಎಂ.ಕಲ್ಬುರ್ಗಿ, ಹಂಪನಾ ಮತ್ತಿತರ ಹೆಸರುಗಳು ರೇಸ್‌ನಲ್ಲಿವೆ. ಈ ಹಿನ್ನೆಲೆಯಲ್ಲಿ ಬೆಂಬಲಿಗರ ನಡುವೆ ಚುರುಕಿನ ಚಟುವಟಿಕೆಗಳೂ ಚಾಲ್ತಿಗೆ ಬಂದಿವೆ. ಆದರೆ ಅಧ್ಯಕ್ಷರನ್ನು ಆಯ್ಕೆ ಮಾಡಲು ಕಾರ್ಯಕಾರಿ ಸಮಿತಿಯೊಂದು ಇನ್ನಷ್ಟೇ ಅಸ್ತಿತ್ವಕ್ಕೆ ಬರಬೇಕಿದೆ. ಇದರಲ್ಲಿ ಎಲ್ಲಾ ಜಿಲ್ಲೆಗಳ ಸಾಹಿತ್ಯ ಪರಿಷತ್ತಿನ ಹಾಲಿ ಅಧ್ಯಕ್ಷರುಗಳು, ಅಫಿಷಿಯಲ್ ಮೆಂಬರ್ಸ್ ಸೇರಿದಂತೆ ನಲ್ವತ್ತು ಮಂದಿ ಸದಸ್ಯರಿರುತ್ತಾರೆ.



ನೈತಿಕತೆಯ ನೆರಳಲ್ಲೇ ನಡಾವಳಿಗಳು ಜರುಗಿದರೆ, ಸದಸ್ಯರುಗಳು ಅಧ್ಯಕ್ಷರಾಗುವವರ ಹೆಸರು ಸೂಚಿಸಿ, ಪಟ್ಟಿ ತಯಾರಿಸಿ ನಂತರ ಅಭಿಪ್ರಾಯ ಪಡೆದು ಒಮ್ಮತದ ನಿರ್ಧಾರದಿಂದ ಆಯ್ಕೆ ನಡೆಯುತ್ತದೆ. ಒಂದು ವೇಳೆ ಒಮ್ಮತ ಮೂಡದಿದ್ದರೆ ಗುಪ್ತ ಮತದಾನದ ಸೂತ್ರ ಅನುಸರಿಸಲಾಗುತ್ತದೆ.

ಆದರೀಗ ಸಾಹಿತ್ಯಕ ಪರಿಸರದಲ್ಲಿ ಜಾತೀಯತೆಯ ಗಾಳಿ ಬೀಸಲಾರಂಭಿಸಿದೆ. ವಯಸ್ಸು, ಅನುಭವ, ಅರ್ಹತೆ, ಪ್ರಾದೇಶಿಕತೆಗಳೆಲ್ಲವನ್ನೂ ಮೀರಿಸಿ ಜಾತಿ ಸೂಕ್ಷ್ಮವೇ ಮೇಲುಗೈ ಸಾಧಿಸಬಹುದಾದ ಸಾಧ್ಯತೆಗಳೂ ಇವೆ. ಸಾಹಿತ್ಯ ಪರಿಷತ್ ಅಧ್ಯಕ್ಷರು ಗಟ್ಟಿಗರಾಗಿದ್ದರೆ ಎಲ್ಲಾ ಒತ್ತಡಗಳಿಂದ ತಪ್ಪಿಸಿಕೊಂಡು, ರಾಜಕಾರಣಿಗಳ ಪ್ರಭಾವದಿಂದಲೂ ಬಿಡಿಸಿಕೊಂಡು ಅರ್ಹರಾದವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬಹುದಾಗಿದೆ.

ಅಧ್ಯಕ್ಷರ ಆಯ್ಕೆಯೂ ಸೇರಿದಂತೆ ಒಂದಿಡೀ ಸಮ್ಮೇಳನವನ್ನು ಗೊಂದಲಗಳಿಲ್ಲದಂತೆ ಅರ್ಥಪೂರ್ಣವಾಗಿ ನಿಭಾಯಿಸುವ ಜವಾಬ್ದಾರಿ ಸಾಹಿತ್ಯ ಪರಿಷತ್ ಅಧ್ಯಕ್ಷ ನಲ್ಲೂರು ಪ್ರಸಾದರ ಮೇಲಿದೆ.

ಅನುಭವವೋಕ್ತಿಯಾಗುವ ಹಾದಿಯಲ್ಲಿರುವ ಅಗಣಿತ ಚಹರೆ

'ಅಗಣಿತ ಚಹರೆ' ಸಂದೀಪ ನಾಯಕರ 39 ಕವಿತೆಗಳಿರುವ ಸಂಕಲನ. ಈ ಸಂಕಲನಕ್ಕೆ ಕವಿ ಎಸ್. ಮಂಜುನಾಥ್ ಮುನ್ನುಡಿ ಹಾಗೂ ಜಯಂತ ಕಾಯ್ಕಿಣಿ ಬೆನ್ನುಡಿ ಬರೆದಿದ್ದಾರೆ. ಸಂದೀಪ ನಾಯಕರ ಕವಿತಾಸಕ್ತಿ ನಡೆಯಬಯಸುತ್ತಿರುವ ಅಭಿವ್ಯಕ್ತಿ ಮಾರ್ಗದ ಬಗ್ಗೆ ಮುನ್ನುಡಿ ಹಾಗೂ ಬೆನ್ನುಡಿಯಲ್ಲಿ ಸಾಕಷ್ಟು ಸುಳುಹುಗಳಿವೆ. ಸಂದೀಪರು ತಮ್ಮ ಓರಗೆಯ ಹಲವಾರು ಕವಿಗಳಿಗಿಂತ ಭಿನ್ನವಾಗಿ ಬರೆಯಲು ಪ್ರಯತ್ನಿಸುತ್ತಿದ್ದಾರೆಂಬುದನ್ನು ಕವಿತೆಗಳು ನಮಗೆ ಮನದಟ್ಟು ಮಾಡಿಸುತ್ತವೆ. ಸಾಮಾಜಿಕ ಅನುಭವಗಳಿಗಿಂತ ಈ ಸಂಕಲನದ ಕವಿಗೆ ವ್ಯಕ್ತಿಗತ ಅನುಭವಗಳನ್ನು ಮಂಡಿಸುವ ಕಡೆಗೆ ಹೆಚ್ಚು ಪ್ರೀತಿಯಿದೆ. ಹಾಗೆಂದರೆ ತನ್ನ ಸುತ್ತಲಿನ ಸಂದರ್ಭವನ್ನು ತನ್ನ ಕಾವ್ಯ ಜಗತ್ತಿನ ಮೂಲಕ ಸಂದೀಪರು ದಿಟ್ಟಿಸುವುದಿಲ್ಲ ಎಂದಲ್ಲ. 'ಧಕ್ಕೆಯ ಕಡೆಗಿನ ದಿಕ್ಕು', 'ತಾಯಿಗಷ್ಟೇ ಮಗಳಾಗಿದ್ದಳು', 'ಮಾಯದ ಗಾಯಗಳ ಗುರುತ ಅರಸಿ', 'ಲಾರಿಯಲ್ಲಿ ಬುದ್ಧ' ಮುಂತಾದವುಗಳು ಕಣ್ಣ ಮುಂದಿನ ಹೊರಲೋಕದ ಅನುಭವವನ್ನು ಮುಟ್ಟಿ ನೋಡುವ ಕವಿತೆಗಳಾಗಿವೆ.

'ಈ ಚಣದವರೆಗೆ
ಯಾವ ಸೈನಿಕನೂ ನೆತ್ತರಿಂದ ತೋಯಿಸದೇ
ಕತ್ತಿಯನು ಇಟ್ಟಿಲ್ಲ ಒರೆಗೆ

ಕಾಯದ ಪೂರ ಗಾಯಗಳಿರುವ
ಸಂತರು ಮಾತ್ರ ಈ ತನಕ
ಕೊಟ್ಟರು ಬೆಳಕ' (ಮಾಯದ ಗಾಯಗಳ ಗುರುತ ಅರಸಿ)

ಎಂಬಂತಹ ಕಾವ್ಯ ಚಿತ್ರಗಳನ್ನು ಇಂತಹ ಕವಿತೆಗಳಲ್ಲಿ ಸಂದೀಪರು ಕಟ್ಟಿದ್ದಾರೆ.


ಹಾಗೆಂದು ಹೊರ ಅನುಭವಗಳನ್ನು ಚಿತ್ರಿಸುವ ಎಲ್ಲ ಕಡೆಗಳಲ್ಲಿಯೂ ಇಂತಹ ಚಿತ್ರಕ ಶಕ್ತಿಯನ್ನು ಕವಿ ವ್ಯಕ್ತಪಡಿಸಿದ್ದಾರೆ ಎಂದಿಲ್ಲ.

'ಹೊಡೆವ ಮಳೆಯಲ್ಲಿ ಜೀವ
ಒತ್ತೆ ಇಟ್ಟು ಮೀನು ಹಿಡಿವ
ಜನ ಗಂಜಿಗೆ
ಒಣ ಮೀನುಗಳ ತಿನ್ನುವರು

ಹುಸಿ ಹುಸಿ ನಸುಕಲ್ಲಿ
ಹೆಗಲಿಗೆ ಬಲೆಗಳ ಏರಿಸಿ
ಯಾವುದೋ ಲೋಕಗಳ ಅರಸಿ
ಹೊರಟ ಹಾದಿಗರೆಲ್ಲ ಮತ್ತೆ
ಮತ್ತೆ ದಿಕ್ಕು ತಪ್ಪುವರು' (ಧಕ್ಕೆಯ ಕಡೆಗಿನ ದಿಕ್ಕು)

ಹೀಗೆ ಹೊರಗಿನ ವಾಸ್ತವವೆನ್ನುವುದು ಕವಿತೆಯೊಳಗಿಳಿದಾಗ ಅದು ಜೀವರಹಿತ ವಿವರವಾಗುವ ಅಪಾಯವನ್ನು ತಪ್ಪಿಸಿಕೊಳ್ಳಲೋ ಎಂಬಂತೆ ತಮ್ಮ ಮನೋಲೋಕದ ಅನುಭವವನ್ನು ಸಾಧ್ಯವಾದಷ್ಟು ವೈಯಕ್ತಿಕತೆಯಲ್ಲಿ ಮಂಡಿಸುವ ಹಾದಿಯನ್ನು ಸಂದೀಪರು ಹಿಡಿದಿರುವುದನ್ನು ಇಲ್ಲಿನ ಕವಿತೆಗಳು ಹೇಳುತ್ತಿವೆ. ಅದು ಅವರ ಮೆಚ್ಚಿನ ಅಭಿವ್ಯಕ್ತಿ ಮಾರ್ಗವೂ ಇರಬೇಕೆಂದು ಕಾಣುತ್ತದೆ. ಈ ಅನಿಸಿಕೆಯನ್ನು ಮುನ್ನುಡಿಯಲ್ಲಿ ಎಸ್. ಮಂಜುನಾಥ್ ಸ್ಪಷ್ಟವಾಗಿ ಹೇಳಿದ್ದಾರೆ-

"ಈಗ ಕವಿತೆ ಬರೆಯುತ್ತಿರುವ ಅನೇಕರಲ್ಲಿ ಅನುಭವ ಪ್ರಕ್ರಿಯೆ ಕುರಿತಾದ ಸರಿಯಾದ ತಿಳಿವಳಿಕೆ ಇಲ್ಲವೆಂಬುದು ನನ್ನ ಅನಿಸಿಕೆ. ಕನ್ನಡದಲ್ಲಿ ಈಗ ಇರುವ ಓದು - ವಿಮರ್ಶಾ ವಾತಾವರಣ ಸಹ ಅಂಥ ತಿಳಿವಳಿಕೆಯನ್ನು ನೆಲೆಗೊಳಿಸುವಂತೆ ಇಲ್ಲವೆನಿಸುತ್ತದೆ. ಯಾರೂ ಮುಟ್ಟದೆ ನಾಚುವ ಹುಡುಗಿಯಂತೆ ಕೆಲವರು; ಅನುಭವಕ್ಕಿಂತ ತಾವು ದೊಡ್ಡವರಾಗಿ ಅಹಂಭಾವ ಮೆರೆಯುವವರು ಕೆಲವರು. ಸುಮ್ಮನೆ ಇದ್ದರೆ ಅದು ತಾನಾಗೇ ಬಂದು ಮುಟ್ಟಬಹುದೆಂಬ ನಂಬಿಕೆಯಿರದೆ ಮೈಮೇಲೆ ಬಿದ್ದು ಆರಗಿಸಿಕೊಳ್ಳುವ ಆಕ್ರಮಣಶೀಲರು ಕೆಲವರು; ಮತ್ತೆ ಕೆಲವರು ವಿಚಿತ್ರ ವಿನ್ಯಾಸದ ಉಕ್ತಿಗಳಿಂದಲೇ ಅಸಾಧಾರಣ ಅನುಭವ ಸೃಷ್ಟಿಯಾಗುತ್ತದೆಂದು ಭ್ರಮಿಸುವವರು.... ಈ ಎಲ್ಲದರ ಮಧ್ಯೆ ಕವಿತೆಯೆನ್ನುವುದು ಕವಿಯ ಸಹಜ ಗ್ರಹಿಕೆ ಎಂಬಂತೆ, ಒಂದು ಅರ್ಥಪೂರ್ಣವಾದ ಪ್ರಕ್ರಿಯೆಗೆ ಒಳಗಾಗುವಿಕೆ ಎಂಬಂತೆ ಇರುವ ಕಾರಣಕ್ಕೆ, ಸಂದೀಪರ ಕವಿತೆಗಳು ನಮಗೆ ಪ್ರಿಯವಾಗುತ್ತವೆ."



ಈ ಮುನ್ನುಡಿಯ ಮಾತುಗಳು ಕೇವಲ ಸೌಜನ್ಯಪೂರ್ಣವಾದ ಹಾರೈಕೆಗಳಲ್ಲ ಎಂಬುದನ್ನು ನಿದರ್ಶಿಸುವುದಕ್ಕೆ ಸಂದೀಪರ ಸಂಕಲನದಲ್ಲಿ ಹಲವು ಪಂಕ್ತಿಗಳನ್ನು ಗಮನಿಸಬಹುದಾಗಿದೆ. ಆದರೆ ಹಲವು ಕಡೆಗಳಲ್ಲಿ ನಿರ್ದಿಷ್ಟ ಅನಿಸಿಕೆಯೊಂದನ್ನು ಕವಿ ಮಂಡಿಸುವ ಗಳಿಗೆಯವರೆಗೆ ಕವಿತಾ ಶಿಲ್ಪ ಕೇವಲ ವಿವರಗಳನ್ನು ಮಂಡಿಸುತ್ತಾ ಹೋಗುವ ಶಿಥಿಲತೆಯ ಸಮಸ್ಯೆ ನಿವಾರಿಸಿಕೊಳ್ಳುವಲ್ಲಿ ಕವಿ ಪೂರ್ತಿ ಯಶಸ್ವಿಯಾಗಿಲ್ಲ. ಇದಕ್ಕೊಂದು ಉದಾಹರಣೆಯಾಗಿ 'ಸ್ಪರ್ಶ' ಕವಿತೆಯನ್ನು ನೋಡಬಹುದು- ಮೊದಲ ಮೂರು ಪ್ಯಾರಾಗಳು ಹಾಗೂ ನಾಲ್ಕನೆಯ ಪ್ಯಾರಾದ ಅರ್ಧ ಭಾಗದಲ್ಲಿ ಒಂದು ಚಿಟ್ಟೆಯನ್ನು ಹುಡುಗಿ ಹಿಡಿದುಕೊಳ್ಳುವ ಮತ್ತದು ತಪ್ಪಿಸಿಕೊಂಡು ಹಾರುವ ಘಟನಾ ವರದಿಯಾಗುವುದಕ್ಕಿಂತ ಹೆಚ್ಚಿನದನ್ನು ಸಾಧಿಸಲಾಗಿಲ್ಲ. ಕಡೆಯ ಸಾಲುಗಳು ಆ ಕವಿತೆಯ ಅರ್ಥದ ಪ್ರಾಣವನ್ನು ಎತ್ತರಿಸಿವೆ.

'ಜಾರಿ ತಪ್ಪಿಸಿಕೊಂಡ ಚಿಟ್ಟೆ
ಉಳಿಸಿ ಹೋಯಿತು ಅದೇ
ಬಣ್ಣದ ಗಳಿಗೆ

ಅವಳ ಮೈಯಲ್ಲೀಗ
ಚಿಟ್ಟೆಯ ಚಂಚಲತೆ'

ಹಾಗಿದ್ದೂ ಈ ಸಾಲುಗಳು ಕವಿಯ ಅನುಭವ ಚೋದ್ಯವನ್ನು ಮಂಡಿಸುವುದಕ್ಕಿಂತ ಅನಿಸಿಕೆಯ ಚಮತ್ಕಾರವನ್ನು ಹಂಚಿಕೊಳ್ಳುವ ಮುಖಾಂತರ ಸಾಫಲ್ಯ ಪಡೆಯಲು ಪ್ರಯತ್ನಿಸಿದಂತಿವೆ.


'ಚಳಿಯಲ್ಲಿ ಚಂದ್ರನಿಗಾಗಿ
ಒಂದೇ ಒಂದು
ಹರಿದ ನಿಲುವಂಗಿ'
(ಮುಗಿಲ ಹಾಯ್ಕುಗಳು)

'ಕೈಯಲ್ಲಿನ ಸೂತ್ರದಿಂದ
ತನ್ನ ಚಡಪಡಿಕೆ
ಕನಸು-ಕನವರಿಕೆಗಳಲ್ಲಿ
ಎತ್ತರದಲ್ಲಿ ಆಡಿಸಿದಂತಿದೆ.

ಎಲ್ಲರಿಗೂ ತೋರುವಂತೆ'
(ಸೂತ್ರ)

ಇಂತಹ ಸೂಕ್ಷ್ಮ ಅನಿಸಿಕೆಗಳನ್ನು ತಮ್ಮ ಕವಿತೆಗಳಲ್ಲಿ ಮಂಡಿಸಬಯಸುವ ಸಂದೀಪರು ಓದುಗರಿಗೆ ಆ ಕ್ಷಣದ ಓದಿನಲ್ಲಿ ಬೆರಗನ್ನು ಉಂಟುಮಾಡುತ್ತಾರೆಂಬುದು ನಿಜ. ಆದರೆ ಇವು ಗಾಢ ಅನುಭವಾಭಿವ್ಯಕ್ತಿಗಳಾಗಿ ಅನುರಣಿಸದೆ ಹೋಗುವ ಮಿತಿಯನ್ನೂ ಎದುರಿಸಿದ್ದಾರೆ.

ಕವಿತೆಯ ಭಾಷೆ ಮತ್ತು ಅದನ್ನು ಮಂಡಿಸುವ ಬಗೆಯಲ್ಲಿ ಹೆಚ್ಚಿನ ಸರ್ಕಸ್‌ಗಳನ್ನು ಮಾಡದೆ ತಮ್ಮ ಮಟ್ಟಿಗೆ ಅನ್ನಿಸಿದ ಅನುಭವಗಳನ್ನು ತಾಜಾ ಆಗಿ ಆಪ್ತ ನಿರೂಪಕ ವಿಧಾನದಿಂದ ಮಂಡಿಸುವ ಸಂದೀಪರ ಪ್ರಯತ್ನ ಮೆಚ್ಚುಗೆ ಹುಟ್ಟಿಸುವಂತಾದ್ದು. ಆದರೆ ಅವರು ಬಹಳವಾಗಿ ಮೆಚ್ಚಿಕೊಳ್ಳುವ ಜಯಂತ್ ಕಾಯ್ಕಿಣಿಯವರ ಅಥವಾ ಎಸ್. ಮಂಜುನಾಥರ ಹಲವು ಕವಿತೆಗಳಲ್ಲಾದಂತೆ ಒಂದು ಅನುಭವ ವೈಶಿಷ್ಟ್ಯವಾಗಿ ಅಭಿವ್ಯಕ್ತಿಗೊಳ್ಳುವಲ್ಲಿ ಅವುಗಳು ಯಶಸ್ಸು ಪಡೆದುಕೊಂಡಿವೆಯೇ ಎಂಬುದು ಪ್ರಶ್ನೆಯಾಗಿ ನಿಲ್ಲುತ್ತದೆ. ಚಿತ್ರಾಂಗದೆಯ ಸೊಲ್ಲುಗಳು ಎಂಬ ಬಿಡಿ ಚಿತ್ರಗಳ ಕವಿತೆ ಲಂಕೇಶರ ನೀಲು ಪದ್ಯಗಳನ್ನು ಅನುಕರಿಸಿದಂತೆ ಭಾಸವಾಗುತ್ತದೆ. ಉದಾಹರಣೆಗೆ ಅದರಲ್ಲಿನ 1, 4, 6, 7 ಪಂಕ್ತಿಗಳನ್ನು ನೋಡಬಹುದಾಗಿದೆ.



ಸಂದೀಪರಿಗೆ ತಮ್ಮ ಅನುಭವ ಲೋಕಕ್ಕೆ ಸೀಮಿತವಾಗಿ ತಾವು ಕಂಡಷ್ಟನ್ನು ಹೆಚ್ಚಿನ ಸೋಗಿಲ್ಲದೆ ಕವಿತೆಯಲ್ಲಿ ಹೇಳಬೇಕೆಂಬ ಆಸಕ್ತಿ ಇದೆ. ಅದು ಅವರೊಳಗಿನ ಕವಿತಾಶಕ್ತಿಯಾಗಿ ರೂಪುಗೊಳ್ಳುತ್ತಿದೆ ಎಂಬುದಕ್ಕೆ ಈ ಸಂಕಲನದ 'ತಾಯಿಯಂತೆ', 'ಚಿಟ್ಟೆನಾಯ', 'ಚರಿತ್ರೆಯಲ್ಲಿ', 'ರಾತ್ರಿ ಬಂದಿಳಿದವರು', 'ಹೊಲಿಗೆ' ಮುಂತಾದ ಕವಿತೆಗಳು ನಿದರ್ಶನವಾಗಿವೆ. ನಾವು ಭರವಸೆಯಿಂದ, ಅಕ್ಕರೆಯಿಂದ ಕೇಳಿಸಿಕೊಳ್ಳಬೇಕಾದ ತರುಣ ಕವಿದನಿಗಳಲ್ಲಿ ಸಂದೀಪ ನಾಯಕರು ಇದ್ದಾರೆಂಬುದನ್ನು ಈ ಸಂಕಲನದ ಕವಿತೆಗಳು ಹೇಳುತ್ತಿವೆಯೆಂಬುದು ಮುಖ್ಯವಾದ ವಿಷಯ.

• ಡಾ. ಬಂಜಗೆರೆ ಜಯಪ್ರಕಾಶ



1-1/3-1/3-1/3=0

ಆಹಾ! ಈಗ ಎಲ್ಲಾ ಸರಿಹೋಯಿತು
ನ್ಯಾಯವನ್ನು ಅಡ್ಡಡ್ಡ ಸೀಳಿ ಮೂರು ಭಾಗ
ಮಾಡಲಾಯಿತು.
ಸರ್ವೇ ಜನಾ ಸುಖೀನೋ ಭವಂತು!

ಅವರಿರುವುದು ಹಾಗೆ! ಕೇಳುತ್ತಾರೆ
ಕೇಳಿದ್ದನ್ನು ಕೊಡದಿದ್ದರೆ ಕೊಲ್ಲುತ್ತಾರೆ
ನಿಮಗೇನಾಗಿದೆ ಧಾಡಿ?
ಕೇಳಿದ್ದನ್ನು ಕೊಟ್ಟು ಶಾಂತಿ ಕಾಪಾಡಿ
ಅವರೇನು ಕೌರವರಂತಲ್ಲ
ಕೊಡುತ್ತಿದ್ದಾರೆ ಐದು ಹಳ್ಳಿಗಳನ್ನು
ಸಾಮಂತರಾಗಿ, ಕೊಟ್ಟಿಲ್ಲವೇ ಬದುಕು ಭಿಕ್ಷೆಯನ್ನು?

ಬಡಪಾಯಿ ನ್ಯಾಯದ ಮನೆಯಲ್ಲಿ ಬಲವಿಲ್ಲದ
ನಂಬಿಕೆ ಬಾಡಿಗೆದಾರ
ವಿಶ್ವಾಸಗಳ ನಡುವಿನ ಸಣ್ಣದೊಂದು ಸಿವಿಲ್ ತಕರಾರು
ನೆಲಬಾಂಬುಗಳಾದವು ಮನಮನ
ಈಗ ಬಾಂಬ್ ಸ್ಕ್ವಾಡ್ ಬಂದದ್ದಕ್ಕೇಂಬುದೇ
ಅನುಮಾನ!

ಇನ್ನು ಚಿಂತೆ ಇಲ್ಲ
ಸತ್ಯಕ್ಕೀಗ ಸಾಕ್ಷಿ ಪುರಾವೆಗಳ ಕಾವಲಿಲ್ಲ.
ರಾವಣರಿಗೂ ಇನ್ನು ಸಲೀಸು,
ನ್ಯಾಯಾನ್ಯಾಯಗಳ ಲಕ್ಷ್ಮಣರೇಖೆ ಊರ್ಜಿತಗೊಂಡಿಲ್ಲ

ಇನ್ನೂ ನಂಬಿಕೆಯೇ ಸಂವಿಧಾನ, ರಣ ಘೋಷಗಳೇ
ವೇದವಾಕ್ಯ
ನಂಬಿಕೆಯಂತೆ ನಡೆದರೆ ಮೋಕ್ಷ, ಇಲ್ಲವೇ ನಿಜ
ನಿರ್ವಾಣ
ಪುರಾಣ ಮಂತ್ರ ತಂತ್ರ ಕವಡೆ
ಜನಸಂಖ್ಯೆಗೆ ಅನುಗುಣವಾಗಿ ನ್ಯಾಯದ ಬಟವಾಡೆ
ನ್ಯಾಯ ಅನ್ಯಾಯಗಳೆರಡಕ್ಕೂ ಸಮಪಾಲು
ಜೋರು ಮಾಡಿದರೆ ಮೂರರಲ್ಲಿ ಎರಡೂ ಮುಕ್ಕಾಲು


ರಾಮರಾಜ್ಯ ಸ್ವಾಮಿ
ಶಂಬೂಕರಾದರೆ ನರಕ
ಸಹಿಸಿಕೊಂಡು ಬಾಳಿದರೆ ಸ್ವರ್ಗಸುಖ!

• ಶಿವಸುಂದರ್

...ಮಾಡಬಾರ್ದು ಮಾಡಿದ್ರೆ ಆಗಬಾರ್ದು ಆಯ್ತದೆ ಕಂಡ್ರ"

ಳಮಾವ ಇದನ್ನು ನಿರೀಕ್ಷಿಸಿರಲಿಲ್ಲ. ರಾಗಿ ಪೈರಿಗೆ ಹದ ಮಳೆ ಸಾಕಿತ್ತು. ಆದರೆ ಕಳೆದ ಐದು ...ದ ಕರಿ ಮುಗಿಲಯ್ಯ ರಾತ್ರಿ ಕಾಣಿಸಿಕೊಂಡು, ಬಾರಿಸಿ ಹೋಗಿದ್ದರಿಂದ, ಹೊಲಗಳಲ್ಲಿ ನೀರು ...ನವಾಗಿ ಕಳೆ ಬೆಳೆಯತೊಡಗಿತು. ಈ ರೇಜಿಗೆಯನ್ನೆ ...ಸುತ್ತಿದ್ದ ಅವನ ಬಾಯಿಂದ,

...ಓ, ಇದರ ಮನಿಯಾಳಾಗ. ನಾವಂದುಕಳದೇ ಆಗದೇ ಒಂದು ಹೋಗತ್ತಗೆ" ಎಂಬ ಮಾತು



...ನಾಯ್ತೊ ಮಾವ?" ಎಂದಳು ಜುಮ್ಮಿ.

...ದರೆವಲಕೆ ಕಾಲಿಕ್ಕಾಗದಿಲ್ಲ ಕಂಡ್ರೈ. ಕಾಲಂಗೆ ...ರೆ. ಹಿಂಗಾದ್ರೆ ಕ್ವನ್ನಾರಿ ವಡಿಗೆ ಬತ್ತವೆ."

...ಗೊಂದು ಸತಿ ಹಿಂಗೆ ಆಗಿತ್ತು ಕಣಮಾವ. ಹಿಡದ ...ಬುಡದಂಗೆ ಒಂತಿಂಗಳೂದಿತ್ತು; ಗ್ವಬ್ಬರ್ಯಲ್ಲ ...ಡೋಗಿ ವಲ ಕ್ಯಂಚನಾಗಿದ್ದೊ."

...ತೂರು, ಬಿರೂರತ್ರ ವಡದಿರೊ ಮಳಿಗೆ ಈರುಳ್ಳಿ ...ಗಂಡೋದವಂತೆ. ಪಾಪ ರೈತರಳ ...ನ್ಯಾಯ್ತಾಯಿಲವಂತೆ" ಎಂದ ಸೀರ.

...ತರಳ ಇನ್ನಾರು ನೋಡಬೇಕೊ. ನನ್ನ ಮಕ ...ನೋಡಬೇಕು, ನಿನ್ನ ಮಕ ನಾನ್ನೊಡಬೇಕು. ...ಟ್ಟು ಎಡೂರಪ್ಪ ಬಂದನೇ?" ಎಂದ ಉಗ್ರಿ.

...ವುನೇ ಅಳತ ಕುಂತಿದ್ದನಂತೆ. ಇನ್ನು ರೈತರ ಅಳ

...ವುನ್ಯಾಕಳತಾಯಿದ್ದನೊ?" ಎಂದಳು ಜುಮ್ಮಿ

...ನೀನು ಮಾರ್ನಮಿ ಪಕ್ಷ ಮಾಡೊ ಗಾಬರೀಲಿ ...ಪ್ಪನ ಗೋಳಾಟನ್ನೇ ಕೇಳಿಸಿಗಂಡಿಲ್ಲ ಅಂಗರೆ" ...ಉಗ್ರಿ.

...ವುನ ಗೋಳಾಟ ನಾನ್ಯಾಕ್ ನೋಡ್ರೀ. ...ಕೊಂಜು ಹಬ್ಬ ಮಾಡಿ ಸ್ಯೆಯನಿಸಿಗಳಕೆ ...ಯ್ತು. ಆಡು, ಕುರಿ ರೇಟು ಕೇಳಿದ್ರೆ ದನಿನ ...ಳಿದಂಗಾಯ್ತದೆ ಕಂಡ್ರ."

...ಟು ದುಡ್ಡು ಕೊಟ್ಟು ತಂದಿದ್ದೆ?"

...ಯ್ಯೋ ಮಾವ, ನಿನ್ನ ಕಾಲ್ದಲ್ಲಾಗಿದ್ರೆ ಒಂದು ಜ್ವತೆ ...ರವು, ಆಟು ದುಡ್ಡು ಕೊಟ್ಟೆ."

...ದೆ ಏಟು ಕೊಟ್ಟೆ ಅಂತ ಹೇಳ್ಳೆ."

...ದುನೆಂಟು ಕೆ.ಜಿ. ಬರೊ ವ್ಯಾತನಿಗೆ ನಾಕುವರೆ ...ಸಾಯಿ ಕೊಟ್ಟೆ ಹೋಗತ್ತಗೆ."

"ಅದ್ಯಾಕ್ಲೆ ಆಟೊಂತರ ಕೊಟ್ಟೆ?"

"ಕೊಡದೆ ಇನ್ನೇನು ಮಾಡ್ಲಿ. ಸಂತಿಗೆ ಮರಿ ಬಂದಿರಲಿಲ್ಲ."

"ಯಲ್ಲ ತಿನ್ನೋರೆ ಆದ್ರೆ ಸಾಕೊದ್ಯಾರ್ಲೆ. ನೀನೇಳೊ ಲ್ಯಕ್ಕದಲ್ಲಿ ಕೆ.ಜಿ. ಬಾಡಿಗೆ ಮುನ್ನೂರು ಬಿದ್ದಂಗಾಯ್ತು."

"ನೀನು ನಾಟಿ ವಾತನ ತಗಳದಕಿಂತ ರಾಜಾಸ್ತಾನದ ಕಡಿಂದ ಬತ್ತವಲ್ಲ ಆ ಮೇಕೆ ತಗೊಬೇಕಾಗಿತ್ತು ಕಣೆ." ಎಂದ ಉಗ್ರಿ.

"ಥೂ, ಅದರ ಬಾಡು ಕತ್ತೆಬಾಡ ತಿಂದಂಗೆ ಕಂಡ್ರ."

"ಕತ್ತೆ ಬಾಡ ನೀನ್ಯಾವಾಗ ತಿಂದಿದ್ದೆ?"


"ಆ ಪುಡಸಮ್ಮಿ ಬೀಗರೂಟಕೆ ಮಾಡಿಸಿದ್ದ. ನನಿಗಂತೂ ಬಾಯಿಗಿಕ್ಕಕ್ಯಾಗಲಿಲ್ಲ, ಬುಟ್ಟು ಎದ್ದು ಬಂದೆ."

"ಅಂಗರೆ ರಾಜಸ್ತಾನದ ಆಡೂ ಇಲ್ಲಿಗೆ ಬಂದವೆ?" ಎಂದ ಕಾಳಮಾವ.

"ಊ ಕಣಮಾವ. ರೈಲಲ್ಲಿ ಅರಸೀಕ್ಯರಿಗಂಟ ಬತ್ತವೆ. ಅಲ್ಲಿಂದ ಲಾರೀಲಿ ತುಂಬಿಕಂಡು ಬಂದು ಇಲ್ಲಿ ಮಾರ್ತರೆ. ಒಂದೊಂದಾಡು ಮೂವತ್ತೈದು ಕೆ.ಜಿ. ಬತ್ತವೆ."

"ರುಚಿ ಇಲ್ಲದ ಬಾಡು ಏಟು ಕೆ.ಜಿ. ಇದ್ರೇನ್ಲ, ತಿಂದ್ರೆ ನಾಟಿ ಬಾಡ ತಿನ್ನಬೇಕು. ಒಂದೇ ಸೌಟಾಗ್ಲೇಳು."

"ಆ ರಾಜಾಸ್ತಾನದ ಆಡಿನ ಕೆಚ್ಚಲು ಯಮ್ಮೆ ಕೆಚ್ಚಲಿದ್ದಂಗಿರತದೆ."



"ಅವ ಹಾಲುಕರಿಯಕ್ಕೇ ಅಂತ್ಲೆ ಸಾಕ್ತರಂತೆ ಕಣೇ. ಹಾಲು ಕರದು ಕೋವಾ ಮಾಡ್ತರಂತೆ. ಅದ್ಕೆ ಆಟುಗಾತ್ರ ಕೆಚ್ಚಲು ಬುಡಗಂಡಿರದವು."

"ಅಂಗರಾಡಿನಾಲು ಕರದು ಮಿಠಾಯಿ ಮಾಡ್ತರೆ?"

"ಊ, ಬರ್ಫಿ ಮಾಡ್ತರೆ ಗೊತ್ತೆ?"

"ಏನಾರ ಮಾಡಿಕಂಡು ಹಾಳಾಗ್ಲಿ. ನಮ್ಮೂರಲ್ಲೂ ಅಂತ ಆಡತಂದು ಕುಯ್ಕಂಡು ಬಾಡ ತಿಂತರಲ್ಲ ಹೇಳು."

"ಸರವಜ್ಞ ಹೇಳಿಲವೇನಕ್ಕ, ಆ ತರ ನಮ್ಮ ಜನ" ಎನ್ನುತ್ತಾ ವಾಟಿಸ್ಸೆ ಬಂದ.

"ಸರುವಜ್ಞ ಏನೇಳಿದನಪ್ಪ?"

"ಬಾಡ ತಿಂಬಾತಂಗೆ ಆವೇನು, ಆಡೇನು, ಕಾಡಬಡನರಿಯೇನು, ಮನೆಯ ನಾಯೇನು ಸರ್ವಜ್ಞ ಅಂದ.... ಆದ್ರಿಂದ ನಮ್ಮ ಜನಕ್ಕೆ ಒಟ್ಟಿನಲ್ಲಿ ಮಟನ್ ಬೇಕು. ಅದು ಊರಲ್ಲಿರೊ ವ್ಯಾತನ ಬಾಡಾದ್ರು ಆಯ್ತು ರಾಜಾಸ್ತಾನದ ಕತ್ತೆ ಬಾಡಾದ್ರು ಆಯ್ತು. ಆದ್ರೆ ಬಾಡ ತಿನ್ನೊರು ಸಿಟ್ಟು ಮಾಡಿಕಂಡ್ರೆ ಏನಾಯ್ತದೆ ಅಂತ ಎಡೂರಪ್ಪನಿಗೆ ಈಗ ಗೊತ್ತಾಯ್ತು ಅದೆ" ಎಂದ ವಾಟಿಸ್ಸೆ.

"ಮಾಡಬಾರದ್ದ ಮಾಡಿದ್ರೆ ಆಗಬಾರದ್ದು ಆಯ್ತದೆ ಅಂತ ಸುಮ್ಮನೆ ಹೇಳಿಲ್ಲ ಕಣೊ. ಎಡೂರಪ್ಪ ಏನು ಮಾಡಿದ್ರೂ ನ್ಯಡಿತದೆ ಅನ್ನಕಂಡುಬುಟ್ಟ."

"ಪಾಪ, ಸೋಮಣ್ಣ ಶೋಬ ಹೊಸದಾಗಿ ಮದಿವಾದೋರ ತರ ಆಡತಿದ್ರು. ಆ ಸೋಮಣ್ಣನಿಗೂ ಹಿರಿಸಾಯದ ಗೇಟಿಗೂ ಏನಪ್ಪ ಸಮಂದ. ಇಲ್ಲಿಗೆ ತಂದು ಪ್ಲೆಕ್ಸಾಕಿದ್ರು, ಸೋಮಣ್ಣನಿಗೆ ಹಾಸನ ಜಿಲ್ಲೆ ಸ್ವಾಗತೆ ಅಂತ. ಅದ ನೋಡಿದ್ರೆ ದೇವೇಗೌಡ್ರು ಸುಮ್ಮನಿದ್ದರ ಹೇಳು."

"ದ್ಯಾವೇಗೌಡ್ಯಾಕೆ ಸುಮ್ಮನವುರಲ್ಲಾ?"

"ಅಂಡರ್‌ಗ್ರೌಂಡ್ ವರಕ್ ಮಾಡಕ್ಕೆ ಅಂತ ಕುಮಾರಣ್ಣ ಇರುವಾಗ ದ್ಯಾವೇಗೌಡ್ರು ಗ್ರೈಡ್ ಮಾಡ್ತಾಯಿರತರೆ. ದ್ಯಾವೇಗೌಡ್ರು ಸುಮ್ಮನವುರೆ ಅಂದ್ರೆ ಅವುರೇನೋ ಮಾಡ್ತ ಅವುರೆ ಅಂತ ಅಲವೆ."

"ಅದೂ ನಿಜವೆ ಬುಡು. ಅದೇನೆ ಆಗ್ಲಿ ಇವುರುದು ಜಾಸ್ತಿಯಾಗಿತ್ತು ಕಣೊ ವಾಟಿಸ್ಸೆ."

"ಜಾಸ್ತಿಯಾಗಿದ್ದಲ್ಲ ಕಣೊ, ಮಿತಿಮೀರ್ಯೊಗಿತ್ತು. ವಾರದಿಂದೆ ಎಡೂರಪ್ಪ ನನ್ನ ಕ್ಯಳಗಡೆ ಏನೋ ನ್ಯಡೀತಾ ಅದೆ ಅಂದಿದ್ದ. ಅಂಗೆ ನೋಡಿದ್ರೆ ಅವುನು ಅಧಿಕಾರಕ್ಕೆ ಬಂದಾಗ್ಲಿಂದ ಅವುನ ಕ್ಯಳಗೆ ನ್ಯಡಿತನೇ ಅದೆ. ಆದ್ರು ನಾನು ಮಾಡದ್ನೆ ಮಾಡ್ತಿನಿ ಅಂದ್ರೆ ಬುಡ್ತರಾ?"

"ಅವುನ್ಯಾರೊ ಕಟ್ಟಾ ಸುಬ್ರಾ ಅನ್ನೊನ ಮಗ ಅದೇನೊ ಮಾಡಿ ಜೈಲಿಗಾಕಿದರಂತಲ್ಲಾ ನಿಜವೇ?" ಎಂದ ಸೀರ.

"ಜೈಲಿಗಾಕಿದ್ದೂ ಆಯ್ತು, ಕೈದಿ ನಂಬರ್ ಕೊಟ್ಟಿದ್ದೂ ಆಯ್ತು ಚಿಗಪ್ಪ, ಅದೇ ಲೈನಲ್ಲಿ ಎಡೂರಪ್ಪನ ಮಕ್ಕಳೂ ಇದ್ರಂತೆ. ಕೂದಲ್ಯಳೆ ಅಂತರದಲ್ಲಿ ತಪ್ಪಿಸಿಗಂಡ್ರಂತೆ. ಅದ್ಕೆ ಎಡೂರಪ್ಪ ಕಟ್ಟಾ ಸುಬ್ಬನ್ನ ಕೈಬುಡಲಿಲ್ಲವಂತೆ. ಯಾಕೆ ಅಂದ್ರೇ 'ನನ್ನ ಮಗನ ಜ್ವತೆ ನಿನ್ನ ಮಕ್ಕಳೂ ಸೇರಿಕಂಡು ನ್ಯಲನುಂಗ್ಯವುರೆ. ಅದ್ನೂ ಈಚೆಗೆ ಯಳಿತಿನಿ' ಅಂದನಂತೆ. ಅದ್ಕೆ ಎಡೂರ ಅಮಿಕ್ಯಂಡು ಸುಮ್ಮನಾದ. ಈಗದೇ ಅವುನ್ನ ಬಲಿತಗತಾ ಅದೆ."

"ದಿನ ಬೆಳಗಾಯ್ತು ಅಂದ್ರೆ ಈ ಸೂಳೆಮಕ್ಕಳ ಕ್ಯಟ್ಟ ಕತೆ ಕೇಳದೆ ಆಯ್ತಲ್ಲಾ."

"ನಿಜ ದ್ವಡಪ್ಪ, ಎಡೂರಪ್ಪನ ಸರಕಾರದ ಮಂತ್ರಿಗಳ್ಯಲ್ಲ ಕೆಟ್ಟು ಕ್ಯರ ಹಿಡುದೋಗ್ಯವುರೆ. ಎಮ್ಮೆಲ್ಲೆಗಳ್ಯಲ್ಲ ಹಾಳುಬಿದ್ದೋಗ್ಯವುರೆ. ಅಂತದರಲ್ಲಿ ಅವುರಿಂದ ವಳ್ಳೆ ಕ್ಯಲಸ ನಿರೀಕ್ಷೆ ಮಾಡಕ್ಯಾದತೆ."

"ಎಡೂರಪ್ಪ ನ್ಯಟ್ಟಗಿದ್ರೆ ಅವುರೂ ನ್ಯಟ್ಟಗಿರೋರು."

"ಅದೇಳು ಮತ್ತೆ, ಅವುನ್ಯಂಗಾಗ್ಯವುನೆ ಅಂದ್ರೆ, ನಿನ್ನ ಮಕ್ಕಳಿಸರಿಗೆ ಬೆಂಗಳೂರಲ್ಲಿ ಭೂಮಿ ಕೊಂಡಿದ್ದಿಯಂತಲ್ಲಾ ಅಂದ್ರೆ, ದೇವೇಗೌಡ್ರು ಕೊಂಡಿಲ್ಲವ್ರೊ ಅಂತನೆ. ಶಿವಮೊಗ್ಗದಲ್ಲಿ ಕಾಂಪ್ಲೆಕ್ಸ್ ಕಟ್ಟಿದ್ದಿಯಂತೆ ಅಂದ್ರೆ ಕುಮಾರಸ್ವಾಮಿ ಕಟ್ಟಿಸಿರದ ತೋರ್ಲ ಅಂತನೆ. ನೀನೇನ್ನಾರ ಹೇಳು ನೀವು ಸಾಬಸ್ತರೊ ಅಂತನೆ. ಅಂತ ಮನುಸುನಿಗೆ ಏನಾರ ಬೋದ್ರೆ, ಟೀಕೆ ಮಾಡಿದ್ರೆ ಅದವುನಿಗೆ ಕೆಂದಕುಲ್ಲ ದ್ವಡಪ್ಪ."

"ಅಲ್ಲಾ ಆಟೊಂತರ ಆಸ್ತಿಯಿದ್ದೂ ಮಕ್ಕಳಿಗೆ ತಿರಗ ಜಮೀನು ತಗುದು ಕೊಡ್ತನೆ ಅಂದ್ರೆ ಇವುನಿನ್ನಂಥ ಲೋಬಿ ಮನ್ಸ ಅಂತ."

"ಅವುರು ಜಮೀನು ತಗದು ಬುಡದು, ಜೀವನ ಮಾಡಕ್ಕಲ್ಲ ದ್ವಡಪ್ಪ, ರಾಜಕಾರಣ ಮಾಡಕ್ಕೆ. ಎಮ್ಮೆಲ್ಲೆಗಳ ಕೊಂಡು ರಾಜಕಾರಣ ಮಾಡಕ್ಕೆ ದುಡ್ಡು ಬ್ಯಾಡವೆ? ಅದ್ಕೆ ಅಧಿಕಾರದಲ್ಲಿದ್ದಾಗ ಭೂಮಿ ತಗದು ಬುಟ್ಟಿರತರೆ. ಬೇಕಾದಾಗ ಮಾರಿ ರಾಜಕಾರಣ ಮಾಡ್ತರೆ. ಬಿಜೆಪಿಗಳು ಅಂತ್ಲೆ ಅಲ್ಲ, ಯಲ್ಲಾರು ಅಂತೊರೆಯ. ಆ ಕಾಂಗ್ರೆಸ್ಸಿನ ಮುನಿಯಪ್ಪಂದು ಬೇಕಾದಷ್ಟಿದ್ದತಂತೆ. ದೇಶಪಾಂಡೆದು, ಕುಮಾರಣ್ಣಂದೂ ಅದಂತೆ. ಏನೂ ಬ್ಯಾಡ, ನಮ್ಮ ಶಿವುರಾಮೇಗೌಡನ ಸೈಟು ಎಷ್ಟವೆ ಅಂತ ಮಾಡಿದಿ?"

"ಇರ್ಲಿ ಬುಡು. ಸೂಳೆಮಕ್ಕಳೇನು ಹೊತಗಂಡೋದರೆ?"

"ಇಲ್ಲೇ ಬುಟ್ಟೊಯ್ತರೆ ಸರಿ ದ್ವಡಪ್ಪ, ಆದ್ರು ಕ್ಯಟ್ಟ ಜನಗಳತ್ರ ಆಸ್ತಿ ಇದ್ರೆ ಡೈನಜರ್. ಎಡೂರಪ್ಪ ತಿನ್ನದ ನೋಡಿ ಯಲ್ಲಾರೂ ಗಾಬರಿ ಬಿದ್ದಿದ್ರು. ಅದ್ಕೆ ಅವುನೇನಂದಿದ್ದ ಗೊತ್ತೆ? ನನಗಿಂತ ಹಿಂದಿದ್ದೊರು ಏಟಗಲ ತಿಂದಿದ್ರು ಅಂತ ಚರ್ಚೆ ಮಾಡನ ಬನ್ನಿ, ಅದಕಾಗಿ ವಿಧಾನಸಭೆಗೆ ಕರಿತಿನಿ ಅಂದಿದ್ದ. ಅದೇನಾರ ಇವುರು ಒಪ್ಪಿಗಂಡು ವಿಧಾನಸಭೆವಳಿಕೆ ಹೋಗಿದ್ರೆ ಕೂಗಾಡಕ್ಕೆ ಅಂತ ಜನ ಮಡಿಕಂಡು, ಮಾತಾಡಕ್ಕೆ ಅವುಕಾಸ ಕೊಡದೆ ಮುಗಿಸಿಬುಡೋನು. ಅದು ಗೊತ್ತಾಗಿ ಕುಮಾರಣ್ಣ ಅಮಾಸೆ ದಿನ ಎಡೂರಪ್ಪನ್ನ ಕತ್ಲೆ ಮನೆಲಿ ಕುಂಡ್ರಿಸಿಬುಟ್ಟ."

"ವಳ್ಳೆ ಕ್ಯಲಸ ಮಾಡ್ಯವುನೆ ಬುಡು."

"ಇಂತ ಕ್ಯಲಸ ಅವುನಿಗೆ ಭಾಳ ಸುಲಬ ದ್ವಡಪ್ಪ, ಯಾಕೆ ಅಂದ್ರೆ ದೇವೇಗೌಡ್ರು ಟೋಟಲ್ಲಿ ಮೂರು ಸರಕಾರ ಕೆಡವಿದ್ರು. ಈಗಿವುನು ಆಗ್ಲೆ ಯರಡು ಸರಕಾರ ಕೆಡಗಿದಂಗಾಯ್ತು, ಮುಂದೆ ಇನ್ನು ಏಟು ಸರಕಾರ ಕೆಡವತನೊ ಏನೊ."

"ಅದೇನಾರ ಆಗ್ಲಿ ಈ ಸರಕಾರ ಹೋದ್ರೆ ಸಾಕು ಕಣೊ."

"ಹೋದೇಟಿಗೆ ನಮ್ಮ ದ್ವಡಪ್ಪುನ್ನ ಸೇರಿಸಿಗಂಡು ವಳ್ಳೆ ಪಾರ್ಟಿ ಮಾಡನ ಇರೊ ಉಗ್ರಿ!" ●



ಗಂಟಲುನೋವು

ಕಂಬಿ ಕಿತ್ತದ್ದು

...ತಿವನ ಗಂಟಲಲ್ಲಿ ನೋವಾಗಿತ್ತು. ಬಹಳ ತಿಂಗಳಿದ್ದ ಆ ನೋವನ್ನು ...ಗೆ ತೋರಿಸಲು ಹೋಗಿರಲಿಲ್ಲ. ಕೊನೆಗೊಂದು ದಿನ ಅದು ತೀರಾ ...ಗಿ ಮನಸ್ಸಿಲ್ಲದ ಮನಸ್ಸಿನಿಂದ ವೈದ್ಯರಲ್ಲಿಗೆ ಹೋದ. ವೈದ್ಯ ಗಂಟಲಿಗೆ ...ಟ್ ಬಿಟ್ಟು, ನೀರು ಕುಡಿಸಿ, ಕೆಮ್ಮಿಸಿ ಪರೀಕ್ಷಿಸಿದ. ಅವನು ವಿವರವಾಗಿ ...ಕ್ಷಿಸುತ್ತಿದ್ದುದನ್ನು ಗಮನಿಸಿದ ರೋಗಿ ದಿಗಿಲುಗೊಳ್ಳತೊಡಗಿದ. ಕೊನೆಗೆ ...ನು ಕೆಮ್ಮಿದ. ರೋಗಿಗೆ ಡಾಕ್ಟರ್ ಕೆಮ್ಮು ನೋಡಿ ಸಣ್ಣ ನಗೆ ಬಂತು. ...ಗೂ ಗಂಟಲು ನೋವಾದರೆ, ಎಂದುಕೊಳ್ಳುತ್ತಿದ್ದಂತೆ ಡಾಕ್ಟರು ಆತನಿಗೆ ...ಕಾರ ಮಾಡಿದಂತೆ 'ಏನಿಲ್ಲ, ತೊಂದರೆಯೇನಿಲ್ಲ, ಸ್ವಲ್ಪ ಊದಿಕೊಂಡಿದೆ. ...ಗಿರಲಿಕ್ಕಿಲ್ಲ' ಅಂದ. ರೋಗಿಗೆ ಜೀವ ಬಂದಂತಾಯಿತು. ಆದರೆ 'ಗಡ್ಡೆ ...ಎಂದಿದ್ದರೆ ಚೆನ್ನಾಗಿತ್ತು, ಈತ ತನ್ನನ್ನು ಇನ್ನೂ ಹೆದರಿಕೆಯಲ್ಲೇ ...ತ್ತಿದ್ದಾನಲ್ಲ ಎಂದು ಆತಂಕವಾಯಿತು. ವೈದ್ಯ ಹುಳಿಹುಳಿ ಮುಖ ...ಕೊಂಡು, 'ಕಾಫಿ ಕುದೀತಿರಾ?' ಅಂದ.

...ಇಲ್ಲ, ಕಾಫಿ ಅಭ್ಯಾಸವಿಲ್ಲ.'

...ವಿಸ್ಕಿ, ಬ್ರಾಂದಿ ಇತ್ಯಾದಿ?'

'ಬಿಟ್ಟು ಮೂವತ್ತು ವರ್ಷವಾಯಿತು.'

'ಸಿಗರೇಟ್?'

'ಬಿಟ್ಟು ಐದು ವರ್ಷವಾಯಿತು.'

ಡಾಕ್ಟರ್ ಅವನನ್ನು ವಿಚಿತ್ರ ಪ್ರಾಣಿ ಎಂಬಂತೆ ಕಣ್ಣಗಲಿಸಿ ನೋಡಿ, 'ಹೆದರಿಕೋಬೇಡಿ, ಗಡ್ಡೆ ಇದೆ. ಆದರೆ ಅದು ಕ್ಯಾನ್ಸರ್ ಗಡ್ಡೆಯಾಗಿರಲಿಕ್ಕಿಲ್ಲ. ನಾಳೆ ಬನ್ನಿ. ಇನ್ನೂ ಪರೀಕ್ಷೆ ಮಾಡೋದಿದೆ' ಅಂದ.


ಅಲ್ಲಿಂದ ಹೋದರೆ ಸಾಕೆಂದಿದ್ದ ರೋಗಿ ಎದ್ದು ಹೊರಗೆ ಬಂದ. ಕಾಲು ದುರ್ಬಲವಾಗಿದ್ದವು. ಧ್ವನಿ ಕ್ಷೀಣವಾಗಿತ್ತು. ಯಾವುದೂ ಹುಮ್ಮಸ್ಸು ಹುಟ್ಟಿಸುತ್ತಿರಲಿಲ್ಲ. ಮುಂದಿನ ತಿಂಗಳಿಗೆ ಎಪ್ಪತ್ತು ತುಂಬುತ್ತದೆ; ಬಾಯಲ್ಲಿ ಮೂರೋ ನಾಲ್ಕೋ ಹಲ್ಲುಗಳಿವೆ. ಹೆಂಗಸರು ಸ್ಫೂರ್ತಿ ಹುಟ್ಟಿಸುತ್ತಿಲ್ಲ, ಸೂರ್ಯೋದಯ ಆನಂದ ಕೊಡುತ್ತಿಲ್ಲ, ಜೀವರಸ ಮೈಯಲ್ಲಿ ಹರಿಯುವುದಕ್ಕೆ ಬದಲು ನಿಂತು ಕೊಳೆತಂತಿದೆ. ವೈದ್ಯನ ಶಾಪ್‌ನಿಂದ ಮೆಟ್ಟಿಲು ಇಳಿಯುವಾಗ ಒಂದನ್ನು ಬಿಟ್ಟು ಕಾಲಿಟ್ಟು ಬಿದ್ದುಬಿಡಬಹುದೆಂದು ಹೆದರಿಕೆ. ಮೆಟ್ಟಿಲು ಇಳಿಯದೆ ಕ್ಲಿನಿಕ್‌ನ ಮಟ್ಟದಲ್ಲೇ ನಡೆದ. ಅಲ್ಲೊಂದು ಸಿಗರೇಟ್ ಅಂಗಡಿ. ಆಶೆಯಿಂದ ನೋಡುತ್ತ ನಿಂತ. ಒಂದು ಪ್ಯಾಕ್ ಕೊಂಡು ಜೇಬಿಗೆ ಹಾಕಿ ಹೊರಟಾಗ ಬೆಂಕಿಪೊಟ್ಟಣ ಬೇಕೆಂದು ಅನ್ನಿಸಿತು. ಅದನ್ನೂ ಕೊಂಡು ಮುಂದೆ ಹೋದರೆ ಮದ್ಯದ ಅಂಗಡಿ ಮತ್ತು ಬಾರ್. ಒಳಗೆ ಹೋಗಿ, 'ಒಂದು ಕೊನ್ಯಾಕ್, ಐಸ್....' ಅಂದ.

'ನೀವು ಸ್ಮಿತ್‌ಸನ್ ಅಲ್ಲವೆ?'

'ಹೌದು.'

'ನೀವು ಕುಡೀತಿರಲಿಲ್ಲ.'

'ಹೌದು ಆದರೆ ಈಗ ಕುಡೀತಿದೇನೆ.'



ಕುಡಿದು ಸಿಗರೇಟ್ ಸೇದುತ್ತ ಕೂತ. ಕೂತಿದ್ದ ಆರಾಮಾಗಿದ್ದ ಕುರ್ಚಿ ಹಾಸಿಗೆಯಷ್ಟು ಸೌಕರ್ಯ ನೀಡಿತು. ಸಿಗರೇಟ್ ಎಳೆಯುತ್ತ ಹೋಗೆಬಿಟ್ಟ. ತನ್ನ ಜೀವದ ಗೆಳೆಯನಂತೆ ಉಂಗುರುಂಗುರವಾಗಿ ಮೇಲೇಳುವ, ಪ್ರೀತಿಯಿಂದ ಸ್ಪರ್ಶಿಸುವ ಹೊಗೆ. ಕಣ್ಣೆದುರಿನ ಎಲ್ಲರೂ ಅಸ್ಪಷ್ಟವಾಗುತ್ತಲೇ ಮೆಲ್ಲಗೆ ಮೈಯನ್ನು ತುಂಬುತ್ತಿರುವ ಹುಮ್ಮಸ್ಸು. ಬಹುಕಾಲದ ಬಳಿಕ ನಕ್ಕ ಆತ. ಮತ್ತೊಂದು ಸ್ಮಾಲ್ ಬ್ರಾಂದಿ ಹೇಳಿ ಆನಂದದಿಂದ ಇಳಿಸಿ ಮೇಲೆದ್ದ. ಮನೆಗೆ ಬಂದೊಡನೆ, 'ಡಾಕ್ಟರ್ ಏನೆಂದರು?' ಅಂದಳು ಹೆಂಡತಿ.

'ಏನಿಲ್ಲ, ಎಲ್ಲ ಸರಿಯಾಗಿದೆ' ಅಂದ.

'ಔಷಧಿ ಕೊಡಲಿಲ್ಲವಾ?'

'ನಾಳೆ ಇನ್ನಷ್ಟು ಪರೀಕ್ಷಿಸಿ ಕೊಡ್ತಾರೆ' ಎಂದು ಅವಳನ್ನು ಎಳೆದು ತೊಡೆಯಮೇಲೆ ಕೂರಿಸಿಕೊಂಡ. ತನ್ನ ವರ್ತನೆಯಿಂದ ತಾನೇ ಚಕಿತನಾದ ಆತ 'ಹಾಸಿಗೆ, ಹಾಸಿಗೆ' ಎಂದು ಗೊಣಗಿದ.

ಮರುದಿನ ಡಾಕ್ಟರ್ ಮತ್ತೊಮ್ಮೆ ಪರೀಕ್ಷೆ ಮಾಡಿ 'ಸಾರಿ ಗಡ್ಡೆ ಇಲ್ಲ. ನಿನ್ನೆ ತಪ್ಪಾಗಿ ಹೇಳಿದೆ. ಎಲ್ಲ ಸರಿಯಾಗಿದೆ. ನಾಲ್ಕು ದಿನ ವಿಶ್ರಮಿಸಿಕೊಳ್ಳಿ' ಅಂದ.

'ಥ್ಯಾಂಕ್ಯೂ ಡಾಕ್ಟರ್' ಎಂದ ಮಾಜಿ ರೋಗಿ ಮನೆಯ ಕಡೆ ಹೊರಟ...


ಮಾರ್ಕ್ವೆಸ್‌ನ ಕತೆಯೊಂದರ ಒಂದು ಪ್ಯಾರಾ ನೋಡಿ ಅಚ್ಚರಿಗೊಂಡು ಮೇಲಿನದನ್ನು ಬರೆದಿದ್ದೇನೆ.

-ಜುಲೈ 6, 1994

ರೆಕಾರ್ಡ್ ಬಿಸಾಕಿ ಸಾ

ಆಯೋಧ್ಯೆ ತೀರ್ಪು ಬಂದಿತ್ತು. ಅದು ಬರುವುದಕ್ಕೆ ಮುನ್ನ ಇಡೀ ದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ; ಭಾರತೀಯರಲ್ಲಿ ಭಯದ ವಾತಾವರಣ ಮೂಡಿದೆ; ಆತಂಕ, ಕುತೂಹಲದಿಂದ ತೀರ್ಪನ್ನು ನಿರೀಕ್ಷಿಸುತ್ತಿದ್ದಾರೆ ಎಂದೆಲ್ಲ ಬಿಂಬಿಸಲಾಗಿತ್ತು. ಆದರೆ ಒಂದು ವರ್ಗದ ಜನ ಇದ್ದರು. ಅವರಿಗೆ ಬಾಬರಿ ಮಸೀದಿ ಸಮಸ್ಯೆ ಸಮಸ್ಯೆಯಾಗಿಯೇ ಕಂಡಿರಲಿಲ್ಲ. ಅಲ್ಲಿ ರಾಮಮಂದಿರ ಕಟ್ಟುಸುತ್ತಾರೋ, ಮಸೀದಿನೇ ನಿರ್ಮಿಸುತ್ತಾರೋ ಎಂಬುದರ ಬಗ್ಗೆ ಅವರಿಗೆ ಗಮನವೇ ಇರಲಿಲ್ಲ. ಈ ಪವಿತ್ರ ದೇಶದಲ್ಲಿ ಜನರಿಗೆ ವಸತಿ ಸೌಲಭ್ಯ

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಇಲ್ಲದಿರಬಹುದಾದರೂ ದೇವಸ್ಥಾನ, ಮಸೀದಿ, ಚರ್ಚುಗಳಿಗೆ ಬರ ಇಲ್ಲ. ಆಯಕಟ್ಟಿನ ಜಾಗ ಕಣ್ಣಿಗೆ ಬಿದ್ದರೆ ಸಾಕು ಅಲ್ಲಿ ಪೂಜಾಮಂದಿರ ಎಬ್ಬಿಸುತ್ತೀವಿ. 27 ಕೋಟಿ ಜನರು ಒಂದು ಹೊತ್ತು ಊಟ ಮಾಡಿ ರಾತ್ರಿ ನೀರು ಕುಡಿದು ಹೊಟ್ಟೆ ತುಂಬಿಸಿಕೊಳ್ಳುತ್ತಾರಂತೆ. ಆದರೂ ಸರ್ಕಾರಿ ದಾಸ್ತಾನು ಮಳಿಗೆಗಳಲ್ಲಿ ಅರವತ್ತು ಕೋಟಿ ಟನ್ ಆಹಾರ ಕೊಳೆಯುವುದಕ್ಕೆ ಬಿಟ್ಟು ಇಲಿಗಳಿಗೆ ಮೃಷ್ಟಾನ್ನ ಭೋಜನ ಒದಗಿಸ್ತಿದೀವಿ. ಈ ದೇಶದಲ್ಲಿ ಮನುಷ್ಯರಿಗಿಂತ ಇಲಿಗಳೇ ಹೆಚ್ಚು ದಷ್ಟಪುಷ್ಟವಾಗಿ ಆರೋಗ್ಯವಾಗಿವೆಯಂತೆ. ದೈವಭಕ್ತಿಯ ಪರಾಕಾಷ್ಠೆ ಎಂದೇ ಇದನ್ನು ವ್ಯಾಖ್ಯಾನಿಸಲಾಗುತ್ತದೆ. ಏಕೆಂದರೆ ಮೂಷಿಕ ವಿಘ್ನೇಶ್ವರನ ವಾಹನ ಅಲ್ಲವಾ ಅದಕ್ಕೆ.. ವಾಹನಕ್ಕೇ ಈ ಪಾಟಿ ಸಮೃದ್ಧ ಆಹಾರ ಸರಬರಾಜು ಮಾಡುವಾಗ ಇನ್ನು ದೇವರನ್ನು ಮರೆತರೆ ಆಗುತ್ಯೇ. ಸೊಗಸಾದ ನೈವೇದ್ಯೇನೆ ಮಾಡ್ತೀವಿ. ಅದಕ್ಕೆ ಇರಬೇಕು ಆ ವರ್ಗದ ಜನರಿಗೆ ದೇವರ ಮನೆ, ಊಟ ಕುರಿತು ಚಿಂತೆ ಕಾಡಿರಲಿಲ್ಲ. ಆದರೆ ತೀರ್ಪು ಬರುತ್ತೆಎಂಬ ದಿವಸ ಮದ್ಯ ಮಾರಾಟ ನಿಷೇಧ ಮಾಡಿತ್ತಲ್ಲ ಸರ್ಕಾರ ಅನ್ನೋದು ಅದು ಭಾರೀ ನೋವು ತಂದಿತ್ತು. ಹಿಂಗೆ ಮಾಡ್ತಾರೆ ಅನ್ನೋದು ಗೊತ್ತಿತ್ತು. ಮೊದಲೇ ಕೊಂಡಿಟ್ಟುಕೊಳ್ಳಬಹುದಾಗಿತ್ತು, ನಿಜ. ಹೊಟ್ಟೆಬಟ್ಟೆಗೆ ನೇರ ಇಲ್ಲದ ಜನ. ಅವತ್ತು ದುಡ್ಡು ಅವತ್ತು ಕುಡೀಬೇಕಾಗಿತ್ತು. ಪಾಪ ಅವರ ಫಜೀತಿ ನೋಡುವುದಕ್ಕೇ ಆಗ್ತಿರಲಿಲ್ಲ. ಅವತ್ತು ಟಿವಿ ನೋಡಬೇಕಿತ್ತು. ಹೆಂಡಕ್ಕಾಗಿ ಆ ಅಂಗಡಿಯಿಂದ ಈ ಅಂಗಡಿಗೆ, ಅಲ್ಲಿಂದ ಇನ್ನೊಂದ್ಕಡೆಗೆ ಪರದಾಡಿ ಹೋದ್ರು. ಒಂದು ದಿನ ಆಗಿದ್ರೆ ಹೆಂಗೋ ನಿಭಾಯಿಸುತ್ತಿದ್ದರು. ಎರಡು ದಿನಾನೂ ಇರಲಿಲ್ಲ ಅಂದಾಗ ಅವರ ಪ್ರಾಣ ಹೋಗುವುದೊಂದು ಬಾಕಿ ಹಂಗಾಗಿದ್ದರು. ಮೂರನೆ ದಿನ ಆದ್ರೂ ಆ ಪರಮಾತ್ಮನ್ನ ಸೇವಿಸಿ ಜೀವಕ್ಕೆ ಸಮಾಧಾನ ತರಬಹುದು ಅಂದರೆ ಗಾಂಧಿ ಜಯಂತಿ ಬಂದು ಕುಂತದೆ. ಅವತ್ತೂ ಮದ್ಯ ಮಾರಾಟ ನಿಷೇಧ! ಕುಡುಕರ ಸಂಕಟ ಅರಿತಿರೋರು ಸಂದಿಗೊಂದೀಲಿ ಮಾಡುತ್ತಾ 'ಸರ್ವೇಜನೋ ಸುಖಿನೋಭವಂತು' ಆದರೂ ಅನ್ನಿ!

ಇದನ್ನೇ ಮೆಲುಕು ಹಾಕುತ್ತಾ ಟಿವಿ ಮುಂದೆ ಕೂತಿದ್ದೆ. ತೀರ್ಪು ಬಂತು. ರಾಜಕೀಯ ಪಂಡಿತರ ವಿಶ್ಲೇಷಣೆ ಕೇಳ್ತಾ ನೋಡ್ತಾ ಇದ್ದೆ. 'ನಾನೊಪ್ಪಿಲ್ಲ ಬುಡಿ ಸಾ' ಎಂಬ ಪ್ರತಿಭಟನೆಯ ಧ್ವನೀಲಿ ಹೇಳ್ತಾ ಕ್ಯಾತ ಒಳಕ್ಕೆ ನುಗ್ಗಿದ.

ಈ ಮಹಾರಾಯನ ತಲೆ ಒಳಗೆ ಏನಿದೆಯೊ? ಅವನು ಯಾವುದನ್ನು ಒಪ್ಪಲಿಲ್ಲವೊ? ಯಾವುದನ್ನು ಒಪ್ಪಿದನೊ? ತಿಳಿಯುವುದು ಹೇಗೆ?

'ಏನ್ ಒಪ್ಪಲಿಲ್ಲವೊ?' ಅಂದೆ.

'ನೀವು ಮಪ್ಪು ಸಾ. ಟಿವಿ ಮುಂದೆ ಕುಂತಿದೀರಿ. ಯಾವ್ದ ಅಂತ ಕೇಳ್ತಾ ಕುಂತದೀರಲ್ಲಾ? ಅದೇ ಸಾ ಅಯೋಧ್ಯೆ ತೀರ್ಪು' ಅಂದ.

ಹಳೇ ನ್ಯಾಯ. ಒಬ್ಬರು ಇಬ್ಬರಲ್ಲ, ಮೂವರು ನ್ಯಾಯಾಧೀಶರು ಕೊಟ್ಟಿರುವ ತೀರ್ಪು ಅದು. ಅದಕ್ಕಾಗಿ ಅವರು ಪಟ್ಟಿರುವ ಶ್ರಮ ಎಷ್ಟು? ಹಲವಾರು ದಾಖಲೆಗಳನ್ನು ಪರಿಶೀಲಿಸಿದ್ದಾರೆ. ನೂರಾರು ತೀರ್ಪುಗಳನ್ನು ನೋಡಿದ್ದಾರೆ. ಹಲವು ರೀತಿಯ ವ್ಯಾಖ್ಯಾನಗಳನ್ನು ಆಲಿಸಿದ್ದಾರೆ. ನಂತರ ತೀರ್ಪು ನೀಡಿದ್ದಾರೆ. ಅಂತಹದ್ದರಲ್ಲಿ ಇವನು ಕಡ್ಡಿಪುಡಿ ಹಾಕಿದ ಮೇಲೆ ನೀರಲ್ಲಿ ಬಾಯಿ ಮುಕ್ಕಳಿಸಿ ಉಗಿದಷ್ಟೇ ಸಲೀಸಾಗಿ ತೀರ್ಪಿನ ಬಗ್ಗೇನೆ ಜಡ್ಜ್‌ಮೆಂಟ್ ಕೊಡ್ತಾ ಬದ್ದವ್ನೆ. ಅವನ ಬಗ್ಗೆ ಕೋಪ ಬಂದಿತ್ತು.

'ಹೋಗಲೋ ಬಡ್ಡೆತ್ತದೆ' ಅಂದೆ.

'ವಸಿ ಸಾ, ಕ್ವಾಪ ಮಾಡ್ಕೊಬ್ಯಾಡಿ. ಕೇಳಿ ಸಾ. ನೀವೆಲ್ಲಿ ಉಟ್ಟಿದ್ರಿ ಸಾ?'

'ಅದ್ಕೂ ಇದ್ಕೂ ಏನ್ಲ ಸಂಬಂಧ?'

'ಹೇಳಿ ಸಾ.'

'ನಮ್ಮೂರಲಿ.'

ಸುಳ್ಳು ಹೇಳಿರಲಿಲ್ಲ. ಸರ್ಕಾರಿ ದಫ್ತರುಗಳಲ್ಲಿ ದಾಖಲಾಗಿದ್ದ ಸಂಗತಿ ಅದು.

'ರೆಕಾರ್ಡ್ ಬಿಸಾಕಿ ಸಾ. ಅದಲ್ಲ ಸಾ. ನೀವು ನಿಜವಾಗಲೂ ಹುಟ್ಟಿದ್ದು ಎಲ್ಲಿ?'

ಕ್ಯಾತನ ಮಾತಿನಲ್ಲೂ ಹುರುಳಿತ್ತು. ಚೊಚ್ಚಲು ಬಸಿರಿ ಎಂದು ತಾಯಿಯನ್ನು ತೌರಿಗೆ ಕರೆಸಿಕೊಂಡಿದ್ದರು. ಅಲ್ಲೇ ನಾನು ಜನಿಸಿದ್ದು. ನೀಲಗಿರಿಯಲ್ಲಿ ಜನಿಸಿದ್ದ ನಾನು ದಾಖಲೆ ಪುಸ್ತಕದಲ್ಲಿ ನಮ್ಮೂರಿನಲ್ಲಿ ಜನಿಸಿದ್ದೆ. ಅದನ್ನು ಹೇಳಿದೆ.

'ಅಲ್ವಾ ಸಾ. ನಿಮ್ಮ ಮಗ ಹುಟ್ಟಿದ್ದೆಲ್ಲಿ?'

ಡಿಟೋಕೇಸು. ಹೆಂಡತಿ ತೌರಿನಲ್ಲಿ ಅವನ ಜನನ. ದಾಖಲಾತಿಗೆ ನಮ್ಮೂರು. ಅದನ್ನೂ ತಿಳಿಸಿದೆ.

'ಹಂಗಾರೆ ಬುಡಿ ಸಾ ನಿಮ್ದೂ ರಾಮನ್ದೇ ಕೇಸು' ಅಂದ!

'ಲೇ ಅದೇನ್ ಸರಿಯಾಗಿ ಬೊಗಳ್ಲೆ' ಅಂದೆ.

ಕ್ಯಾತೇಗೌಡರು ಪುರಾಣ ಬಿಚ್ಚಿದರು. ಚೊಚ್ಚಲ ಬಾಣಂತನ ತೌರಿನಲ್ಲೇ ನಡೆಯಬೇಕು ಎನ್ನುವುದು ಹಿಂದೂ ಸಂಪ್ರದಾಯ. ಹೀಗೆ ನಡೆಯಲೇಬೇಕು ಎಂಬುದು ಅವರ ಶ್ರದ್ಧೆ, ನಂಬಿಕೆಯ ಭಾಗವೇ ಆಗಿದೆ. ಎಂತಹ ಬಡವನಾದರೂ ಮಗಳ ಬಾಣಂತನವನ್ನು ತೌರಿನಲ್ಲೇ ಮಾಡುತ್ತಾರೆ. ಶ್ರೀರಾಮ ಕೌಸಲ್ಯೆಯ ಮೊದಲ ಮಗ. ಅಂದಮೇಲೆ ಅವನು ಹುಟ್ಟಿದ್ದು ಕೌಸಲ್ಯೆಯ ತೌರುಮನೆಯಲ್ಲಿಯೇ ಹೊರತು ಅಯೋಧ್ಯೆಯಲ್ಲಲ್ಲ! ಆ ಊರಲ್ಲೇ ಜನ್ಮ ತಾಳದೇ ಇರುವಾಗ ಅಲ್ಲಿ 'ರಾಮಜನ್ಮ ಸ್ಥಳ' ಇರಲು ಸಾಧ್ಯವೇ ಇಲ್ಲ!

'ನೀವೇನಂತೀರಿ ಸಾ' ಕೇಳಿದ.

'ಅಲ್ಲ ಕಣೊ ಕ್ಯಾತ, ರಾಮಾಯಣದಲಿ.....'

'ಓಽ ಪುಸ್ತಕದ ಬದನೆಕಾಯಿ ಬ್ಯಾಡಿ ಸಾ. ನಿಮ್ದೂ ಬರ್ದವ್ರೆ, ನೀವು ಹುಟ್ಟಿದ್ದು ನಿಮ್ಮೂರಿನಲಿ ಅಂತಾವ. ನೀವುಟ್ಟಿದ್ದು ಅಲ್ಲಾ... ದಾಖಲೆ ಬಿಸಾಕಿ. ನಂಬಿಕೆ ಹೇಳಿ.'


ನಂಬಿಕೆ ಪ್ರಶ್ನೆ ಬಂದರೆ ರಾಮಚಂದ್ರ ಪ್ರಭು ಕೌಸಲ್ಯೆಯ ತೌರಿನಲ್ಲೇ ಹುಟ್ಟಿರಬೇಕು! ಇದೂ ಒಂದು ನಂಬಿಕೆ. ರಾಮಾಯಣದಲ್ಲಿ ಅವನು ಅಯೋಧ್ಯೆಯಲ್ಲೇ ಹುಟ್ಟಿದ ಅನ್ನುತ್ತೆ ಅದೂ ಒಂದು ನಂಬಿಕೆ. ಯಾವುದಕ್ಕೂ ನಿಖರವಾದ ದಾಖಲೆ, ಪುರಾವೆ ಇಲ್ಲ. ಕ್ಯಾತನಿಗೆ ಉತ್ತರಿಸುವುದಕ್ಕೆ ಮೊದಲು ಕೊಂಚ ದಿಗಿಲಾಯಿತು. ನಮ್ಮದು ಮೊದಲೇ ವಠಾರದ ಮನೆ. ಕೆಮ್ಮುಕ್ಯಾಕರಿಸುವಿಕೆಯೂ ಇಡೀ ವಠಾರಕ್ಕೇ ತಿಳಿಯುತ್ತೆ. ಇನ್ನು ಶ್ರೀರಾಮನ ವಿಷಯ ಹಿಂಗೆಲ್ಲ ಮಾತನಾಡುವ ಜನರೂ ಇದ್ದಾರೆ ಅಂತ ತಿಳಿದರೆ...

'ಮೆಲ್ಲಗೆ ಮಾರಾಯ... ಭಜರಂಗಿಗಳು ಕೇಳಿಸ್ಕೊಂಡಾರು' ಎಂದು ಎಚ್ಚರಿಕೆ ಕೊಟ್ಟೆ.

'ಅವ್ರೇನ್ ತಿಳೀತಿದೆ ಬುಡಿ ಸಾ... ಮಿದ್ರ ಯಾರ್ದೋ ಅಡ ಇಟ್ಟು ಕುಂತವೆ' ಅಂದ!

'ಅದ್ಕೆ ಕಷ್ಟ ಕಣೋ ಮಾರಾಯ' ಎಂದು ಹೇಳುತ್ತಾ ಉಪಾಯದಿಂದ ಸಾಗ ಹಾಕಿದೆ.

ರಾಮಜನ್ಮ ಸ್ಥಳ ಕುರಿತಂತೆ ಕ್ಯಾತನ ಚಿಂತನೆಗಳನ್ನೇ



ಮನನ ಮಾಡುತ್ತಾ ಇದ್ದೆ. ಅದು ಯಾವಾಗಲೋ ನಿದ್ದೆ ಆವರಿಸಿರಬೇಕು.

* * * * * *

ಒಂದು ಗ್ರಾಮ. ಅಲ್ಲೊಂದು ಬುದ್ಧಿಮಾಂದ್ಯ ಹುಡುಗ. ಗ್ರಾಮಸ್ಥರಿಗೆ ಸಮಸ್ಯೆಯಾಗಿದ್ದ. ಬುದ್ಧಿಮಾಂದ್ಯತೆಯದ್ದಲ್ಲ, 'ಇವನು ಯಾರಿಗೆ ಹುಟ್ಟಿದೋನು' ಅನ್ನುವ ಸಮಸ್ಯೆ!

'ಯಾರ್ಲ ನಿಮ್ಮಪ್ಪ' ಎಂದು ಯಾರಾದ್ರೂ ಕೇಳಿದ್ರೆ 'ನೀನೇಯ' ಅನ್ನೋದು. 'ನಾನಲ್ಲ ಕನ್ಲ' ಅಂದ್ರೆ 'ಅವ್ನು' ಅಂತ ಕಣ್ಣಿಗೆ ಬಿದ್ದೋರ್ನ ತೋರಿಸೋದು. ಅಂತ ಯಂಗ್ಸ ಬಡ್ಡೆತ್ತುದು ಅದು. ಅವರವ್ವನ್ನ ಕೇಳನ ಅಂದ್ರೆ ಮೊದ್ಲೇ ಗಂಡಸತ್ತ ಮುಂಡೇದು. ಗಂಡ ಸತ್ತ ವರ್ಷದ ಮೇಲೆ ಹುಟ್ಟಿದ ಮಗ. 'ಹೆಂಗೇಲ್ಲಿ' ಅಂತಾವ ಮುಸಿಮುಸಿ ಆಳೋದೊಂದ ಕಲ್ತಿತ್ತು. ಊರಿಗೆಲ್ಲ ಗುಮಾನಿ- ಪಟೇಲರ ಕೆಲಸವೇ ಇದು ಅಂತಾವ. ಪಟೇಲನೂ ಅಂತೋನೇಯ. ಕಂಡ ಕಡೆ ಹುಲ್ಲ ಮೇಯ್ಯೋ ಬುದ್ಧಿಯೋನು. ಇಳೀ ರಾತ್ರಿಲಿ ಯಂಗ್ಸನ ಮನೆ ಹತ್ರ ಪಟೇಲ ಸುಳಿದಾಡಿದಂಗಾಯ್ತು ಅಂತ ಯಾರೋ ಹೇಳಿದ್ರು. ಪಟೇಲ ಯಂಗ್ಸನ ಅಪ್ಪ ಅನ್ನೋದ್ಕೆ ಸಾಕ್ಷಿ ಸಿಕ್ಕಿದಂಗಾಯ್ತು, ಗುಮಾನಿಯಾಗಿದ್ದುದು ಬಲವಾದ ನಂಬಿಕೆಯಾಯಿತು.

ಯಂಗ್ಸನಿಗೋ ಕಿತ್ತು ತಿನ್ನೋ ಬಡತನ. ಒಂದೊ... ಇದ್ರೆ ಒಂದೊತ್ತಿಗೆ ಇಲ್ಲ.

'ಪಟೇಲನ ಮಗನಾಗಿ ಹುಟ್ಟಿಯೂ ಈ ಬಡತನ...' ಕೇಳಿಕೊಂಡರು ಗ್ರಾಮಸ್ಥರು.

ಹುಡುಗನ ಜವಾಬ್ದಾರಿ ಹೊತ್ತರು.

ಬುದ್ಧಿಮಾಂದ್ಯ ಹುಡುಗನಿಗೆ ಬದುಕುವ ದಾರಿಬೇಕ... ಪಟೇಲನ ಬಳಿಗೆ ಹೋದರು. 'ಕೊಡು ಇವ... ಪಾಲ' ಅಂದ್ರು. 'ಅದ್ಯಾರುಗ್ಗಟ್ಟಿದ್ದೋ ಏನೋ ನಾ... ಕೊಡ್ಲಿ' ಅಂತ ಜೋರು ಮಾಡಿದ ಪಟೇಲ. 'ನಿನ್ನುಟ್ಟೋನೇ... ಕನಯ್ಯಾ ಪಟೇಲ' ಅಂದ್ರು ಗ್ರಾಮಸ್ಥರು. 'ಯಾವ್ನೋ... ಳ್ದೋನು' ಅಂದ ಅವ್ನ. 'ಊರೆಲ್ಲ ನಂಬದೆ ಕನ...' ಅಂದ್ರು ಜನ. 'ನಿಮ್ಮ ನಂಬಿಕೇಯ ನೀರ ಮೇಲಿ ಬರ...' ಅಂತ ಉಬಾಯಿಸಿ ಮಾತಾಡ್ದ ಪಟೇಲ.

ಹುಡುಗನ ಬದುಕಿನ ಪ್ರಶ್ನೆ ಇತ್ತಲ್ವಾ... ಇವನು ಹಿಂ... ಮಾತು ಕೇಳಾಕಿಲ್ಲ ಅಂತಾವ ಕೋರ್ಟು ಮೆಟ್ಟಲೇರಿದ... ಈ ವ್ಯಾಜ್ಯ ವಿಚಾರಣೆಗೆ ಬಂತು. ಸಾಕ್ಷಿ ಹೇಳೋಕೆ ದಿನ... ಬಂದಿತ್ತು. ಹುಡುಗ ಕಟಕಟೆಗೆ ಬಂದ.

'ಯಾರಪ್ಪ ನಿನ್ನ ತಂದೆ' ಅಂತ ಕೇಳಿದ್ರು ಲಾಯ...

'ಪಟೇಲ್ರು ಅನ್ನು' ಅಂತ ಹೇಳಿ ಕೊಟ್ಟಿದ್ರು. ಮೊದ... ಯಂಗ್ಸ. ಅದ ಮರ್ತ. ಮಾಮೂಲಿನಂತೆ 'ನೀವೇ...' ಅಂದ!

ಲಾಯರು ಗಲಿಬಿಲಿಗೊಂಡರು. 'ಜಡ್ಜ್ ನೋ... ಹೇಳಪ್ಪಾ ಯಾರು ನಿನ್ನ ತಂದೆ ಅಂತಾವ' ಅಂದ...

'ಇವ್ರೇಯ' ಅಂತ ಜಡ್ಜ್ ತೋರಿಸಿದ!

ಲಾಯರುಗಳಿಗೆ ನಗೆ ಅನ್ನೋದು ಒಳಗಿ... ಗುದ್ಕೊಂಡು ಬರ್ತಿತ್ತು, ಆದರೆ ಸಾಹೇಬರಿಗೆ ಕೋ... ಬರಿಸಬಾರದು ಎಂದು ತಮ್ಮ ಹಿತ ನೆನಸಿಕೊಂ... ತಡ್ಕೊಂಡ್ರು.

ಅವನ ತಾಯಿ ಕರ್ಸಿದ್ರು. ಅವಳ್ದೂ ಅದೇ ಹ... ರಾಗ- 'ಹೆಂಗೇಲ್ಲಿ ಬುದ್ಧಿ' ಹಾಡಿದ್ಳು.

ಅರೆ ಹಿಂಗೇಳ್ತಾ ಬದ್ದವಳಲ್ಲ ಇವಳೆಲ್ಲೊ ಕಸ... ನೋಳೆ ಇರಬೇಕು ಅಂತ ಕೆಲವರು ಅಂದುಕೊಂ... ಮತ್ತೆ ಕೆಲವರು ಯಾರೋ ದೊಡ್ಡ ಮನುಷ್ಯರ ಹೆ... ಹೇಳೋಕೆ ಹೆದರಿ ಹಿಂಗೇಳ್ತಾ ಅವ್ಳೆ ಅಂತ ತಿಳ್ಕಂ... ಬಡಪಟ್ಟಿಗೆ ಇದು ಬಗೆಹರಿಯೋದಲ್ಲ ಅಂತ... ಡಿಎನ್‌ಎ ಟೆಸ್ಟ್ ಮಾಡ್ಸದೇ ಮದ್ದು ಅಂತಾವ ಅದ... ಬೇಕೋ ಎಲ್ಲಾನೂವೆ ಕಳ್ಸಕ್ಕೆ ಏರ್ಪಾಟು ಮಾಡಿ... ಅದರ ಫಲಿತಾಂಶನೂ ಒಸಿದಿನದಲೇ ಬಂತು. ... 'ಪಟೇಲನ ಕೂಸಲ್ಲ' ಅಂತಿತ್ತು ರಿಪೋರ್ಟು!

ಗ್ರಾಮಸ್ಥರ ನಂಬಿಕೆ ಹುಸಿಯಾಗಿತ್ತು!

ಮುಗೀತಲ್ಲ ಕೇಸಿನ ಕತೆ ಅಂತ ಜನ ಎಲ್ಲ ಹ್ಯಾಪುಮೊ... ಹಾಕಿಕೊಂಡಿದ್ದಾಗ... ಅವರ ಕಡೆ ಲಾಯ್ರು ಇದ್ನಲ್ಲ ಅವನ... ಮಾಡ್ದ....

'ಒಂದು ಸಬ್‌ಮಿಷನ್ ಮೈಲಾರ್ಡ್' ಅಂದ.

'ಏನ್ರಿ ಅದು... ಮತ್ತೆ ನಿಮ್ಮ ತಕರಾರು... ವೈಜ್ಞಾ... ಪರೀಕ್ಷೇನಲಿ ಪಟೇಲ ಈ ಹುಡುಗನ ತಂದೆ ಅಲ್ಲ ಅಂ... ಅಂತ ರೇಗಿದ್ರು ಜಡ್ಜು ಸಾಹೇಬರು.

'ಆದ್ರೆ ಒಂದು ಮೈಲಾರ್ಡ್' ಅಂದ ಲಾಯರು...

'ಏನ್ರಿ ನಿಮ್ಮಗೋಳು.'

'ಇದು ನಂಬಿಕೆಯ ಪ್ರಶ್ನೆ ಮೈಲಾರ್ಡ್. ಪಟೇಲ... ಇವನ ಅಪ್ಪ ಅಂತ ಇಡೀ ಊರು ನಂಬಿದೆ. ಅಲಹಾಬಾ... ಹೈಕೋರ್ಟ್‌ನಲ್ಲಿ.....'

ತಕ್ಷಣ ಎಚ್ಚರ ಆಯಿತು.

ಸದ್ಯ ಬರೀ ಕನಸು!

ಕಳೆದೊಂದು ಸಂಚಿಕೆಯಲ್ಲಿ ಕರ್ನಾಟಕದ ಇಂದಿನ ಮೂರು ಸಮಸ್ಯೆಗಳ ಬಗ್ಗೆ ಕಾರ್ಟೂನ್ ಪ್ರಕಟವಾಗಿತ್ತು, ಆದರೆ ಇನ್ನೆರಡು ಗಂಭೀರ ಸಮಸ್ಯೆಗಳಿವೆ.

ನಮ್ಮ ಅಂದಕಾಲತ್ತಿಲ್ ಸಂಶೋಧಕ ವ್ಯೋಮ ಜಂಗಮ ಮೂರ್ತಿ ಚಿಮೂ ಮತ್ತು ಅವರು ಆಗಾಗ್ಗೆ ಅಹಿಂದಗಳ ಬಗ್ಗೆ ಅಸಹನೆಯಿಂದ ಕಾರಿಕೊಳ್ಳುವುದನ್ನು ಕೊಂಚವೂ ಸೆನ್ಸಾರ್ ಮಾಡದೆ, ಒಂಚೂರು ಮುಜುಗರ ವಿಲ್ಲದೇ ಮುಖಪುಟದಲ್ಲೇ ಪ್ರಕಟಿಸುವ ವಿಕೃತ ಕನ್ನಡ ಕೇಸರಿ ದೈನಿಕವೊಂದು.... ಇವೇ ಆ ಇನ್ನೆರಡು ಸಮಸ್ಯೆಗಳು. ಜೀವನವಿಡೀ ಶರಣಸಂಸ್ಕೃತಿ ಮತ್ತು ಸಾಹಿತ್ಯವನ್ನೇ ಓದಿ, ಸಂಶೋಧಿಸಿ, ಕಲಿಸಿ ವಿದ್ವಾಂಸರೆಂದು ಅನ್ನಿಸಿಕೊಂಡಿರುವ ಚಿಮೂರಲ್ಲಿ ಅದರ ಕಣದಷ್ಟಾದರೂ ವ್ಯಕ್ತವಾಗುತ್ತದೆಯೇ?

ಅದು ಟಿಪ್ಪುವಿಗೆ ದೇಶದ್ರೋಹದ ಪಟ್ಟಕಟ್ಟುವುದಿರಬಹುದು, ಬಾಬಾಬುಡನ್‌ಗಿರಿಯ ಇತಿಹಾಸವನ್ನು ಮೈಲುಗಲ್ಲುಗಳಿಂದ ಅಂದಾಜಿಸುವುದು ಇರಬಹುದು ಅಥವಾ ಹಂಪೆಯ ಕಪೋಲಕಲ್ಪಿತ ಉಗ್ರಗಾಮಿಗಳಿರಬಹುದು, ಇವುಗಳೆಲ್ಲ ಭೈರಪ್ಪ ಪೇಜಾವರ ಮತ್ತು ಶಂಕರಮೂರ್ತಿಯವರ ಜೊತೆ ಚಿಮೂ ಸ್ಪರ್ಧೆಗಿಳಿಯುತ್ತಾರೆ.

ಬಹುಮುಖಿ ಸಂಸ್ಕೃತಿಯ, ನಾಗರಿಕ ಸಮಾಜದಲ್ಲಿ ಒಬ್ಬ ಐತಿಹಾಸಿಕ ವ್ಯಕ್ತಿ ಅಥವಾ ಧಾರ್ಮಿಕ ಸ್ಥಳದ ಬಗ್ಗೆ ಹೇಗೆ ಮಾತಾಡಬೇಕೆಂಬುದು ಗೊತ್ತೇಯಿರದ ಇವರು ಯಾವ ಸೀಮೆಯ ವಿದ್ವಾಂಸರು? 'ಸಕಲ ಜೀವಾತ್ಮರಿಗೆ ಲೇಸ ಬಯಸುವವನೇ ಕುಲಜ'ರೆಂದು ಸಾರಿ ವಿಶ್ವಭ್ರಾತೃತ್ವವೇ ಜೀವಾಳವಾಗಿರುವ ಶರಣ ಸಂಸ್ಕೃತಿಗೆ ಇವರ್‍ಹೇಗೆ ಅದ್ವೈವರಾಗುತ್ತಾರೆ? ಚಿಮೂ ಶರಣ ಸಂಶೋಧಕನೆಂದರೆ ಸಂಗಮನಾಥ ನಗುವನಷ್ಟೇ! ಇಷ್ಟೆಲ್ಲ ಪ್ರವರ ಏಕೆ ಹೇಳಬೇಕಾಯಿತೆಂದರೆ ಮುಂದಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯುವುದೆಂದು ನಿರ್ಧಾರವಾಗಿದೆಯಷ್ಟೇ. ಅದರ ಅಧ್ಯಕ್ಷ ಪದವಿಗೆ ಮೂರ್‍ನಾಲ್ಕು ಹೆಸರುಗಳು ಗಾಳಿಯಲ್ಲಿ ತೇಲಾಡುತ್ತಿವೆ. ಅದರಲ್ಲಿ ಚಿಮೂ ಹೆಸರು ಕೂಡಾ ಒಂದು.

ಇಂಥ ಸಮಾಜ ವಿಮುಖಿ ಸಂಶೋಧಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರೆ ಅದು ಕನ್ನಡ ಸಂಸ್ಕೃತಿಗೆ ಮುಜುಗರವಲ್ಲದೇ, ಸಾಹಿತ್ಯ ಪರಿಷತ್‌ನ ಇತಿಹಾಸದಲ್ಲಿ ಕಪ್ಪು ಚುಕ್ಕೆಯಾಗುತ್ತದೆ.

-ಪ್ರಕಾಶ್ ಬಿಸ್ನಾಗರ, ಬೆಂಗಳೂರು

ಹೊಗಳಿಕೆ ತೆಗಳಿಕೆ

ಅಕ್ಟೋಬರ್ 6, 2010ರ ಸಂಚಿಕೆಯಲ್ಲಿ ಸುಮಾ ಎಂಬಾರ್‌ರವರ ಎರಡು ಮಾತುಗಳಿಗೆ ನನ್ನ ಒಂದು ಮಾತು,

'I disagree with what you say,
But I will fight for your
right to say it'

-ಫ್ರೆಂಚ್ ದಾರ್ಶನಿಕ ವಾಲ್ಟೇರ್

ಚಿಮೂ ವಿಕ ಎಂಬ ಸಮಸ್ಯೆಗಳು..


ಸುಮಾ ಎಂಬಾರ್‌ರವರು ಎತ್ತಿರುವ ಪ್ರಶ್ನೆಗಳು ವಸ್ತು ಸತ್ಯಗಳಾಗಿವೆ. ಅವರ ನಿಲುವಿನಲ್ಲಿ ಪೂರ್ವಾಗ್ರಹಗಳ ವಾಸನೆಯಿಲ್ಲ. ಗ್ರೀಕ್ ದಾರ್ಶನಿಕ ಸಾಕ್ರಟೀಸ್ 'ಆತ್ಮವಿಮರ್ಶೆಯಿಲ್ಲದ ಬಾಳು, ಬಾಳಲು ಯೋಗ್ಯವಲ್ಲ' ಎಂಬ ಅನುಭವದ ಸತ್ಯವನ್ನು ನುಡಿದಿದ್ದಾನೆ. ನಾವು ಯಾವುದೇ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಅವು ಸಾಮಾಜಿಕ ಸಂಬಂಧಗಳನ್ನು ಒಳಗೊಳ್ಳುತ್ತವೆ. ಆದ್ದರಿಂದ ನಮ್ಮ ಅಭಿಪ್ರಾಯಗಳನ್ನು ಸಮಷ್ಟಿ ನೆಲೆಯಲ್ಲಿ ತರ್ಕಿಸುವುದು ಸಮಗ್ರತೆಯ ಸ್ವಾಸ್ಥ್ಯದ ದೃಷ್ಟಿಯಲ್ಲಿ ಒಳಿತು.

ಅಂತರಂಗ-ಬಹಿರಂಗ ಶುದ್ಧಿಗಳೆರಡು ಏಕಕಾಲದಲ್ಲಿ ಆದಾಗ ಸತ್ಯದ ಬೆಳಕು ಗೋಚರಿಸಬಹುದು. ಸುಮಾ ಎಂಬಾರ್‌ರವರು ಈ ನೆಲೆಯಲ್ಲಿಯೇ ಇಸ್ಲಾಂನ ಶ್ರೇಷ್ಠತೆಯ ವ್ಯಸನಗಳು ಮೂಲಭೂತವಾದಿ ನಿಲುವುಗಳು ಮತ್ತು ಮಹಿಳಾ ವಿರೋಧಿ ಪುರುಷ ಪ್ರಧಾನ ನಿಲುವುಗಳನ್ನು ಸಮದರ್ಶಿ ಭಾವದಲ್ಲಿ ಸ್ಪಷ್ಟವಾಗಿ ಪ್ರಶ್ನಿಸಿರುವುದು. ವಿಚಾರವಾದಿ 'ಪೆರಿಯಾರ್‌ರವರು' ಹಿಂದೂಧರ್ಮದಲ್ಲಿ ಜಾತಿಪದ್ಧ... ಸುಧಾರಣೆಯಾಗಬೇಕು, ಇಸ್ಲಾಂನಲ್ಲಿ ಲಿಂಗತಾರತಮ್ಯ... ಸುಧಾರಿಸಬೇಕು?' ಎಂದು ಅಭಿಪ್ರಾಯಪಡುತ್ತಾರೆ...

ಮೂಲಭೂತವಾದಕ್ಕೂ, ಮೂಲಭೂತ ಪ್ರಶ್ನೆಗ... ವ್ಯತ್ಯಾಸವಿದೆ. ಮೌಲ್ಯಗಳಿಗೆ ಯಾವುದೇ ರೀತಿಯ ಕಟ್ಟು... ಪಾಡುಗಳಿಲ್ಲ. ಅವುಗಳು ಯಾವುದೇ ಸಮುದಾಯದ... ಲ್ಲಾಗಲಿ ಅಪಮೌಲ್ಯಕ್ಕೆ ಒಳಪಟ್ಟರೆ, ಅವನ್ನು ಪ್ರಶ್ನಿಸುವುದು... ನಾಗರಿಕ ಹಕ್ಕು ಎಂಬುದರಲ್ಲಿ ಎರಡು ಮಾತಿಲ್ಲ.

ಸತ್ಯ ಅಪ್ರಿಯವಾದರೂ, ಸದಾಶಯ ಅರ್ಥವಾ... ಬೇಕಲ್ಲವೇ? ಸತ್ಯದ ಎರಡು ಮುಖಗಳನ್ನು ನೇ... ಮಾತುಗಳಲ್ಲಿ ಎಂಬಾರ್‌ರವರು ಹೇಳಿದ್ದಾರೆ. ಸಮಾನತೆ... ನೆಲೆಯಲ್ಲಿ ನಾಗರಿಕತೆ ನಮ್ಮೆಲ್ಲರ ಆಶಯವಾಗಿರುವು... ರಿಂದ, ಎಲ್ಲಾ ಸಮುದಾಯಗಳ ಜೀವನ ವಿರೋಧಿಭಾ... ಗಳನ್ನು ದಿಟ್ಟವಾಗಿ ವಿರೋಧಿಸಬೇಕು. ತೆರೆದ ಮನಸ್ಸಿ... ಮಾತ್ರ ಅನುಭವದ ಮತ್ತು ಅರಿವಿನ ಭಾಷೆ ಅರ್ಥವಾ... ವುದು ಅಲ್ಲವೇ?

-ವಿದ್ಯಾಧರ ರೈ ಎಂ.ಆರ್., ಮಡಿಕೇ...



ಮಧ್ಯದಲ್ಲೇ ಮರೆಯಾದ ಮಯೂರ್

...ಪ್ಪಾದಾ ಎಂಬಿಬಿಎಸ್' ಸಿನಿಮಾದಲ್ಲಿ ಯಾವುದೇ ...ಗಳಿಲ್ಲದ, ನೂರಾರು ಕನಸುಗಳನ್ನು ಹೊತ್ತಿರುವ ...ಬ್ಬ ಬದುಕುವ ಅದಮ್ಯ ಆಸೆಯನ್ನು ಹೊಂದಿ ...ರ್ ರೋಗಕ್ಕೆ ತುತ್ತಾಗಿ ಜೀವ ತೊರೆಯುತ್ತಾನೆ... ...ತವೆಂದರೆ ಯಾವ ಹುಡುಗ ಆ ಚಿತ್ರದಲ್ಲಿ ... ಪಾತ್ರದಲ್ಲಿ ನಟಿಸಿದ್ದನೋ ಅದೇ ಹುಡುಗ ... ಜೀವನದಲ್ಲಿ ಅತಿಯಾದ ಚಟಗಳಿಗೆ ಬಿದ್ದು ...ಕ್ಕೆ ತುತ್ತಾಗಿ ಪ್ರಾಣ ತ್ಯಜಿಸಿದ್ದಾನೆ.

... ಮೇಲೆ ಸದಾ ಲವಲವಿಕೆಯಿಂದ ಕಾಣಿಸಿಕೊಳ್ಳು ...ನ್ ಮಯೂರ್ ಇಷ್ಟು ಸಣ್ಣ ವಯಸ್ಸಿಗೇ, ...ರಭ್ಯಾಸ ಮತ್ತು ಆರೋಗ್ಯದ ಬಗೆಗಿನ ಬೇಜವಾ...ದ ಕಣ್ಮುಚ್ಚಿದ್ದಾನೆ ಎಂದರೆ ಹೇಗೆ ತಾನೆ ನಂಬಲು

...ಯೂರ್ 1995ರ ಹೊತ್ತಿಗೆ ಕಾಲೇಜಿನಲ್ಲಿದ್ದಾಗಲೇ ...ಸಿನಿಮಾಗಳಲ್ಲಿ ಅಭಿರುಚಿ ಬೆಳೆಸಿಕೊಂಡವನು. ... ಶಾಲೆ, ನ್ಯಾಷನಲ್ ಕಾಲೇಜುಗಳಲ್ಲಿ ಓದಿ, ...ಬಿಎಂ ಪದವಿ ಕೂಡ ಪಡೆದಿದ್ದ ಈತ ಫ್ಯಾಷನ್ ...ಸಾದ್ ಬಿದ್ದಪ್ಪನ ಗರಡಿ ಸೇರಿ ಮಾಡೆಲಿಂಗ್ ...ಡಿದ್ದ. ನೋಡಲು ಮುದ್ದುಮುದ್ದಾಗಿದ್ದ ನವೀನ್ ... 'ಮಿಸ್ಟರ್ ಗ್ರೇವಿಯರ್ ಇಂಡಿಯಾ' ಎಂಬ ...ಡೆದಿದ್ದ. ಆದರೆ ಆಗ ಆತ ಅಂಡರ್ ಏಜ್ ...ರಣಕ್ಕೆ ಆತನನ್ನು ವಾಪಸ್ ಕಳಿಸಿಬಿಟ್ಟಿದ್ದರು.


... ಫ್ಯಾಷನ್, ಮಾಡೆಲಿಂಗ್ ಅನ್ನು ತೊರೆದು ...ತ್ತ ವಾಲಿದ ನವೀನ್‌ಗೆ ಮೇಲಿಂದ ಮೇಲೆ ...ಳು ಸಿಗುತ್ತಾ ಬಂದವು. ಸುದೀಪ್ ಮೊದಲ ...ಯಕನಾಗಿ ನಟಿಸಿದ 'ಸ್ಪರ್ಶ' ಚಿತ್ರದಲ್ಲಿ ನಿರ್ದೇಶಕ ...ಮಾರ್ ದೇಸಾಯಿ ನವೀನ್‌ಗೆ ಒಂದು ಚಿಕ್ಕದಾದ ...ನ್ನು ನೀಡಿದ್ದರು. ಆನಂತರ ನವೀನ್ ಮಯೂರ್‌ಗೆ ಪೂರ್ಣ ಪ್ರಮಾಣದ ಹೀರೋ ಆಗಿ ಒಂದಷ್ಟು ಸಿನಿಮಾಗಳಲ್ಲಿ ನಟಿಸುವ ಅವಕಾಶಗಳೂ ದೊರೆತವು.ಲವ್‌ಲವಿಕೆ, ಪ್ರೀತಿ ಮಾಡೋ ಹುಡುಗರಿಗೆಲ್ಲಾ, ಅವನಂದ್ರೆ ಅವನೇ, ಹಲೋ ಮುಂತಾದ ಚಿತ್ರಗಳಲ್ಲಿ ನವೀನ್ ಹೀರೋ ಆಗಿ ನಟಿಸಿದ. ಆದರೆ ಆತ ಆ ಹೊತ್ತಿನಲ್ಲಿ ಸುದೀಪ್ ಮತ್ತು ದರ್ಶನ್ ಪ್ರವರ್ಧಮಾನಕ್ಕೆ ಬಂದರೂ ನವೀನ್ ನಟಿಸಿದ ಯಾವ ಚಿತ್ರವೂ ಗಟ್ಟಿಯಾಗಿ ನಿಲ್ಲಲಿಲ್ಲ, ಅಷ್ಟೇ ಅಲ್ಲ, ಈತ ನಟಿಸಿದ ಎಷ್ಟೋ ಚಿತ್ರಗಳೂ ಬಿಡುಗಡೆಯ ಭಾಗ್ಯವನ್ನೂ ಕಾಣಲಿಲ್ಲ,

ನಿಜಕ್ಕೂ ಈ ಯುವಕ ಬೇಸರಕ್ಕೆ ಬಿದ್ದಿದ್ದೇ ಆಗ. ಆತನೊಟ್ಟಿಗೆ ಚಿತ್ರರಂಗಕ್ಕೆ ಬಂದ, ಆತನಷ್ಟೂ ಪ್ರತಿಭೆಯಿಲ್ಲದ, ಆತನಂತೆ ಚೆಂದವಿಲ್ಲದ ಬಹಳಷ್ಟು ಹುಡುಗರು ಸ್ಟಾರ್‌ಗಳಾಗಿಬಿಟ್ಟರು. ಆದರೆ ನವೀನ್ ಮಾತ್ರ ನಿಂತ ನೀರಿನಂತಾಗಿಹೋದ. ಈತ ದರ್ಶನ್ ಜೊತೆ ನಟಿಸಿದ 'ನಿನಗೋಸ್ಕರ' ಚಿತ್ರ ಕೂಡಾ ಬಾಕ್ಸಾಫೀಸ್‌ನಲ್ಲಿ ನೆಲಕಚ್ಚಿತು. ಇದ್ದುದರಲ್ಲೇ, ನವೀನ್ ಮಯೂರ್‌ಗೆ ಸಿಕ್ಕ ಉತ್ತಮ ಪಾತ್ರಗಳೆಂದರೆ 'ಸ್ಪರ್ಶ', ನಾಗಾಭರಣ ನಿರ್ದೇಶನ 'ನೀಲಾ' ಮತ್ತು 'ಎಡಕಲ್ಲುಗುಡ್ಡ' ಖ್ಯಾತಿಯ ಚಂದ್ರಶೇಖರ್ ಅಮೆರಿಕದಲ್ಲೇ ನಿರ್ಮಿಸಿದ 'ಪೂರ್ವಾಪರ' ಚಿತ್ರಗಳಲ್ಲಿ ಮಾತ್ರ. ಕಡೆಕಡೆಗೆ ಅವಕಾಶಗಳಿಲ್ಲದೆ 'ನನ್ ಹೆಂಡ್ತಿ ಕೊಲೆ' ಎಂಬ ಕೊಳಕು ಚಿತ್ರವನ್ನೂ ನವೀನ್ ಒಪ್ಪಿ ನಟಿಸಬೇಕಾಗಿ ಬಂತು.



ನವೀನ್ ಮಯೂರ್ ಚಿತ್ರರಂಗದಲ್ಲಿ ತಗ್ಗಿ ಬಗ್ಗಿ ನಡೆದಿದ್ದರೆ ಅವಕಾಶಗಳನ್ನು ಪಡೆಯುವಲ್ಲಿ ಹಿಂದೆ ಬೀಳುತ್ತಿರಲಿಲ್ಲವೇನೋ? ಆದರೆ ತನ್ನ ಕಿರಿಕ್ಕುಗಳಿಂದಲೇ ಫೇಮಸ್ ಆದ ನವೀನ್‌ನನ್ನು ಇಡೀ ಚಿತ್ರರಂಗವೇ ದೂರವಿಟ್ಟಿತು. 'ಸ್ಪರ್ಶ' ಸಮಯದಲ್ಲಿ ಸುದೀಪ್ "ನವೀನ್ ನನ್ನ ಫ್ರೆಂಡು. ಇವನಿಗೊಂದು ಛಾನ್ಸು ಕೊಡಿ" ಎಂದು ನಿರ್ದೇಶಕ ದೇಸಾಯಿ ಅವರ ಮೇಲೆ ಇನ್‌ಫ್ಲೂಯೆನ್ಸ್ ಮಾಡಿ ಆತನಿಗೆ ಛಾನ್ಸು ಕೊಡಿಸಿದ್ದರು. ಆದರೆ ಆ ಸಿನಿಮಾ ಬಿಡುಗಡೆ ಆದ ಮೇಲೆ "ಸುದೀಪ್‌ನನ್ನು ಮಾತ್ರ ಮಾಧ್ಯಮದಲ್ಲಿ ಹೊಗಳಿದ್ದಾರೆ. ನನ್ನ ಬಗ್ಗೆ ಬರೆದಿಲ್ಲ" ಎಂದು ನವೀನ್ ಖ್ಯಾತೆ ತೆಗೆದ. ಆನಂತರ ಸುದೀಪ್ ಈತನನ್ನು ದೂರ ಇಟ್ಟರು.

ಆನಂತರ 'ಪ್ರೇಮಾ' ಚಿತ್ರದ ಸಂದರ್ಭದಲ್ಲಿ ಖ್ಯಾತ ಛಾಯಾಗ್ರಾಹಕ ಬಿ.ಸಿ. ಗೌರಿಶಂಕರ್ ಅವರ ಬಳಿ "ನಿಮಗೆ ಶಾಟ್ ಕಂಪೋಸ್ ಮಾಡಲು ಬರುವುದಿಲ್ಲ" ಎಂದುಬಿಟ್ಟಿದ್ದ. ಡಾ. ರಾಜ್ ಅವರ ಚಿತ್ರಗಳಿಂದ ಹಿಡಿದು ನಾಗಾಭರಣ ಅವರ 'ಜನುಮದ ಜೋಡಿ' ತನಕ ನೂರಾರು ಚಿತ್ರಗಳಿಗೆ ಅದ್ಭುತ ಛಾಯಾಗ್ರಹಣ ಮಾಡಿದ್ದ ಗೌರಿಶಂಕರ್ ಬಗ್ಗೆ ನವೀನ್ ಹೀಗೆಲ್ಲಾ ಮಾತಾಡಿದ್ದು ಎಲ್ಲರಲ್ಲೂ ಈತನ ಬಗ್ಗೆ ಅಸಮಾಧಾನ ಹುಟ್ಟಲು ಕಾರಣವಾಯಿತು.




ಇನ್ನು ತಾವಾಯಿತು ತಮ್ಮ ಕೆಲಸವಾಯಿತು ಎಂಬಂತೆ ಕೆಲಸ ಮಾಡುವ ನೃತ್ಯ ನಿರ್ದೇಶಕರಾದ ಮದನ್-ಹರಿಣಿ ಅವರೊಂದಿಗೂ ಈತ ಉಡಾಫೆ ತೋರಿದ್ದ, ಒಮ್ಮೆ ಸಕಲೇಶಪುರದಲ್ಲಿ ಚಿತ್ರೀಕರಣ ನಡೆಯುತ್ತಿದ್ದಾಗ "ಏನು ನೀವಿಬ್ಬರೂ ಬರೀ ಕ್ಲೋಸ್‌ಅಪ್ ಶಾಟ್ ಇಟ್ಟು ಡ್ಯಾನ್ಸ್ ಮಾಡಿಸ್ತೀರ. ಇದೇನು ಸೆಕ್ಸ್ ಸಿನೆಮಾನಾ?" ಎಂದು ತಲೆಕೆಟ್ಟವನಂತೆ ಮದನ್-ಹರಿಣಿ ಅವರ ಬಗ್ಗೆ ಮಾತಾಡಿದ್ದ, ಅದನ್ನು ಕೇಳಿ ಮನನೊಂದ ಹರಿಣಿ ಅಂದು ಕಣ್ಣೀರಿಟ್ಟಿದ್ದರು. 'ಹಲೋ' ಚಿತ್ರದ ಸಂದರ್ಭದಲ್ಲೂ ನಿರ್ದೇಶಕ ಕೂಡ್ಲು ರಾಮಕೃಷ್ಣರ ಜೊತೆಗೂ ಕಿತ್ತಾಡಿಕೊಂಡಿದ್ದ... ಒಟ್ಟಾರೆಯಾಗಿ ನವೀನ್ ಮಯೂರ್ ನಟಿಸಿದ ಸಿನಿಮಾಕ್ಕಿಂತ ಆತ ಸೃಷ್ಟಿಸಿಕೊಂಡ ಗದ್ದಲವೇ ಹೆಚ್ಚು,

ಇಂತಹ ಹತ್ತಾರು ರಗಳೆಗಳ ನಡುವೆಯೂ ಒಂದಿಷ್ಟು ಹೆಸರು ಮಾಡಿದ್ದ ನವೀನ್ ತನ್ನ ಉಡಾಫೆಯ ಪರಿಣಾಮದಿಂದಾಗಿ ಆಮೇಲೆ ಅವಕಾಶಗಳಿಲ್ಲದೇ ಕೊರಗುವ ಸಂದಿಗ್ಧ ಪರಿಸ್ಥಿತಿ ಎದುರಿಸುವಂತಾಗಿತ್ತು, ಈ ಸಂದರ್ಭದಲ್ಲೇ ನವೀನ್ ಅತಿಯಾಗಿ ಕುಡಿತಕ್ಕೆ ಶರಣಾದ. ಒಂದರ ಹಿಂದೆ ಒಂದು ಸಿಗರೇಟಿಗೆ ಬೆಂಕಿ ಕೊಡುತ್ತಾ ಚೈನ್ ಸ್ಮೋಕರ್ ಎನಿಸಿಕೊಂಡುಬಿಟ್ಟ. ಈ ಹಿಂದೆ ನೋಡಲು ಆಕರ್ಷಕವಾಗಿದ್ದ ನವೀನ್ ಇಂತಹ ದುರಭ್ಯಾಸಗಳಿಂದಾಗಿ ಕೆಲವೇ ವರ್ಷಗಳಲ್ಲಿ ಕಳಾಹೀನವಾಗಿಹೋದ. ಯಾವ ಮಟ್ಟಿಗೆ ಅಂದರೆ, ಆತ ಎದುರು ಬಂದರೂ ಈತನೇ ನವೀನ್ ಮಯೂರ್ ಎಂದು ಗುರುತು ಹಿಡಿಯುವುದೂ ಕಷ್ಟವಾಗಿ ಹೋಗಿತ್ತು, ಸೊಂಪಾಗಿದ್ದ ತಲೆಗೂದಲು ಉದುರಿತ್ತು, ಕಣ್ಣಿನ ಸುತ್ತ ಕಪ್ಪು ಆವರಿಸಿ ಆತನ ಮುಖದಲ್ಲಿ ಅನಾರೋಗ್ಯ ಎದ್ದುಕಾಣುತ್ತಿತ್ತು, ಒಮ್ಮೆ ಟಿವಿ ಚಾನೆಲ್ ಒಂದು ಆತನನ್ನು ರಿಯಾಲಿಟಿ ಶೋವೊಂದರ ನೇತೃತ್ವ ವಹಿಸಲು ಕರೆಸಿತ್ತು, ಆದರೆ ಅಷ್ಟೊತ್ತಿಗಾಗಲೆ ಗುರುತು ಹಿಡಿಯಲೂ ಅಸಾಧ್ಯವಾಗುವಂತೆ ಕ್ಷೀಣಿಸಿದ್ದ ನವೀನ್‌ನನ್ನು ನೋಡಿ ಅವನನ್ನು ವಾಪಸ್ ಕಳುಹಿಸಿತ್ತು,

ಇತ್ತೀಚೆಗೆ ಜಾಂಡೀಸ್ ಪೀಡಿತನಾಗಿದ್ದ ನವೀನ್ ಒಂದು ದಿನಕ್ಕೂ ಪಥ್ಯ ಪಾಲಿಸಲಿಲ್ಲ, ರಾಘವೇಂದ್ರಸ್ವಾಮಿಗಳ ಆರಾಧನೆ ನಡೆದಾಗ ಎನ್‌ಆರ್ ಕಾಲೋನಿಯ ರಾಘವೇಂದ್ರ ಮಠಕ್ಕೆ ಬಂದು ಜಾಂಡೀಸ್ ಅನ್ನು ಮರೆತು ಭರ್ಜರಿ ಊಟಮಾಡಿದ್ದ. ಸಾಯುವುದಕ್ಕೆ ಎರಡು ದಿನಕ್ಕೆ ಮುನ್ನ ಸ್ನೇಹಿತರೊಂದಿಗೆ ಧರ್ಮಸ್ಥಳಕ್ಕೆ ಹೋಗಿಬಂದಿದ್ದ. ಮೊದಲೇ ಇದ್ದ ಜಾಂಡೀಸ್ ಮತ್ತಷ್ಟು ಉಲ್ಬಣಗೊಂಡು ಲಿವರ್ ಡ್ಯಾಮೇಜ್ ಆಗಿ ಇನ್ನೂ ಬದುಕಿಬಾಳಬೇಕಿದ್ದ ಈ ಹುಡುಗ ಇಹಲೋಕವನ್ನೇ ತೊರೆದಿದ್ದಾನೆ....

• ಅರುಣ್ .ಜಿ
arunodayagc@gmail.com

...್ರೇಯಸಿ ಸುತ್ತ ಪ್ರಭುದೇವಾ ನೃತ್ಯ




ಒಂದೆಡೆ ತಾಳಿಕಟ್ಟಿದ ಪತಿಯೇ ಬೇಕು ಎನ್ನುವ ಪತ್ನಿ. ಮತ್ತೊಂದೆಡೆ ತನ್ನ ಸುಖಕ್ಕೆ ಸ್ಪಂದಿಸುವ ಪ್ರೇಯಸಿಯನ್ನು ಮದುವೆಯಾಗುತ್ತೇನೆ ಎಂದು ಹಠ ಹಿಡಿದು ಕುಳಿತಿರುವ ಪತಿ. ಈ ರಂಪಾಟದ ಮಧ್ಯೆ ನರಳಾಡುತ್ತಿರುವ ಮಕ್ಕಳು... ಇದು ಯಾವುದೋ ಸೆಂಟಿಮೆಂಟ್ ಸಿನಿಮಾದ ಕಥೆಯಲ್ಲ,

ಅದು ದಕ್ಷಿಣ ಭಾರತದ ಖ್ಯಾತ ನೃತ್ಯಪಟು, ತಮಿಳು ಹೀರೋ, ಕನ್ನಡದ ಕುಡಿ ಪ್ರಭುದೇವನ ಫ್ಯಾಮಿಲಿ ಪ್ರಾಬ್ಲಮ್ಮು...

1995ರಲ್ಲಿ ಪ್ರಭುದೇವಾ ಲತಾ ಎಂಬ ಹೆಣ್ಣುಮಗಳನ್ನು ಮದುವೆಯಾಗಿದ್ದ, ನಂತರ ಇವರಿಗೆ ಮೂವರು ಮಕ್ಕಳೂ ಆಗಿದ್ದವು. ಪ್ರಭುದೇವಾ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದ, ಕೈತುಂಬ ವರಮಾನವೂ ಇತ್ತು, ಅವರ ಕುಟುಂಬದಲ್ಲಿ ಯಾವ ಸಮಸ್ಯೆಯೂ ಇರಲಿಲ್ಲ,

ಆದರೆ 2008ರಲ್ಲಿ ಪ್ರಭುದೇವ ಮತ್ತು ಲತಾ ದಂಪತಿಯ 12 ವರ್ಷದ ಮಗ ವಿಶಾಲ್ ಕ್ಯಾನ್ಸರ್ ರೋಗಕ್ಕೆ ಈಡಾಗಿ ಸಾವನ್ನಪ್ಪಿದ. ಆ ನಂತರ ಪ್ರಭುದೇವನ ಮನೆಯಲ್ಲಿ ನೆಮ್ಮದಿ ಎಂಬುದು ಇಣುಕಿಯೂ ನೋಡಿಲ್ಲ, ಮಗ ವಿಶಾಲ್ ಅಗಲಿಕೆಯ ಸಂದರ್ಭದಲ್ಲೇ ಪ್ರಭುದೇವಾ 'ವಿಲ್ಲು' ಸಿನಿಮಾವನ್ನು ನಿರ್ದೇಶಿಸಿ ನಟಿಸುತ್ತಿದ್ದ, ಆ ಚಿತ್ರದಲ್ಲಿ ತಮಿಳಿನ ಖ್ಯಾತ ನಟಿ ನಯನ್‌ತಾರಾ ನಾಯಕಿಯಾಗಿ ನಟಿಸಿದ್ದಳು. ಈ ಸಂದರ್ಭದಲ್ಲಿ ಪ್ರಭುದೇವಾ ಮತ್ತು ನಯನತಾರಾ ನಡುವೆ ಹೊಸ ಸಂಬಂಧ ಚಿಗುರೊಡೆಯಿತು. ಮಗ ಸತ್ತ ನೋವಿನಲ್ಲಿದ್ದ ಪ್ರಭುದೇವನನ್ನು ಸಂತೈಸುವ ನೆಪದಲ್ಲಿ ನಯನತಾರ ಆತನಿಗೆ ಮತ್ತಷ್ಟು ಹತ್ತಿರವಾದಳು. ಹೀಗೆ ಗಾಢವಾಗುತ್ತಿದ್ದ ಸಂಬಂಧದ ಬಗ್ಗೆ ಮಾಧ್ಯಮಗಳು ಆಗಿಂದ್ಯಾಗ್ಗೆ ವರದಿ ಮಾಡುತ್ತಿದ್ದವು. ಇದೇ ಸಂದರ್ಭದಲ್ಲಿ ಪ್ರಭು ಮತ್ತು ನಯನ್ ಇಬ್ಬರೂ ಪರಸ್ಪರ ಒಪ್ಪಿ ಮದುವೆಯಾಗುವುದಾಗಿ ಹೇಳಿಕೆಯನ್ನೂ ಕೊಟ್ಟರು. ಇವರಿಬ್ಬರೂ ಮದುವೆಯ ಪ್ರಸ್ತಾಪವನ್ನು ಬಹಿರಂಗಗೊಳಿಸುವ ಮುನ್ನವೇ ಒಂದೇ ಮನೆಯಲ್ಲಿ ಸಂಸಾರವನ್ನೂ ಆರಂಭಿಸಿಬಿಟ್ಟರು. ಪ್ರಭುದೇವ ತನ್ನ ಮನೆಕಡೆ ಕಾಲಿಡುವುದನ್ನೇ ನಿಲ್ಲಿಸಿದ. ತನ್ನ ಪತ್ನಿ, ಮಕ್ಕಳನ್ನೂ ಮರೆತ.

"ನಾನು ನನ್ನ ಪತ್ನಿಗೆ ಮೂರು ಕೋಟಿ ರೂಪಾಯಿ ನಗದು ಮತ್ತು 180 ಸವರನ್ ಚಿನ್ನ ಕೊಡುತ್ತೇನೆ. ಆಕೆ ನನ್ನಿಂದ ವಿಚ್ಛೇದನ ಪಡೆಯಲಿ" ಎಂದಿದ್ದ ಪ್ರಭುದೇವ. ಆದರೆ ಆತನ ಪತ್ನಿ ವಿಚ್ಛೇದನವನ್ನು ಪಡೆದಿರಲಿಲ್ಲ, ಈ ಮಧ್ಯೆ ಕಳೆದ ಒಂದು ವರ್ಷದಿಂದ ಪ್ರಭುದೇವ ಮತ್ತು ನಯನ್‌ರ ಮದುವೆ ದಿನಾಂಕ ಮುಂದೂಡುತ್ತಲೇ ಹೋಯಿತು. ಈಗ ಅಂತಿಮವಾಗಿ ಬರುವ ಡಿಸೆಂಬರ್ ತಿಂಗಳಲ್ಲಿ ನಯನ್‌ಳನ್ನು ಮದುವೆ ಆಗುವುದಾಗಿ ಪ್ರಭುದೇವ ಹೇಳಿದ್ದಾನೆ.



ಇದರ ಬೆನ್ನಿಗೇ ಪ್ರಭುದೇವನ ಪತ್ನಿ ಲತಾ "ನನ್ನ ಗಂಡ ನನಗೇ ಬೇಕು. ಯಾವುದೇ ಕಾರಣಕ್ಕೂ ನಾನು ಆತನಿಂದ ವಿಚ್ಛೇದನ ಪಡೆಯುವುದಿಲ್ಲ, ಆತ ನನ್ನಿಂದ ದೂರವಾಗಿ ಹೊಸ ಜೀವನ ಆರಂಭಿಸಬಹುದು, ಆದರೆ ನನ್ನಿಂದ ಅದು ಸಾಧ್ಯವಿಲ್ಲ, ನಾನು ಗಂಡನಿಂದ ದೂರವಾದರೆ ನನ್ನ ಮಕ್ಕಳು ತಂದೆಯ ಆಸರೆ, ಪ್ರೀತಿಯಿಂದ ವಂಚಿತರಾಗುತ್ತಾರೆ. ಪ್ರಭುದೇವಾ ನಯನತಾರಾಳನ್ನು ಮದುವೆಯಾಗಲು ನಾನು ಬಿಡುವುದಿಲ್ಲ, ಮಾತ್ರವಲ್ಲ ಅವರಿಬ್ಬರೂ ಸಾರ್ವಜನಿಕ ಸಭೆಗಳಲ್ಲಿ ಒಟ್ಟಿಗೆ ಭಾಗವಹಿಸಬಾರದು' ಎಂದು ಹಲವಾರು ಮಹಿಳಾ ಸಂಘಟನೆಗಳ ಬೆಂಬಲದೊಂದಿಗೆ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದಾಳೆ. "ಒಂದು ವೇಳೆ ನನ್ನ ಪತಿ ನನ್ನ ಒತ್ತಾಯಗಳಿಗೆ ಸ್ಪಂದಿಸದ್ದರೆ ನಾನು ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತೇನೆ" ಎಂದೂ ಆಕೆ ಈಗ ಎಚ್ಚರಿಸಿದ್ದಾಳೆ.

ಎರಡು ವಾರಗಳ ಮುನ್ನ ನಡೆದ ಸೌತ್‌ಸ್ಕೋಪ್ ಸಿನಿ ಅವಾರ್ಡ್ ಸಮಾರಂಭದಲ್ಲಿ ಅಲ್ಲಿನ ಅವಿವೇಕಿ ನಿರೂಪಕರು ಪ್ರಭುದೇವಾ ಮತ್ತು ನಯನ್‌ತಾರಾಳನ್ನು 'ಆದರ್ಶ ದಂಪತಿಗಳು' ಎಂದಿದ್ದರು. ಪತ್ನಿ, ಮಕ್ಕಳನ್ನು ತೊರೆದು ಪ್ರೇಯಸಿಯೊಂದಿಗಿರುವ ಪ್ರಭುದೇವನನ್ನು 'ಆದರ್ಶ'ನನ್ನಾಗಿಸಿದ ಸೌತ್‌ಸ್ಕೋಪ್‌ಗೆ ಲತಾ ಈಗ ಉಗಿದು ಉಪ್ಪಾಕಿದ್ದಾಳೆ.

ಪ್ರಭುದೇವ ಮತ್ತು ಲತಾ ಈ ಎಲ್ಲ ಜಂಜಾಟಗಳಿಂದ ಆದಷ್ಟು ಬೇಗ ಹೊರಬಂದು ಎಲ್ಲರೂ ನೆಮ್ಮದಿಯ ಜೀವನ ನಡೆಸುವಂತೆ ನೋಡಿಕೊಳ್ಳಬೇಕಿದೆ. ಹಾಗೆ ಮಾಡುವುದು ಅವರಿಬ್ಬರಿಗೂ ಮುಖ್ಯ ಅದಕ್ಕಿಂತ ಅವರ ಮಕ್ಕಳ ದೃಷ್ಟಿಯಲ್ಲೂ ಮುಖ್ಯ. ●

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 20-10-2010 RNI No. KARKAN200

ಗೆಲುವು ಯಾರಿಗೆ?

ಸ್ಟಾರ್ ವಾರ್

ಅಕ್ಟೋಬರ್ 15 ರಿಂದ ಕನ್ನಡ ಚಿತ್ರಗಳ ಸುಗ್ಗಿ ಆರಂಭವಾಗಲಿದೆ. ಅಂದರೆ ಪ್ರತಿವಾರ ಸಾಲುಸಾಲಾಗಿ ಭಾರಿ ನಿರೀಕ್ಷೆಯ ದೊಡ್ಡ ದೊಡ್ಡ ಚಿತ್ರಗಳು ಬಿಡುಗಡೆಯಾಗಲಿವೆ. ಒಂದು ರೀತಿಯಲ್ಲಿ ಇದು ಕನ್ನಡ ಚಿತ್ರಗಳ ಅತಿವೃಷ್ಟಿ. ಪರಿಣಾಮವಾಗಿ ಕನ್ನಡ ಚಿತ್ರಗಳಿಗೆ ಕನ್ನಡ ಚಿತ್ರಗಳೇ ಪೈಪೋಟಿ ನೀಡುವುದಂತೂ ಗ್ಯಾರಂಟಿ. ಈ ಗಲಾಟೆಯಲ್ಲಿ ಯಾವ ನಿರ್ಮಾಪಕ ಮನೆ ಮಠ ಕಳೆದುಕೊಳ್ಳುತ್ತಾನೆ, ಯಾವ ನಿರ್ಮಾಪಕ ಹಣಗಳಿಸುತ್ತಾನೋ ಎಂದು ಈಗಲೇ ಹೇಳುವುದು ಕಷ್ಟ.



ದಸರಾ ಹಬ್ಬದ ಸಂದರ್ಭದಲ್ಲಿ ಆರಂಭವಾಗುವ ಈ "ಕನ್ನಡ ಚಿತ್ರಗಳ ಸುಗ್ಗಿ" ಮುಂದಿನ ಎರಡು ತಿಂಗಳ ಕಾಲ ಅವ್ಯಾಹತವಾಗಿ ನಡೆಯಲಿದೆ. ಈ ಸುಗ್ಗಿಗೆ ನಾಂದಿಹಾಕುತ್ತಿರುವವರು ಪುನೀತ್ ರಾಜ್‌ಕುಮಾರ್. ಇವರ ನಟನೆಯ, ಸೂರಿ ನಿರ್ದೇಶನದ 'ಜಾಕಿ' ಚಿತ್ರ ಇದೇ ಅಕ್ಟೋಬರ್ 15 ರಂದು ತೆರೆಕಾಣಲಿದೆ.

'ಜಾಕಿ' ಚಿತ್ರದ ಬಗ್ಗೆ ಒಂದೆರಡು ಮಾತುಗಳಲ್ಲಿ ಹೇಳುವುದಾದರೆ ಇದು ರಾಜ್‌ಕುಮಾರ್ ಅವರ ವಜ್ರೇಶ್ವರಿ ಕಂಬೈನ್ಸ್ ಸಂಸ್ಥೆಯ ಇತಿಹಾಸದಲ್ಲೇ ಅತ್ಯಂತ ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಚಿತ್ರ. ಈ ಚಿತ್ರ ಮೂರು ವಾರಗಳ ಹಿಂದೆಯೇ ಬಿಡುಗಡೆಯಾಗಬೇಕಾಗಿತ್ತು, ಆದರೆ ತಮಿಳಿನ ಸೂಪರ್‌ಸ್ಟಾರ್ ರಜನೀಕಾಂತ್ ನಟಿಸಿದ 'ಯಂದಿರನ್'ನ ದಾಳಿಗೆ ಹೆದರಿ 'ಜಾಕಿ' ಬಿಡುಗಡೆಯನ್ನು ಮುಂದಕ್ಕೆ ಹಾಕಲಾಯಿತು. ಆದರೆ ಇದೇ 'ಜಾಕಿ' ಚಿತ್ರದ ದಾಳಿಗೆ ಹೆದರಿ ಇತರೆ ಕನ್ನಡ ಚಿತ್ರಗಳ ನಿರ್ಮಾಪಕರು ತಮ್ಮ ಚಿತ್ರಗಳ ಬಿಡುಗಡೆಯನ್ನು ಮುಂದೆ ಹಾಕಿದ್ದರು!

ಅಕ್ಟೋಬರ್ 15 ರಂದು 'ಜಾಕಿ' ತೆರೆಕಂಡ ನಂತರ ಅದರ ಫಲಿತಾಂಶವನ್ನು ನೋಡಿ ಇತರೆ ನಿರ್ಮಾಪಕರು ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಲು ಕಾದು ಕುಳಿತಿದ್ದಾರೆ. 'ಜಾಕಿ' ಬಾಕ್ಸ್‌ಆಫೀಸ್‌ನಲ್ಲಿ ಗೆಲ್ಲುತ್ತೋ ಅಥವಾ ಸೋಲುತ್ತೋ ಎಂಬುದು ಬೇರೆ ವಿಷಯ. ಆದರೆ 'ಜಾಕಿ' ಬೆನ್ನಲ್ಲೆ ಕನಿಷ್ಠ 10 ದೊಡ್ಡ ಚಿತ್ರಗಳು 'ಮೆರವಣಿಗೆ' ಮಾಡಲು ತಯಾರಾಗಿವೆ.

'ಜಾಕಿ'ಯ ನಂತರ ಬಿಡುಗಡೆಗಾಗಿ ಕಿಚ್ಚ ಸುದೀಪ್ ಕಾಯುತ್ತಾ ಕುಳಿತಿದ್ದಾರೆ. ಸುದೀಪ್ ಮತ್ತು ರಮ್ಯ ಜೊತೆಯಾಗಿ ನಟಿಸಿರುವ 'ಕಿಚ್ಚ ಹುಚ್ಚ' ಚಿತ್ರದ ಬಗ್ಗೆ ಉದ್ಯಮದಲ್ಲಿ ಬಹಳ ಒಳ್ಳೆಯ ಮಾತಿದೆ. ಅಷ್ಟೇ ಅಲ್ಲ, ಸುದೀಪ್ ನಟಿಸಿರುವ ಚಿತ್ರ ಬಿಡುಗಡೆಗೊಂಡು ಬಹಳ ಸಮಯವಾಗಿರುವುದರಿಂದ ಆತನ ಅಭಿಮಾನಿಗಳು ಇದಕ್ಕಾಗಿ ಕಾದು ಕುಳಿತುಕೊಂಡಿದ್ದಾರೆ.

ಇಲ್ಲೊಂದು ವಿಶೇಷತೆ ನೋಡಿ. ಪುನೀತ್ ರಾಜ್‌ಕುಮಾರ್ ನಟನೆಯ 'ಜಾಕಿ' ಚಿತ್ರದ ಎದುರಿಗೆ ಅವರ ಸಹೋದರ ಶಿವರಾಜ್‌ಕುಮಾರ್ ನಟಿಸಿರುವ 'ಮೈಲಾರಿ' ಚಿತ್ರ ಕೂಡ ಬಿಡುಗಡೆಯಾಗುವ ಸಾಧ್ಯತೆ ಇದೆ. ಅಂದರೆ ಬಾಕ್ಸ್ ಆಫೀಸ್‌ನಲ್ಲಿ ಸಹೋದರರ ಸವಾಲ್ ನಡೆಯಲಿದೆ.

ಈ ಮಧ್ಯೆ ಈಗಾಗಲೇ ಡಬ್ಬಿಂಗ್ ಮತ್ತು ಇನ್ನಿತರ ಕೆಲಸಗಳಲ್ಲಿ ನಿರತರಾಗಿರುವ ಉಪೇಂದ್ರ ಕೂಡ ಏನೇ ಆದರೂ ದೀಪಾವಳಿ ಸಂದರ್ಭದಲ್ಲಿ ತನ್ನ ನಿರ್ದೇಶನದ 'ಸೂಪರ್' ಚಿತ್ರವನ್ನು ಬಿಡುಗಡೆ ಮಾಡಲೇಬೇಕೆಂದು ಹಟ ಹಿಡಿದಿದ್ದಾರಂತೆ. ಸುಮಾರು ಹತ್ತು ವರ್ಷಗಳ ನಂತರ ಉಪ್ಪಿ ನಿರ್ದೇಶನದ ಜವಾಬ್ದಾರಿ ವಹಿಸಿಕೊಂಡಿರುವುದರಿಂದ ಈ ಚಿತ್ರದ ಬಗ್ಗೆ ಕೂಡ ಗಾಂಧಿನಗರದ ಮಂದಿ ತರು ಭಾರಿ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಉಪ್ಪಿ ಕೂಡ ತನ್ನ ಅಭಿಮಾನಿಗಳನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ಸಿನಿಮಾವನ್ನು ಅತ್ಯಂತ ರಂಜನೀಯವಾಗಿ ನಿರ್ದೇಶಿಸಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ.

ಈ ಹಳಬರ ದರ್ಬಾರಿನ ನಡುವೆ ಹೊಸ ಹುಡುಗರು ಕೂಡ ಅಖಾಡಕ್ಕೆ ಇಳಿಯಲು ಸಜ್ಜಾಗಿದ್ದಾರೆ. ಮುಖ್ಯವಾಗಿ ಇಂದ್ರಜಿತ್ ಲಂಕೇಶ್ ನಿರ್ದೇಶನದ 'ಹುಡುಗ ಹುಡುಗಿ' ಚಿತ್ರದ ಬಗ್ಗೆ ಒಳ್ಳೆಯ ಓಪೀನಿ[...] ಇದೆ. ಧ್ಯಾನ್ ಈ ಚಿತ್ರದ ನಾಯಕನಾದರೂ ಆತನ ಜೊತೆಗೆ ಬ[...] ಜನ ಗ್ಲಾಮರಸ್ ನಾಯಕಿಯರೂ ಇದ್ದಾರೆ. ಹೀಗಾಗಿ ಈ ಚಿ[...] ಬಗ್ಗೆ ಯುವಜನಾಂಗ ದೊಡ್ಡ ನಿರೀಕ್ಷೆ ಇಟ್ಟುಕೊಂಡಿದೆ.

ಈ ಚಿತ್ರದ ಜೊತೆಜೊತೆಗೆ ರಾಧಿಕಾ ಪಂಡಿತ್ ನಟಿಸಿ[...] 'ಗಾನಾಭಜಾನ' ಚಿತ್ರ ಕೂಡ ತೆರೆಕಾಣುವ ಸುದ್ದಿ ಕೇಳಿಬರು[...] ಈ ಹಿಂದೆ ರಾಧಿಕಾ ಪಂಡಿತ್ ಮತ್ತು ತರುಣ್ ಜೋಡಿಯ [...] 'ಲವ್ ಗುರು' ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿದ್ದರಿಂದ ಇದೇ ಜೊ[...] ಮತ್ತೆ ತೆರೆಯ ಮೇಲೆ ಮ್ಯಾಜಿಕ್ ಮಾಡಬಹುದು ಎಂಬ ಮಾ[...] ಚಾಲ್ತಿಯಲ್ಲಿ ಇದೆ. ಯುವ ಜನಾಂಗ ಕಾತುರದಿಂದ ಎದು[...] ನೋಡುತ್ತಿರುವ ಮತ್ತೊಂದು ಚಿತ್ರವೆಂದರೆ ಚಿರಂಜೀವಿ ಸ[...] ನಟಿಸಿರುವ 'ಚಿರು' ಚಿತ್ರ.

ಇನ್ನು ಸುದೀಪ್ ಮತ್ತು ಅಂಬರೀಶ್ ನಟಿಸಿರುವ 'ವೀ[...] ಪರಂಪರೆ' ಚಿತ್ರ ಮುಂದಿನ ತಿಂಗಳು ತೆರೆಕಾಣುವುದು ಗ್ಯಾರಂ[...] ನಿರ್ದೇಶಕ ಎಸ್. ನಾರಾಯಣ ಈ ಚಿತ್ರದ ಬಗ್ಗೆ ಭಾರಿ ನಿರೀ[...] ಇಟ್ಟು ತನು-ಮನ-ಧನವನ್ನು ಈ ಚಿತ್ರಕ್ಕಾಗಿ ಮುಡುಪಿಟ್ಟಿದ್ದಾ[...] ಹೀಗಾಗಿ 'ವೀರ ಪರಂಪರೆ' ಚಿತ್ರ ಕೂಡ ಯಾವುದೇ ಚಿತ್ರಕ[...] ಪೈಪೋಟಿ ನೀಡುವಷ್ಟು ಶಕ್ತವಾಗಿದೆ.

ಈ ಮಧ್ಯೆ ಲೂಸ್ ಮಾದ ಯಾನೆ ಯೋಗೀಶ್ ನಟಿಸಿರು[...] ಎರಡು ದೊಡ್ಡ ಚಿತ್ರಗಳು ತೆರೆಕಾಣಲು ತಯಾರಾಗಿವೆ. ಅದರಲ್[...] ಅವರದೇ ನಿರ್ಮಾಣದ 'ಯಕ್ಷ' ಚಿತ್ರದ ಬಗ್ಗೆ ವಿಶೇಷವಾದ ಮಾತ[...] ಕೇಳಿಬಂದಿದೆ. ಈ ಚಿತ್ರದಲ್ಲಿ ಮೊದಲ ಭಾರಿಗೆ ಹಿಂದಿಯ ಖ್ಯಾತ ನ[...] ನಾನಾ ಪಾಟೇಕರ್ ನಟಿಸಿರುವುದರಿಂದ ಸಹಜವಾಗಿ ಈ ಚಿತ್ರವನ್ನು ಯೋಗಿ[...] ಅಭಿಮಾನಿಗಳು ಕಾತರದಿಂದ ಎದುರು ನೋಡುತ್ತಿದ್ದಾರೆ. ಯೋಗಿ ನಟಿಸಿರು[...] ಮತ್ತೊಂದು ಚಿತ್ರ 'ಧೂಳ್' ಕೂಡ ಬಿಡುಗಡೆಗೆ ಸಿದ್ಧವಾಗಿದೆ. ಅಂದ[...] ಯೋಗಿ ಚಿತ್ರಕ್ಕೆ ಯೋಗಿ ಚಿತ್ರವೇ ಪೈಪೋಟಿ ನೀಡಲಿದೆ.

ದರ್ಶನ್ ನಟಿಸಿರುವ ಕಳೆದ 2-3 ಚಿತ್ರಗಳು ಬಾಕ್ಸ್ ಆಫೀಸ್‌ನ[...] ಮುಗ್ಗರಿಸಿದ್ದರೂ ಆತ ಅಭಿನಯಿಸಿರುವ 'ಬಾಸ್' ಚಿತ್ರ ಆತನ ಈ ಹಿಂದಿ[...] ಚಿತ್ರಗಳಿಗಿಂತ ಹೆಚ್ಚು ಅಭಿಮಾನಿಗಳನ್ನು ಆಕರ್ಷಿಸಲಿದೆ ಎಂಬುದ[...] ಉದ್ಯಮದವರ ಮಾತು. ಹೀಗಾಗಿ ಈ ಚಿತ್ರ ದರ್ಶನ್ ವೃತ್ತಿಜೀವನ[...] ದೃಷ್ಟಿಯಿಂದ ಬಹಳ ಮುಖ್ಯವಾಗಿದೆ.

ಇಷ್ಟು ದೊಡ್ಡ ದೊಡ್ಡ ಚಿತ್ರಗಳ ನಡುವೆ ಗೋಲ್ಡನ್ ಸ್ಟಾರ್ ಗಣೇ[...] ನಟಿಸಿರುವ 'ಏನೋ ಒಂಥರಾ' ಚಿತ್ರ ಬಿಡುಗಡೆಗೆ ತಯಾರಾಗಿದೆ. ವಾಸ್ತವವ[...] ಈ ಚಿತ್ರ ಎರಡು ತಿಂಗಳ ಹಿಂದೆಯೇ ಬಿಡುಗಡೆಯಾಗುತ್ತದೆಂದು ಪ್ರಚಾ[...] ಮಾಡಲಾಗಿತ್ತು. ಆದರೆ ನಿರ್ಮಾಪಕ ಚಂದ್ರಶೇಖರ್ ಅವರು ದಿಢೀರ[...] ಅನಾರೋಗ್ಯಕ್ಕೆ ಒಳಗಾಗಿದ್ದರಿಂದ ಈ ಚಿತ್ರದ ಬಿಡುಗಡೆಯನ[...] ಮುಂದೂಡಲಾಯಿತು.

ಹೀಗೆ ಮುಂದಿನ ಎರಡು ತಿಂಗಳ ಕಾಲ ಕನ್ನಡ ಪ್ರೇಕ್ಷಕರಿಗೆ ದೊ[...] ದೊಡ್ಡ ಚಿತ್ರಗಳ ರಸದೌತಣ ಆಗಲಿದೆ. ಈ ದೊಡ್ಡ ಚಿತ್ರಗಳ ನಡುವೆಯ[...] ಅನೇಕ ಸಣ್ಣಪುಟ್ಟ ನಿರ್ಮಾಪಕರು ಕೂಡ ತಮ್ಮ ಚಿತ್ರದ ಬಿಡುಗಡೆಗಾ[...] ಒದ್ದಾಡುತ್ತಿದ್ದಾರೆ. ಒಂದೆಡೆ ಚಿಕ್ಕ ನಿರ್ಮಾಪಕರ ಚಿತ್ರಗಳು ಈ ಪೈಪೋಟಿಯ[...] ಬಿಡುಗಡೆ ಕಾಣುವ ಸಾಧ್ಯತೆಯೇ ಕಡಿಮೆ. ಇನ್ನೊಂದುಕಡೆ ಇಂತ[...] ಪೈಪೋಟಿಯಿಂದಾಗಿ ತಮ್ಮ ಚಿತ್ರಗಳಿಗೆ ಕೋಟ್ಯಾಂತರ ರೂಪಾಯಿ ಬಂಡವಾ[...] ಹೂಡಿರುವ ದೊಡ್ಡ ನಿರ್ಮಾಪಕರೂ ಸಾಕಷ್ಟು ನಷ್ಟ ಅನುಭವಿಸು[...] ಸಾಧ್ಯತೆಯೂ ಇದೆ. ಮತ್ತೊಂದೆಡೆ ಪ್ರೇಕ್ಷಕರಿಗೂ ಯಾವ ಚಿತ್ರ ನೋಡಬೇ[...] ಯಾವಾಗ ನೋಡಬೇಕು ಎಂಬ ಗೊಂದಲ ಉಂಟಾಗುವುದೂ ಶತಸಿ[...]

ಒಟ್ಟಾರೆಯಾಗಿ ಇಂತಹ ಪೈಪೋಟಿಯಿಂದ ಗಾಂಧಿನಗರ ಇನ್ನ[...] ಕೆಟ್ಟು ಹೋಗುತ್ತದೆ. ಇಂತಹ ಅನಾರೋಗ್ಯಕರ ಪೈಪೋಟಿಯನ್ನು ತಡೆಯ[...] ಛೇಂಬರ್ ಯಾಕೆ ಮನಸ್ಸು ಮಾಡುವುದಿಲ್ಲ ಎಂಬುದಷ್ಟೇ ನಮ್ಮ ಪ್ರ[...] ಕನ್ನಡ ಚಿತ್ರರಂಗ ಬೆಳೆಯಬೇಕಾದರೆ ಕನ್ನಡ ಚಿತ್ರಗಳಿಗೆ ಕನ್ನಡ ಚಿತ್ರಗ[...] ಪೈಪೋಟಿ ನೀಡುವ ಈ ಟ್ರೆಂಡನ್ನು ಮಟ್ಟಹಾಕಲೇ ಬೇಕು. ಆದರೆ ಬೆ[...] ಗಂಟೆ ಕಟ್ಟುವವರು ಯಾರು?

• ಶೆ[...]
shenoylankesh@gmail.c[...]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-